8th Standadrd KM Artha Shastrada

by Karnataka Patyapustaka Sangha

Table of Contents

ಕರ್ನಾಟಕ ಸರ್ಕಾರ

ಅರ್ಥಶಾಸ್ತ್ರ ಪಠ್ಯಪುಸ್ತಕ

ಅರ್ಥಶಾಸ್ತ್ರದ ಮೂಲ ಪರಿಕಲ್ಪನೆಗಳು

(2 ಸಂಪುಟಗಳಲ್ಲಿ)

ಎಂಟನೇ ತರಗತಿ

ವಿಶೇಷ ಚೇತನ ವಿದ್ಯಾರ್ಥಿಗಳಿಗಾಗಿ

ಕನ್ನಡ ಮಾಧ್ಯಮ-2016

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)

100 ಅಡಿ ವರ್ತುಲ ರಸ್ತೆ

ಬನಶಂಕರಿ 3ನೇ ಹಂತ

ಬೆಂಗಳೂರು- 560 085

ಮಿತ್ರ ಜ್ಯೋತಿ ಡಿಜಿಟಲ್ ಲೈಬ್ರರಿ

ಮಿತ್ರ ಜ್ಯೋತಿ

ಸಿ. ಎ. ಸೈಟ್ ನಂ. ಪಿ- 22, 18 ನೇ ಅಡ್ಡರಸ್ತೆ, 31 ನೇ ಮುಖ್ಯರಸ್ತೆ,

ಸೆಕ್ಟರ್- 1, ನಿಫ್ಟ್‌ನ ಹಿಂಭಾಗ, ಹೆಚ್. ಎಸ್. ಆರ್. ಲೇಔಟ್,

ಬೆಂಗಳೂರು- 560102

+91 ಕಂಟ್ರಿ ಕೋಡ್: 80 ಸಿಟಿ ಕೋಡ್

ದೂರವಾಣಿ ಸಂಖ್ಯೆ: 22587623/ 22587625

ಈ-ಮೇಲ್: mj.tblibrary@gmail.com

ವೆಬ್ ಸೈಟ್: www.mitrajyothi.org

ಮುನ್ನುಡಿ

ಪ್ರೌಢಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿಶೇಷ ಚೇತನ ವಿದ್ಯಾರ್ಥಿಗಳಿಗಾಗಿ ಈ ಪಠ್ಯಪುಸ್ತಕವನ್ನು ಸಿದ್ಧಪಡಿಸಲಾಗಿದೆ. ವಿಜ್ಞಾನ ಮತ್ತು ಗಣಿತ ವಿಷಯಗಳಿಗೆ ಪರ್ಯಾಯವಾಗಿ ವಿದ್ಯಾರ್ಥಿಗಳು ಇಚ್ಛಿಸಿದಲ್ಲಿ ರಾಜ್ಯಶಾಸ್ತ್ರ ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರ ಈ ಮೂರು ವಿಷಯಗಳಲ್ಲಿ ಎರಡು ವಿಷಯಗಳನ್ನು ಆಯ್ಕೆಮಾಡಿಕೊಳ್ಳುವ ಅವಕಾಶವನ್ನು ನೀಡಲಾಗಿದೆ. ಇವುಗಳಲ್ಲಿ ಅರ್ಥಶಾಸ್ತ್ರ ಪಠ್ಯವಿಷಯವೂ ಒಂದಾಗಿದೆ. 2015 ನೇ ಸಾಲಿನಲ್ಲಿ ಸಿದ್ಧಪಡಿಸಿದ ಹತ್ತನೇ ತರಗತಿ ಪಠ್ಯಪುಸ್ತಕವು 'ಭಾರತೀಯ ಆರ್ಥಿಕತೆಯ ಮೂಲ ಅಂಶಗಳು' ಎಂಬ ಶೀರ್ಷಿಕೆ ಅಡಿಯಲ್ಲಿ ಆರ್ಥಿಕತೆಯ ವಿವಿಧ ಮಜಲುಗಳನ್ನು ವಿದ್ಯಾರ್ಥಿಗಳು ಅರ್ಥೈಸಿಕೊಳ್ಳಲು ನೆರವಾಗಿದೆ ಹಾಗೂ ಒಂಬತ್ತನೇ ತರಗತಿಯಲ್ಲಿ 'ಆರ್ಥಿಕತೆಯ ವಿಶ್ಲೇಷಣೆ' ಎಂಬ ವಿಷಯವನ್ನು ಪರಿಚಯಿಸಲಾಗಿದೆ. ಈಗ 2016 ನೇ ಸಾಲಿನ ಎಂಟನೇ ತರಗತಿಯ ಅರ್ಥಶಾಸ್ತ್ರ ಪಠ್ಯಪುಸ್ತಕವು 'ಅರ್ಥಶಾಸ್ತ್ರದ ಮೂಲ ಪರಿಕಲ್ಪನೆಗಳು' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗುತ್ತಿದೆ. ಇದು 2005 ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಡಿಯಲ್ಲಿ ಹಾಗೂ ಪಠ್ಯವಸ್ತುವಿಗೆ ಅನುಗುಣವಾಗಿ ರಚನೆಯಾಗಿದೆ. ಈ ಪಠ್ಯದಲ್ಲಿರುವ ಅಧ್ಯಾಯಗಳು ವಿದ್ಯಾರ್ಥಿಗಳಲ್ಲಿ ಅರ್ಥಶಾಸ್ತ್ರದ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ನೆರವಾಗಲಿವೆ.

ಹತ್ತು ಅಧ್ಯಾಯಗಳನ್ನೊಳಗೊಂಡ ಈ ಪಠ್ಯಪುಸ್ತಕದಲ್ಲಿ ವಿಷಯ ಮಂಡನೆಯನ್ನು ಸಂಕ್ಷಿಪ್ತವಾಗಿ, ಸರಳವಾಗಿ ನಿರುಪಿಸಲಾಗಿದೆ. ಹಂತಹಂತವಾಗಿ ವಿದ್ಯಾರ್ಥಿಗಳ ಸ್ವಯಂ ಕಲಿಕೆಗೆ ಉತ್ತೇಜನ ನೀಡುವಂತೆ ಮತ್ತು ಅವರಲ್ಲಿ ಸ್ವಯಂಚಿಂತನೆ ಬೆಳಸಲು ಪ್ರೇರಕವಾಗುವಂತೆ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಪ್ರತಿ ಅಧ್ಯಾಯದ ಕೊನೆಯಲ್ಲಿ ನೀಡಿರುವ ಅಭ್ಯಾಸಗಳು ವಿದ್ಯಾರ್ಥಿಗಳಲ್ಲಿ ಚರ್ಚೆ ಮತ್ತು ವಿಚಾರ ವಿನಿಮಯದಂತಹ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶವನ್ನು ಒದಗಿಸುತ್ತವೆ.

ಈ ಪಠ್ಯಪುಸ್ತಕವನ್ನು ಸಿದ್ಧಪಡಿಸುವಲ್ಲಿ ಸಹಕರಿಸಿದ ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಪರಿಶೀಲಕರಿಗೆ, ಪಠ್ಯಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ಹಾಗೂ ಈ ಕಾರ್ಯದಲ್ಲಿ ಸಹಕರಿಸಿದ ಸಮಸ್ತರಿಗೂ ಕರ್ನಾಟಕ ಪಠ್ಯಪುಸ್ತಕ ಸಂಘದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ವಿದ್ಯಾರ್ಥಿಗಳು ಪಠ್ಯಪುಸ್ತಕದ ಮೂಲಕ ಪ್ರೇರಣೆ ಪಡೆದು, ಸಾಮಾಜಿಕ ಪರಿಸರದ ಗುಣಾತ್ಮಕ ಮೌಲ್ಯಗಳನ್ನು ರೂಢಿಸಿಕೊಂಡು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲೆಂದು ಕರ್ನಾಟಕ ಪಠ್ಯಪುಸ್ತಕ ಸಂಘವು ಆಶಿಸುತ್ತದೆ.

ನಾಗೇಂದ್ರ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು.

ಡಾ. ಬರಗೂರು ರಾಮಚಂದ್ರಪ್ಪ, ಅಧ್ಯಕ್ಷರು, ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಅಧ್ಯಕ್ಷರ ನುಡಿ

"ಅರ್ಥಶಾಸ್ತ್ರವು ಎಲ್ಲೆಡೆಯಿದೆ, ಮತ್ತು ಅರ್ಥಶಾಸ್ತ್ರದ ತಿಳುವಳಿಕೆಯು ನೀವು ಉತ್ತಮ ನಿರ್ಧಾರಗಳನ್ನು ಕೈಗೊಳ್ಳಲು ಮತ್ತು ಸಂತೋಷದಿಂದ ಜೀವನ ನಡೆಸಲು ನೆರವಾಗುವುದು".

ಟೈಲರ್ ಕೊವೆನ್

ಆರ್ಥಿಕ ಪರಿಕಲ್ಪನೆಗಳು, ಚಿಂತನೆಗಳು ನಮ್ಮ ಸುತ್ತಲೂ ಆವರಿಸಿದೆ. ನಾವು ಆಗಾಗ್ಗೆ ಸಾಮಾನ್ಯವಾಗಿ ತುಷ್ಟಿಗುಣ, ಅನುಭೋಗ, ಸರಕುಗಳು, ಬೇಡಿಕೆ, ಪೂರೈಕೆ, ಉತ್ಪಾದನೆ, ಬೆಲೆ, ಮಾರುಕಟ್ಟೆ, ಆದಾಯ, ವೆಚ್ಚ, ಉಳಿತಾಯ, ಹೂಡಿಕೆ, ಹಣದುಬ್ಬರ, ಹಿಂಜರಿತ, ಬ್ಯಾಂಕುಗಳು, ವಿಮೆ, ಮೂಲಭೂತ ಸೌಕರ್ಯಗಳು ಇತ್ಯಾದಿ ಪರಿಕಲ್ಪನೆಗಳನ್ನು ಬಳಸುತ್ತಿರುತ್ತೇವೆ. ಈ ಆರ್ಥಿಕ ಪರಿಕಲ್ಪನೆಗಳು ನಮ್ಮ ದೈನಂದಿನ ಜೀವನದ ಸಾಮಾನ್ಯ ಭಾಗವಾಗಿದೆ. ವಿದ್ಯಾರ್ಥಿಯ ಅರ್ಥಶಾಸ್ತ್ರದ ಅಧ್ಯಯನದಲ್ಲಿ ಪ್ರಗತಿಯನ್ನು ಸಾಧಿಸಿದಂತೆ, ಅವರು ತಮ್ಮ ಸುತ್ತಮುತ್ತಲಿನ ಆರ್ಥಿಕ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುವರು ಮತ್ತು ಆರ್ಥಿಕ ವಿದ್ಯಮಾನಗಳನ್ನು ವಿಶ್ಲೇಷಿಸಲು ಪ್ರಾರಂಭಿಸುವರು.

ಅರ್ಥಶಾಸ್ತ್ರದ ಅಧ್ಯಯನವು ಅನೇಕ ವೃತ್ತಿಗಳಿಗೆ ಬಾಗಿಲನ್ನು ತೆರೆಯುವ ಬುನಾದಿಯನ್ನು ಒದಗಿಸುತ್ತದೆ. ಅರ್ಥಶಾಸ್ತ್ರವನ್ನು ಅಭ್ಯಸಿಕೊಳ್ಳುವಿಕೆಯ ಮೊದಲ ಹಂತದಲ್ಲಿ ಅರ್ಥಶಾಸ್ತ್ರದ ಪರಿಕಲ್ಪನೆಗಳನ್ನು ತಿಳಿಯುವುದಾಗಿದೆ.

ಅರ್ಥಶಾಸ್ತ್ರದ ಅಧ್ಯಯನದ ಮೂಲಕ ನೀವು ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳಸಿಕೊಳ್ಳಬಹುದು, ಇದು ಮೂಲಭೂತ ಆರ್ಥಿಕ ಸಮಸ್ಯೆಗಳು, ಆರ್ಥಿಕತೆಯ ವಿವಿಧ ವಲಯಗಳು, ಅನುಭೋಗ ಮತ್ತು ತುಷ್ಟಿಗುಣ ಎಂದರೇನು? ಬೇಡಿಕೆಯ ನಿಯಮವನ್ನು ಹೇಗೆ ಪಡೆಯಲಾಗುತ್ತದೆ? ಬೇಡಿಕೆಯ ನಿರ್ಧಾರಕಗಳಾವುವು? ಹಾಗಾದರೆ ಲಭ್ಯವಿರುವ ಸರಕು ಮತ್ತು ಸೇವೆಗಳನ್ನು ತಯಾರಿಸುವ ಪ್ರಕ್ರಿಯೆ ಏನು? ಪೂರೈಕೆಯನ್ನು ನಿರ್ಧರಿಸುವ ಅಂಶಗಳಾವುವು? ಉತ್ಪಾದನಾಂಗಗಳು ಯಾವುವು? ಪ್ರತಿ ಉತ್ಪಾದನಾಂಗದ ಕೊಡುಗೆ ಏನು? ಮಾರುಕಟ್ಟೆಗಳ ಲಕ್ಷಣಗಳು ಯಾವುವು? ಇತ್ಯಾದಿ ವ್ಯಾಪಕವಾದ ಆರ್ಥಿಕ ವಿಷಯಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುವುದು.

ಪ್ರಸ್ತುತ 8 ನೇ ತರಗತಿಯ ಅರ್ಥಶಾಸ್ತ್ರದ ಪಠ್ಯಪುಸ್ತಕದಲ್ಲಿ 'ಅರ್ಥಶಾಸ್ತ್ರದ ಮೂಲ ಪರಿಕಲ್ಪನೆಗಳ'ನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಅರ್ಥಶಾಸ್ತ್ರದ ಮೂಲಭೂತ ಪರಿಕಲ್ಪನೆಗಳನ್ನು ಸರಳೀಕರಿಸಿ ಪಠ್ಯಪುಸ್ತಕದಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಹಂತದಲ್ಲಿ ವಿದ್ಯಾರ್ಥಿಗಳ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಈ ಪಠ್ಯ ಪುಸ್ತಕವನ್ನು ರಚಿಸಲಾಗಿದೆ.

ಪ್ರಸ್ತುತವಾಗಿ ರಚಿತವಾದ 'ಅರ್ಥಶಾಸ್ತ್ರದ ಮೂಲಭೂತ ಪರಿಕಲ್ಪನೆಗಳು' ಎಂಬ ಪಠ್ಯಪುಸ್ತಕವು ಹತ್ತು ಅಧ್ಯಾಯಗಳನ್ನು ಹೊಂದಿದ್ದು, ಇದು ಆರ್ಥಿಕತೆಯ ಮೂಲಾಂಶಗಳು, ಮೂಲಭೂತ ಆರ್ಥಿಕ ಸಮಸ್ಯೆಗಳು, ಆರ್ಥಿಕ ವ್ಯವಸ್ಥೆ, ಆರ್ಥಿಕತೆಯ ವಿವಿಧ ವಲಯಗಳು, ಅನುಭೋಗ, ತುಷ್ಟಿಗುಣ, ಬೇಡಿಕೆ, ಪೂರೈಕೆ, ಉತ್ಪಾದನೆ, ಸರಕುಗಳು ಮತ್ತು ಮಾರುಕಟ್ಟೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸ್ಪಷ್ಟ ತಿಳುವಳಿಕೆ ನೀಡಲು ಸಹಾಯಕವಾಗಿದೆ.

ವಿಭಿನ್ನ ಸಾಮರ್ಥ್ಯವುಳ್ಳ/ ಅಂಧ ವಿದ್ಯಾರ್ಥಿಗಳು ಸೂಕ್ಷ್ಮ ಮತ್ತು ತೀಕ್ಷ್ಣಗ್ರಾಹಿಗಳಾಗಿರುವುದರಿಂದ ಅವರ ಉತ್ಕಟ ಕಲಿಯುವ ಹಂಬಲವನ್ನು ಪೋಷಿಸುವ ಸಲುವಾಗಿ ಆಸಕ್ತಿಯಿಂದ ಈ ಪಠ್ಯವನ್ನು ರಚಿಸಲಾಗಿದೆ. ಅಲ್ಲದೇ ಜನಮುಖಿ ಮತ್ತು

ಸಮಾಜಮುಖಿ ಆಶಯಗಳನ್ನು ಇಟ್ಟುಕೊಂಡು ಈ ಹಂತದ ವಿದ್ಯಾರ್ಥಿಗಳಿಗೆ ಎಷ್ಟನ್ನು ತಿಳಿಸಬೇಕು ಎನ್ನುವ ಚರ್ಚೆ ನಡೆಸಿ ಈ ಪಠ್ಯವನ್ನು ಸಿದ್ಧಗೊಳಿಸಲಾಗಿದೆ. ನಾನು ನನ್ನ ಸಮುದಾಯದ ಶಿಕ್ಷಕ ಮಿತ್ರರೆಲ್ಲ, ಈ ಪಠ್ಯ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ಬೋಧಿಸುವಾಗ ತಪ್ಪದೇ ಈ ಕೆಳಕಂಡ ಅಂಶಗಳನ್ನು ಅನುಸರಿಸಬೇಕೆಂದು ಕೋರಿಕೊಳ್ಳುತ್ತೇನೆ.

ಪ್ರತಿ ಅಧ್ಯಾಯದ ಮೊದಲನೇ ಕಂಡಿಕೆಯಲ್ಲಿ ವಿದ್ಯಾರ್ಥಿಗಳು ಅಧ್ಯಾಯದ ನಂತರ ತಿಳಿದುಕೊಳ್ಳುವ ವಿಷಯಗಳನ್ನು ಪ್ರಶ್ನೆಗಳ ಮೂಲಕ ನೀಡಲಾಗಿದೆ. ಹಾಗಾಗಿ ಶಿಕ್ಷಕರು ಪ್ರತಿ ಅಧ್ಯಾಯದ ಪ್ರಾರಂಭದಲ್ಲಿ ಈ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಕೇಳಬೇಕು ಮತ್ತು ಈ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮತ್ತು ಕುತೂಹಲ ಹುಟ್ಟಿಸಿ, ಈ ವಿಷಯಗಳನ್ನು ಕಲಿಯಲು ಉತ್ಸಾಹಿತರನ್ನಾಗಿಸಬೇಕು.

ಈ ಪಠ್ಯಪುಸ್ತಕದ ಗುಣ ಮತ್ತು ದೋಷಗಳನ್ನು ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಕರ್ನಾಟಕ ಪಠ್ಯಪುಸ್ತಕ ಸಮಿತಿಗೆ ತಿಳಿಸಬೇಕೆಂದು ಕೋರಿಕೊಳ್ಳುತ್ತಿದ್ದೇವೆ. ಶಿಕ್ಷಕರ ಮೌಲ್ಯಯುತ ಸಲಹೆಗಳನ್ನು ಪಠ್ಯಪುಸ್ತಕ ಪರಿಷ್ಕರಣೆಯ ಹಂತದಲ್ಲಿ ಅಳವಡಿಸಿಕೊಳ್ಳಲಾಗುವುದು. ಈ ನಿಟ್ಟಿನಲ್ಲಿ ಪೋಷಕರು, ಮತ್ತು ವಿದ್ಯಾರ್ಥಿಗಳು ಸಲಹೆಯನ್ನು ಸ್ವಾಗತಿಸುತ್ತೇವೆ.

ಪ್ರತಿ ಅಧ್ಯಾಯದ ಅಭ್ಯಾಸದಲ್ಲಿ ಕೊಟ್ಟಂತಹ ನಿಯೋಜಿತ ಕಾರ್ಯವನ್ನು ಮಾಡಲು ವಿದ್ಯಾರ್ಥಿಗಳಿಗೆ ಶಿಕ್ಷಕರು ಸೂಕ್ತವಾದ ಮಾರ್ಗದರ್ಶನವನ್ನು ಒದಗಿಸಲಿ ಎಂದು ನಾವು ನಮ್ರತೆಯಿಂದ ಶಿಕ್ಷಕ ಬಂಧುಗಳನ್ನು ಕೋರುತ್ತೇವೆ.

ಸದರಿ 8 ನೇ ತರಗತಿಯ ‘ಅರ್ಥಶಾಸ್ತ್ರದ ಮೂಲ ಪರಿಕಲ್ಪನೆಗಳು’ ಎಂಬ ಪಠ್ಯಪುಸ್ತಕವನ್ನು ರೂಪಿಸಲು ನೇರವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ಹೃದಯಪೂರ್ವಕ ವಂದನೆಗಳು.

ಡಾ. ಎಸ್. ಆರ್. ಕೇಶವ, ಅಧ್ಯಕ್ಷರು, ಅರ್ಥಶಾಸ್ತ್ರ ಪಠ್ಯಪುಸ್ತಕ ರಚನಾ ಸಮಿತಿ, ಬೆಂಗಳೂರು.

ಪಠ್ಯಪುಸ್ತಕ ರಚನಾ ಸಮಿತಿ

ಸಲಹೆ ಮತ್ತು ಮಾರ್ಗದರ್ಶನ: ಡಾ. ಬರಗೂರು ರಾಮಚಂದ್ರಪ್ಪ, ಅಧ್ಯಕ್ಷರು, ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಶ್ರೀ ನಾಗೇಂದ್ರ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಅಧ್ಯಕ್ಷರು: ಡಾ. ಎಸ್. ಆರ್. ಕೇಶವ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಸದಸ್ಯರುಗಳು: ಶ್ರೀ ಜಿ. ಎನ್ ಕೆಂಪಯ್ಯ, ಉಪನ್ಯಾಸಕರು, ಸ. ಪ. ಪೂ. ಕಾಲೇಜು ಹೊನ್ನಾವರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

ಶ್ರೀಮತಿ ರಿಚಾಗುಪ್ತ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಸಿ. ಎಂ. ಎಸ್. ಜೈನ್ ವಿಶ್ವವಿದ್ಯಾನಿಲಯ, ಬೆಂಗಳೂರು.

ಶ್ರೀಮತಿ ವಿ. ದೀಪಾ, ಉಪನ್ಯಾಸಕರು, ಸ. ಪ. ಪೂ. ಕಾಲೇಜು, ಹೊನ್ನಾವರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

ಅನುವಾದಕರು: ಡಾ. ಎಸ್. ಆರ್. ಕೇಶವ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಪರಿಶೀಲಕರು: ಪ್ರೊ. ಎಸ್. ಟಿ. ಬಾಗಲಕೋಟೆ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

ಶ್ರೀಮತಿ ಸಿ. ನಾಗಮಣಿ, ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಕಾರ್ಯಕ್ರಮ ಸಂಯೋಜಕರು: ಶ್ರೀಮತಿ ಎನ್. ಎಸ್. ಸೌಮ್ಯ, ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಪರಿವಿಡಿ

ಅಧ್ಯಾಯ- 1 ಅರ್ಥಶಾಸ್ತ್ರದ ಪರಿಚಯ

ರಾಜಕೀಯ ಅರ್ಥಶಾಸ್ತ್ರ ಅಥವಾ ಅರ್ಥಶಾಸ್ತ್ರ ಎಂಬುದು ಮಾನವ ಜನಾಂಗದ ಸಾಮಾನ್ಯ ವ್ಯವಹಾರಿಕ ಜೀವನವನ್ನು ಅಧ್ಯಯನ ಮಾಡುವುದಾಗಿದೆ.'' ಆಲ್‌ಫ್ರೆಡ್ ಮಾರ್ಷಲ್

ಪೀಠಿಕೆ:

ಅರ್ಥಶಾಸ್ತ್ರವು ಆದಾಯ ಗಳಿಕೆಯಲ್ಲಿ ಮಾನವನ ವರ್ತನೆಯನ್ನು ಮತ್ತು ಅದನ್ನು ಬಳಸಿಕೊಂಡು ಅವರ ಕಲ್ಯಾಣವನ್ನು ಸುಧಾರಿಸಿಕೊಳ್ಳುವುದನ್ನು ಅಧ್ಯಯನ ಮಾಡುವ ಒಂದು ಸಮಾಜ ವಿಜ್ಞಾನವಾಗಿದೆ. ಇದು ಅತ್ಯಂತ ಆಕರ್ಷಣೀಯವಾದ ವಿಷಯಗಳಲ್ಲಿ ಒಂದಾಗಿದೆ. ಇದು ವ್ಯಕ್ತಿಗಳು, ವ್ಯವಹಾರಿಕ ಘಟಕಗಳು, ಸಮಾಜದ ಹಾಗೂ ಜಾಗತಿಕ ಆರ್ಥಿಕತೆಯ ಸಮಸ್ಯೆಗಳ ಬಗ್ಗೆ ವ್ಯವಹರಿಸುತ್ತದೆ. ಇದು ನೇರವಾಗಿ ಇಲ್ಲವೇ ಪರೋಕ್ಷವಾಗಿ ಎಲ್ಲಾ ಜನರ ದೈನಂದಿನ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಈ ಜಗತ್ತನ್ನು ಬದುಕಲು ಒಂದು ಉತ್ತಮ ಸ್ಥಳವನ್ನಾಗಿ ನಿರ್ಮಿಸುವುದು ಅರ್ಥಶಾಸ್ತ್ರದ ಮೂಲ ಉದ್ದೇಶವಾಗಿದೆ. ಆದ್ದರಿಂದ ಅರ್ಥಶಾಸ್ತ್ರದ ಜ್ಞಾನವು ಎಲ್ಲರಿಗೂ ಅತ್ಯಗತ್ಯವಾಗಿದೆ. ಹಾಗಾದರೆ ಅರ್ಥಶಾಸ್ತ್ರ ಎಂದರೇನು? ಇದನ್ನು ಅರ್ಥಶಾಸ್ತ್ರಜ್ಞರು ಹೇಗೆ ವ್ಯಾಖ್ಯಾನಿಸಿದ್ದಾರೆ? ಇದು ಅಧ್ಯಯನ ಮಾಡುವ ಕ್ಷೇತ್ರಗಳು ಯಾವುವು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು ಅರ್ಥಶಾಸ್ತ್ರದ ಪರಿಚಯ ಮಾಡಿಕೊಡುವ ವಿವಿಧ ವಿಷಯಗಳ ಬಗ್ಗೆ ತಿಳಿಯುವುದು ಈ ಅಧ್ಯಾಯದ ಉದ್ದೇಶವಾಗಿದೆ.

ಅರ್ಥಶಾಸ್ತ್ರದ ಅರ್ಥ:

ಅರ್ಥಶಾಸ್ತ್ರ ಎಂಬ ಪದವನ್ನು ಗ್ರೀಕ್ ಪದಗಳಾದ ಇಕೋಸ್ ಮತ್ತು ನೋಮೋಸ್ ಎಂಬ ಪದಗಳಿಂದ ಪಡೆಯಲಾಗಿದೆ. 'ಇಕೋಸ್' ಎಂದರೆ ಮನೆ, ಮತ್ತು 'ನೋಮೋಸ್' ಎಂದರೆ ನಿರ್ವಹಣೆಯಾಗಿದೆ. ಆದ್ದರಿಂದ ಅರ್ಥಶಾಸ್ತ್ರವನ್ನು ಅಕ್ಷರಶಃ ಮನೆ ಅಥವಾ ಕುಟುಂಬದ ನಿರ್ವಹಣೆ ಎಂದು ಉಲ್ಲೇಖಿಸಬಹುದು. ಆದರೆ ಇದು ಕೇವಲ ಕುಟುಂಬದ ನಿರ್ವಹಣೆಯ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿಲ್ಲ. ಅರ್ಥಶಾಸ್ತ್ರದ ಅರ್ಥ ಮತ್ತು ವಿಷಯವಸ್ತುಗಳು ಕಾಲಾನಂತರದಲ್ಲಿ ಅಗಾಧವಾಗಿ ವಿಸ್ತರಣೆಗೊಂಡಿದೆ.

ಪ್ರತಿಯೊಬ್ಬ ವ್ಯಕ್ತಿಯು ಒಂದಲ್ಲ ಒಂದು ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಶಿಕ್ಷಕ ವಿದ್ಯಾರ್ಥಿಗಳಿಗೆ ಬೋಧಿಸುವುದು, ರೈತನು ಜಮೀನಿನಲ್ಲಿ ಉಳುತ್ತಿರುವುದು, ಕಾರ್ಮಿಕರು ಕಾರ್ಖಾನೆಗಳಲ್ಲಿ ದುಡಿಯುತ್ತಿರುವುದು ಹೀಗೆ ಇತ್ಯಾದಿಗಳಾಗಿವೆ. ಸಾಮಾನ್ಯವಾಗಿ ಜನರು ಹಣದ ಗಳಿಕೆಗಾಗಿ ಕೆಲಸ ಮಾಡುತ್ತಾರೆ. ಆದ್ದರಿಂದ ಅವರು ತಮ್ಮ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ವಸ್ತುಗಳನ್ನು ಮತ್ತು ಅವಶ್ಯಕತೆಗಳನ್ನು (ಸರಕು ಮತ್ತು ಸೇವೆಗಳನ್ನು) ಖರೀದಿಸುತ್ತಾರೆ. ಹಣವನ್ನು ಗಳಿಸುವ ಅಥವಾ ಹಣವನ್ನು ಖರ್ಚು ಮಾಡಲು ಕೈಗೊಂಡ ಚಟುವಟಿಕೆಗಳನ್ನು ಆರ್ಥಿಕ ಚಟುವಟಿಕೆಗಳು ಎಂದು ಕರೆಯುತ್ತಾರೆ. ಅರ್ಥಶಾಸ್ತ್ರವು ಆರ್ಥಿಕತೆಯ ಮತ್ತು ವ್ಯಕ್ತಿಗಳ ಆರ್ಥಿಕ ಚಟುವಟಿಕೆಗಳನ್ನು

ಅಧ್ಯಯನ ಮಾಡುವುದಕ್ಕೆ ಸಂಬಂಧಿಸಿದೆ. ಆದ್ದರಿಂದ ಸರಳವಾಗಿ ಅರ್ಥಶಾಸ್ತ್ರ ಎಂಬುದು ಆರ್ಥಿಕ ಚಟುವಟಿಕೆಗಳನ್ನು ಅಧ್ಯಯನ ಮಾಡುವ ಸಮಾಜ ವಿಜ್ಞಾನವಾಗಿದೆ.

ಹಾಗೆಯೇ, ಮಾನವನಿಗೆ ಹಲವು ಬಯಕೆಗಳಿವೆ ಮತ್ತು ಅವು ಅಪರಿಮಿತವಾಗಿವೆ. ಆದರೆ ಈ ಬಯಕೆಗಳನ್ನು ತೃಪ್ತಿಪಡಿಸಲು ಲಭವಿರುವ ಸರಕು ಮತ್ತು ಸೇವೆಗಳು ಮಿತವಾಗಿವೆ. ಆಹಾರ, ಬಟ್ಟೆ, ಸತಿ, ವಿದ್ಯುಚ್ಛಕ್ತಿ, ಶುದ್ಧಗಾಳಿ, ಉತ್ತಮ ಕುಡಿಯುವ ನೀರು ಇತ್ಯಾದಿಗಳು ಪ್ರಪಂಚದ ಹಲವು ದೇಶಗಳಲ್ಲಿ ಕೊರತೆ ಇದೆ. ಏಕೆಂದರೆ ಇವುಗಳನ್ನು ಉತ್ಪಾದಿಸುವುದಕ್ಕೆ ಅಗತ್ಯವಾದ ಸಂಪನ್ಮೂಲಗಳು ಮಿತವಾಗಿವೆ. ಇಂತಹ ಕೊರತೆಗಳ ಕಾರಣದಿಂದಾಗಿ ಒಬ್ಬ ವ್ಯಕ್ತಿ ಅಥವಾ ಒಂದು ವ್ಯವಹಾರಿಕ ಘಟಕ (ಇದನ್ನು ಉದ್ಯಮ ಎಂತಲೂ ಕರೆಯಲಾಗುತ್ತದೆ) ಒಂದು ಸಮಾಜ ಅಥವಾ ಒಂದು ಸರ್ಕಾರವು ಅತಿ ಹೆಚ್ಚು ಪ್ರಾಮುಖ್ಯವಿರುವ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವುದಕ್ಕೆ ಸಂಪನ್ಮೂಲಗಳ ಬಳಕೆಯನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಆದ್ದರಿಂದ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವುದಕ್ಕಾಗಿ ಆದ್ಯತೆಯ ನಿಯೋಜನೆಯಲ್ಲಿ ಅಥವಾ ಅಗತ್ಯತೆಗಳ ಪೂರೈಸುವಿಕೆಗೆ ಸಾಪೇಕ್ಷ ಪ್ರಾಮುಖ್ಯತೆ ನಿಯೋಜಿಸುವ ಆಯ್ಕೆಯ ಅಗತ್ಯವಿದೆ. ಈ ಕೊರತೆ ಮತ್ತು ಆಯ್ಕೆಯ ಸಮಸ್ಯೆಗಳು ಮೂಲ ಆರ್ಥಿಕ ಸಮಸ್ಯೆಗಳಾಗಿವೆ. ಈ ಮೊದಲೇ ಹೇಳಿದಂತೆ ಇಂತಹ ಆಯ್ಕೆಯ ಸಮಸ್ಯೆಗಳನ್ನು ಅರ್ಥಶಾಸ್ತ್ರದಲ್ಲಿ ವಿವಿಧ ಹಂತಗಳಲ್ಲಿ ಅಧ್ಯಯನ ಮಾಡಲಾಗುತ್ತದೆ. ಅಂದರೆ ವೈಯುಕ್ತಿಕವಾಗಿ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಅಧ್ಯಯನ ಮಾಡಲಾಗುತ್ತದೆ.

ಅರ್ಥಶಾಸ್ತ್ರದ ವ್ಯಾಖ್ಯಾನಗಳು:

ಅರ್ಥಶಾಸ್ತ್ರವನ್ನು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಇಂತಹ ವ್ಯಾಖ್ಯಾನಗಳ ಅಧ್ಯಯನವು ವಿಷಯದ ಸ್ವರೂಪ ಮತ್ತು ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳಲು ಅಗತ್ಯವಾಗಿದೆ. ಸಾಮಾನ್ಯವಾಗಿ ಇಂತಹ ವ್ಯಾಖ್ಯಾನಗಳನ್ನು ಹೀಗೆ ವರ್ಗೀಕರಿಸಲಾಗಿದೆ.

1. ಸಂಪತ್ತಿನ ವ್ಯಾಖ್ಯಾನ
2. ಯೋಗಕ್ಷೇಮದ ವ್ಯಾಖ್ಯಾನ
3. ಕೊರತೆಯ ವ್ಯಾಖ್ಯಾನ
4. ಬೆಳವಣಿಗೆ ಆಧಾರಿತ ವ್ಯಾಖ್ಯಾನ

ಸಂಪತ್ತಿನ ವ್ಯಾಖ್ಯಾನ:

ಸ್ಕಾಟಿಷ್ ನ ಒಬ್ಬ ತತ್ವಜ್ಞಾನಿಯಾದ ಆಡಂಸ್ಮಿತ್‌ರವರು 1776 ರಲ್ಲಿ 'ರಾಷ್ಟ್ರಗಳ ಸಂಪತ್ತಿನ ಸ್ವರೂಪ ಮತ್ತು ಕಾರಣಗಳ ಮೇಲಿನ ಒಂದು ಸಮೀಕ್ಷೆ' (An Enquiry into the nature and causes of the wealth of Nations) ಎಂಬ ಗ್ರಂಥವನ್ನು ಬರೆದರು. ಇದು 'ರಾಷ್ಟ್ರಗಳ ಸಂಪತ್ತು' (Wealth of Nations) ಎಂದು ಜನಪ್ರಿಯವಾಗಿದೆ. ಇಲ್ಲಿಂದಾಚೆಗೆ ಇವರು ಅರ್ಥಶಾಸ್ತ್ರವನ್ನು ಕ್ರಮಬದ್ಧ ವಿಷಯವನ್ನಾಗಿ ಅಧ್ಯಯನ ಮಾಡುವುದಕ್ಕೆ ಅಡಿಪಾಯ ಹಾಕಿದರು. ಆದ್ದರಿಂದ ಅವರನ್ನು 'ಅರ್ಥಶಾಸ್ತ್ರದ ಪಿತಾಮಹ' ಎಂದು ಪರಿಗಣಿಸಲಾಗಿದೆ. ಆಡಂಸ್ಮಿತ್‌ರವರು ಅರ್ಥಶಾಸ್ತ್ರವನ್ನು 'ಸಂಪತ್ತಿನ ವಿಜ್ಞಾನ' ಎಂದು ವ್ಯಾಖ್ಯಾನಿಸಿದ್ದಾರೆ. ಈ ವ್ಯಾಖ್ಯಾನದ ಪ್ರಮುಖ ಅಂಶವೆಂದರೆ ಸಂಪತ್ತಿನ ಸೃಷ್ಟಿ ಮತ್ತು ಕ್ರೋಢೀಕರಣವಾಗಿದೆ. ಈ

ವ್ಯಾಖ್ಯಾನವು ಪ್ರಭಾವಿಸುವ ಅಂಶವೆಂದರೆ ಮಾನವನ ಬಯಕೆಗಳನ್ನು ತೃಪ್ತಿಪಡಿಸಲು ಭೌತಿಕ ಸಂಪತ್ತು ಸಹಾಯ ಮಾಡುತ್ತದೆ. ಮಾನವನ ಚಟುವಟಿಕೆಗಳ ಮೂಲಕ ಭೌತಿಕ ಸಂಪತ್ತು ಸೃಷ್ಟಿಸಲಾಗುತ್ತದೆ. ಮತ್ತು ಇದು ರಾಷ್ಟ್ರದ ಉತ್ಪಾದನೆಯ ಮಟ್ಟವನ್ನು ಹೆಚ್ಚಿಸುತ್ತದೆ.

ಆಡಂಸ್ಮಿತ್‌ರವರ ಅನುಯಾಯಿಗಳಾದ ಜೆ. ಬಿ. ಸೇ, ಎಫ್. ಎ. ವಾಕರ್, ಜೆ. ಎಸ್. ಮಿಲ್ ಮುಂತಾದವರು ಆಡಂಸ್ಮಿತ್‌ರವರ ದೃಷ್ಟಿಕೋನವನ್ನು ಅನುಮೋದಿಸಿದ್ದಾರೆ. ಅವರು ಅರ್ಥಶಾಸ್ತ್ರವು ಸಂಪತ್ತಿನ ವಿಜ್ಞಾನವೆಂದು ಘೋಷಿಸಿದರು. ಆಡಂಸ್ಮಿತ್ ಮತ್ತು ಅವರ ಅನುಯಾಯಿಗಳನ್ನು ಸಾಂಪ್ರಾದಾಯಿಕ ಅರ್ಥಶಾಸ್ತ್ರಜ್ಞರು ಎಂದು ಪರಿಗಣಿಸಲಾಗಿರುವುದರಿಂದ ಇವರ ವ್ಯಾಖ್ಯಾನವನ್ನು ಸಾಂಪ್ರಾದಾಯಿಕ ವ್ಯಾಖ್ಯಾನವೆಂದು ಪರಿಗಣಿಸಲಾಗಿದೆ.

ಟೀಕೆಗಳು:

ಸಂಪತ್ತಿನ ವ್ಯಾಖ್ಯಾನವನ್ನು ಕೆಲವು ಅರ್ಥಶಾಸ್ತ್ರಜ್ಞರು ಮತ್ತು ಸಮಾಜ ಸುಧಾರಕರಾದ ಕಾರ್ಲೈಲ್, ರಸ್ಕಿನ್ ಮುಂತಾದವರು ತೀವ್ರವಾಗಿ ಟೀಕಿಸಿದ್ದಾರೆ. ಸಂಪತ್ತಿನ ವ್ಯಾಖ್ಯಾನದ ವಿರುದ್ಧ ಬಂದಿರುವ ಪ್ರಮುಖ ಟೀಕೆಗಳೆಂದರೆ-

1. ಒಂದು ವೇಳೆ ಅರ್ಥಶಾಸ್ತ್ರವು ಸಂಪತ್ತನ್ನು ಮಾತ್ರ ಅಧ್ಯಯನ ಮಾಡಿದರೆ, ಇದು ಒಂದು ಬ್ರೆಡ್ ಮತ್ತು ಬೆಣ್ಣೆಯ ಪ್ರಾಪಂಚಿಕ ವಿಜ್ಞಾನವಾಗಿದೆ.
2. ಇದು ಸಂಪತ್ತಿಗೆ ಮಹತ್ವ ನೀಡುತ್ತದೆ ಮತ್ತು ಮಾನವನ ಕಲ್ಯಾಣವನ್ನು ಕಡೆಗಣಿಸುತ್ತದೆ.
3. ಈ ವ್ಯಾಖ್ಯಾನದ ಪ್ರಕಾರ ಸಂಪತ್ತು ಕೇವಲ ಭೌತಿಕ ಸರಕುಗಳನ್ನು ಮಾತ್ರ ಒಳಗೊಂಡಿದೆ. ಆದರೆ ಶಿಕ್ಷಣ, ಆರೋಗ್ಯದಂತಹ ಇತ್ಯಾದಿ ಸೇವೆಗಳು ಸಹ ಸಂಪತ್ತಿನಷ್ಟೇ ಸಮನಾದ ಪ್ರಮುಖವಾದ ಸಂಗತಿಗಳಾಗಿವೆ.
4. ಈ ವ್ಯಾಖ್ಯಾನದ ಪ್ರಕಾರ ಮಾನವರು ತಮ್ಮ ವೈಯಕ್ತಿಕ ಲಾಭಕ್ಕಾಗಿ ಹೆಚ್ಚಿನ ಸಂಪತ್ತನ್ನು ಗಳಿಸುವ ಪ್ರಧಾನ ಉದ್ದೇಶ ಹೊಂದಿದ್ದಾರೆ. ಇದು ಮಾನವರು ದುರಾಸೆಯನ್ನು ಹೊಂದಿರುವವರು ಎಂದು ಹೇಳುತ್ತದೆ ಮತ್ತು ಈ ವ್ಯಾಖ್ಯಾನವು ಮಾನವನ ಭಾವನೆಗಳಾದ ಪ್ರೀತಿ, ಒಲವು ಇತ್ಯಾದಿಗಳನ್ನು ನಿರ್ಲಕ್ಷಿಸುತ್ತದೆ.

ಯೋಗಕ್ಷೇಮದ ವ್ಯಾಖ್ಯಾನ:

ಆಲ್ಫ್ರೇಡ್ ಮಾರ್ಷಲ್‌ರವರು ಅರ್ಥಶಾಸ್ತ್ರಕ್ಕೆ ಯೋಗಕ್ಷೇಮದ ವ್ಯಾಖ್ಯಾನವನ್ನು ನೀಡಿದರು. ಇವರು ತಮ್ಮ 'ಅರ್ಥಶಾಸ್ತ್ರದ ಮೂಲತತ್ವಗಳು' (Principles of Economic) ಎಂಬ ಗ್ರಂಥವನ್ನು 1890 ರಲ್ಲಿ ಪ್ರಕಟಿಸಿದರು. ಇವರ ಪ್ರಕಾರ "ಅರ್ಥಶಾಸ್ತ್ರವು ಮಾನವನ ದೈನಂದಿನ ಜೀವನ ವ್ಯವಹಾರವನ್ನು ಅಧ್ಯಯನ ಮಾಡುತ್ತದೆ; ಅದು ಯೋಗಕ್ಷೇಮದ ಭೌತಿಕ ಅಗತ್ಯತೆಗಳ ಗಳಿಕೆ ಮತ್ತು ಬಳಕೆಗೆ ಅತ್ಯಂತ ನಿಕಟವಾಗಿ ಸಂಬಂಧಿಸಿದ ವೈಯಕ್ತಿಕ ಮತ್ತು ಸಾಮಾಜಿಕ ಕ್ರಿಯೆಯ ಭಾಗವನ್ನು ಪರಿಶೀಲಿಸುತ್ತದೆ".

ಮಾರ್ಷಲ್‌ರವರು ಮಾನವನ ಯೋಗಕ್ಷೇಮಕ್ಕೆ ಒತ್ತು ನೀಡುವ ಮೂಲಕ ಅರ್ಥಶಾಸ್ತ್ರದ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿದರು. ಭೌತಿಕ ಸಂಪತ್ತಿನ ಬಳಕೆಯೊಂದಿಗೆ ಸಾಧಿಸಲಾದ ಆರ್ಥಿಕ ಯೋಗಕ್ಷೇಮವನ್ನು ಮನುಷ್ಯ ಸಾಧಿಸಿದ ಯೋಗಕ್ಷೇಮದ ಮೂಲಕ ಮಾಪನ ಮಾಡಲಾಗುತ್ತದೆ ಎಂಬುದನ್ನು ತಿಳಿಸುವಲ್ಲಿ ಈ ವ್ಯಾಖ್ಯಾನವು ಮಹತ್ವ ಹೊಂದಿದೆ.

ಅರ್ಥಶಾಸ್ತ್ರಜ್ಞರಾದ ಎಡ್ವಿನ್ ಕ್ಯಾನನ್, ಎ. ಸಿ. ಪಿಗು, ಜೆ. ಬಿ. ಕ್ಲಾರ್ಕ್ ಮುಂತಾದವರು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಇವರೆಲ್ಲರನ್ನು ನವ ಸಂಪ್ರದಾಯ ಪಂಥದ ಅರ್ಥಶಾಸ್ತ್ರಜ್ಞರು ಎಂದು ಪರಿಗಣಿಸಲಾಗುತ್ತದೆ. ಆದ್ದರಿಂದ ಇವರ ವ್ಯಾಖ್ಯಾನಗಳನ್ನು ನವಸಂಪ್ರದಾಯ ವ್ಯಾಖ್ಯಾನವೆಂದು ಪರಿಗಣಿಸಲಾಗಿದೆ.

ಟೀಕೆಗಳು:

ಲಿಯೋನಲ್ ರಾಬಿನ್ಸ್‌ರವರು ಯೋಗಕ್ಷೇಮದ ವ್ಯಾಖ್ಯಾನವನ್ನು ಕಟುವಾಗಿ ಟೀಕೆಗೆ ಗುರಿಪಡಿಸಿದ್ದಾರೆ. ಯೋಗಕ್ಷೇಮದ ವ್ಯಾಖ್ಯಾನದ ವಿರುದ್ಧದ ಕೆಲವು ಪ್ರಮುಖ ಟೀಕೆಗಳೆಂದರೆ:

1. ಯೋಗಕ್ಷೇಮದ ವ್ಯಾಖ್ಯಾನವು ಕೇವಲ ಭೌತಿಕ ಯೋಗಕ್ಷೇಮಕ್ಕೆ ಮಾತ್ರ ಗಮನ ನೀಡುತ್ತದೆ. ಆದರೆ ಸೇವೆಗಳು ಸಹ ಮಾನವನ ಯೋಗಕ್ಷೇಮಕ್ಕೆ ಅಗತ್ಯವಾಗಿದೆ.
2. ಇದು ಎಲ್ಲಾ ಆರ್ಥಿಕ ಚಟುವಟಿಕೆಗಳು ಮಾನವನ ಯೋಗಕ್ಷೇಮವನ್ನು ಉತ್ತೇಜಿಸುತ್ತದೆ ಎಂಬ ಕಲ್ಪನೆಯನ್ನು ಹೊಂದಿದೆ. ಆದರೆ ಮಾದಕ ಪಾನೀಯಗಳು, ಸಿಗರೇಟ್ ಇತ್ಯಾದಿಗಳ ಮಾರಾಟವು ಇದನ್ನು ಉತ್ತೇಜಿಸುವುದಿಲ್ಲ.
3. ಇದು ಸಮಾಜದ ನೈಜ ಆರ್ಥಿಕ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತದೆ. ಅದೆಂದರೆ ಕೊರತೆಯ ಸಂಪನ್ಮೂಲಗಳು ಮತ್ತು ಅಪರಿಮಿತ ಬಯಕೆಗಳಾಗಿವೆ.

ಕೊರತೆಯ ವ್ಯಾಖ್ಯಾನ:

ಪ್ರೊ.ಲಿಯೋನಲ್ ರಾಬಿನ್ಸ್‌ರವರು ಅರ್ಥಶಾಸ್ತ್ರಕ್ಕೆ ಕೊರತೆಯ ವ್ಯಾಖ್ಯಾನವನ್ನು ನೀಡಿದ್ದಾರೆ. ಇವರು 1932 ರಲ್ಲಿ ಪ್ರಕಟಿಸಿದ 'ಅರ್ಥಶಾಸ್ತ್ರದ ಸ್ವರೂಪ ಮತ್ತು ಪ್ರಾಮುಖ್ಯತೆ' (Nature and Significance of Economic Science) ಎಂಬ ಗ್ರಂಥವು ಅರ್ಥಶಾಸ್ತ್ರದ ಅಧ್ಯಯನಕ್ಕೆ ಹೊಸ ಆಯಾಮವನ್ನು ನೀಡಿತ್ತು.

ರಾಬಿನ್ಸ್ ರವರ ಪ್ರಕಾರ 'ಪರ್ಯಾಯ ಉಪಯೋಗಗಳನ್ನೊಳಗೊಂಡ ಕೊರತೆಯಲ್ಲಿರುವ ಸಾಧನಗಳು ಮತ್ತು ಗುರಿಗಳ ಸಂಬಂಧದಲ್ಲಿ ಮಾನವನ ವರ್ತನೆಯನ್ನು ಅಭ್ಯಾಸ ಮಾಡುವ ವಿಜ್ಞಾನವೇ ಅರ್ಥಶಾಸ್ತ್ರವಾಗಿದೆ'. ಮಾನವನ ಬಯಕೆಗಳು ಅಪರಿಮಿತವಾಗಿವೆ ಮತ್ತು ಅದನ್ನು ತೃಪ್ತಿಪಡಿಸಲು ಸಂಪನ್ಮೂಲಗಳು ಪರಿಮಿತವಾಗಿವೆ ಹಾಗೂ ಅವುಗಳು ಪರ್ಯಾಯ ಉಪಯೋಗಗಳನ್ನು ಒಳಗೊಂಡಿವೆ ಎಂಬುದನ್ನು ಈ ವ್ಯಾಖ್ಯಾನವು ತಿಳಿಸುತ್ತದೆ. ಆದ್ದರಿಂದ ಮಾನವನು ತಮ್ಮ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಲಭ್ಯವಿರುವ ಸಂಪನ್ಮೂಲಗಳಿಂದ ಆಯ್ಕೆ ಮಾಡಿಕೊಳ್ಳಬೇಕಾಗುವುದು. ಹಾಗಾಗಿ ಆಯ್ಕೆಯ ಸಮಸ್ಯೆ ಉದ್ಭವಿಸುತ್ತದೆ. ಇದು ಒಂದು ಆರ್ಥಿಕ ಸಮಸ್ಯೆಯಾಗಿದೆ, ಹಾಗಾಗಿ ಅರ್ಥಶಾಸ್ತ್ರವನ್ನು ಆಯ್ಕೆಯ ವಿಜ್ಞಾನವೆಂದೂ ಕರೆಯಲಾಗುತ್ತದೆ.

ಟೀಕೆಗಳು:

ರಾಬಿನ್ ರವರ ವ್ಯಾಖ್ಯಾನವನ್ನು ಹೆಚ್ಚು ವೈಜ್ಞಾನಿಕವಾದದು ಎಂದು ಪರಿಗಣಿಸಲಾಗಿದ್ದರೂ, ಅದನ್ನು ಕೆಲವು ಅರ್ಥಶಾಸ್ತ್ರಜ್ಞರು ಟೀಕಿಸುತ್ತಾರೆ. ಅವರ ಪ್ರಮುಖ ಟೀಕೆಗಳೆಂದರೆ:

1. ಈ ವ್ಯಾಖ್ಯಾನವು ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿಯನ್ನು ನಿರ್ಲಕ್ಷಿಸುತ್ತದೆ. ಆಧುನಿಕ ದಿನಗಳಲ್ಲಿ ಬೆಳವಣಿಗೆ ಮತ್ತು ಅಭಿವೃದ್ಧಿಗಳು ಅತ್ಯಂತ ನಿರ್ಣಾಯಕ ಅಂಶಗಳಾಗಿವೆ.

2. ಇದು ಆರ್ಥಿಕತೆಯ ರಾಷ್ಟ್ರೀಯ ಆದಾಯ ಮತ್ತು ಉದ್ಯೋಗವನ್ನು ಪರಿಗಣಿಸುವುದಿಲ್ಲ. ಕೊರತೆ ಮತ್ತು ಸಂಪನ್ಮೂಲಗಳ ಹಂಚಿಕೆಯ ಸಮಸ್ಯೆಗಳು ಶ್ರೀಮಂತ ದೇಶಗಳಿಗೆ ಹೆಚ್ಚು ಸೂಕ್ತವಾಗುವುದಿಲ್ಲ.

3. ಇಂದು ಪ್ರಪಂಚದ ಬಹುತೇಕ ಎಲ್ಲಾ ದೇಶಗಳು ಬಡತನ, ನಿರುದ್ಯೋಗ, ಆರ್ಥಿಕ ಅಸಮಾನತೆ, ಆರ್ಥಿಕ ಏರಿಳಿತ ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ವ್ಯಾಖ್ಯಾನವು ಇಂತಹ ಎಲ್ಲಾ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತದೆ.

ಬೆಳವಣಿಗೆ ಆಧಾರಿತ ವ್ಯಾಖ್ಯಾನ:

ಜೆ.ಎಂ.ಕೇನ್ಸ್,ಪ್ರೊ.ಸ್ಯಾಮುಯಲ್ಸನ್ ಇತ್ಯಾದಿ ಆಧುನಿಕ ಅರ್ಥಶಾಸ್ತ್ರಜ್ಞರು ಅರ್ಥಶಾಸ್ತ್ರಕ್ಕೆ ಬೆಳವಣಿಗೆ ಆಧಾರಿತ ವ್ಯಾಖ್ಯಾನವನ್ನು ನೀಡಿದ್ದಾರೆ. ಕೇನ್ಸ್ ರವರ ಪ್ರಕಾರ 'ಅರ್ಥಶಾಸ್ತ್ರವು ರಾಷ್ಟ್ರೀಯ ಆದಾಯ ಮತ್ತು ಉದ್ಯೋಗಗಳ ಮಟ್ಟವು ಒಂದು ಸಮುದಾಯದಲ್ಲಿ ಹೇಗೆ ನಿರ್ಧಾರವಾಗುತ್ತದೆ ಎಂಬುದನ್ನು ಅಧ್ಯಯನ ಮಾಡುತ್ತದೆ'.

ಪ್ರೊ. ಸ್ಯಾಮುಯಲ್ಸನ್‌ರವರು "ಅರ್ಥಶಾಸ್ತ್ರವು ಮನುಷ್ಯರು ಹಾಗೂ ಸಮಾಜವು ಹಣದ ಬಳಕೆಯಿಂದ ಇಲ್ಲವೆ ಹಣದ ಬಳಕೆಯಿಲ್ಲದೆ ಪರ್ಯಾಯ ಉಪಯೋಗಗಳಿರುವ ವಿರಳ ಉತ್ಪಾದಕ ಸಂಪನ್ಮೂಲಗಳನ್ನು ಆಯ್ಕೆ ಮಾಡಿ ಅವುಗಳಿಂದ ಕಾಲಾಂತರದಲ್ಲಿ ವಿವಿಧ ಉತ್ಪನ್ನಗಳನ್ನು ತಯಾರಿಸಿ ಪ್ರಸ್ತುತ ಹಾಗೂ ಭವಿಷ್ಯದಲ್ಲಿ ವಿವಿಧ ಜನರು ಹಾಗೂ ಸಮಾಜದ ಗುಂಪುಗಳು ಅನುಭೋಗಿಸಲು ಅನುವಾಗುವರೆತೆ ಹಂಚಿಕೆ ಮಾಡುವುದರ ಅಧ್ಯಯನವಾಗಿದೆ" ಎಂದಿದ್ದಾರೆ.

ನಾವು ಅರ್ಥಶಾಸ್ತ್ರದ ವಿವಿಧ ವ್ಯಾಖ್ಯಾನಗಳನ್ನು ಚರ್ಚಿಸಿದ್ದೇವೆ. ಈ ವ್ಯಾಖ್ಯಾನಗಳಿಂದ ನಾವು ಈ ಕೆಳಗಿನಂತೆ ಅರ್ಥಶಾಸ್ತ್ರದ ಅರ್ಥವನ್ನು ತೀರ್ಮಾನಿಸಬಹುದು.

1. ಅರ್ಥಶಾಸ್ತ್ರವು ರಾಷ್ಟ್ರದ ಸಂಪತ್ತು ಮತ್ತು ಆದಾಯವನ್ನು ಅಧ್ಯಯನ ಮಾಡುತ್ತದೆ.
2. ಇದು ಮಾನವ ಕುಲದ ಯೋಗಕ್ಷೇಮಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ.
3. ಇದು ಕೊರತೆ ಮತ್ತು ಆಯ್ಕೆಯ ಸಮಸ್ಯೆಯನ್ನು ಬಗೆಹರಿಸುವತ್ತ ಪ್ರಯತ್ನಿಸುತ್ತದೆ.
4. ಇದು ಆರ್ಥಿಕತೆಯ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದೆ.

ಅರ್ಥಶಾಸ್ತ್ರದ ವ್ಯಾಪ್ತಿ:

ವ್ಯಾಪ್ತಿಯು ಅಧ್ಯಯನ ಮಾಡುವ ವಿಷಯದ ವಿಸ್ತಾರತೆ ಮತ್ತು ವಿಷಯ ವಸ್ತುಗಳನ್ನು ಸೂಚಿಸುತ್ತದೆ. ಅರ್ಥಶಾಸ್ತ್ರವು ತನ್ನದೇ ಆದ ವಸ್ತುವಿಷಯ ಅಥವಾ ಚಟುವಟಿಕೆಗಳ

ವಿಸ್ತಾರತೆಯನ್ನು ಹೊಂದಿದೆ. ಅರ್ಥಶಾಸ್ತ್ರ ವಿಷಯದ ನಿರಂತರ ಬೆಳವಣಿಗೆಗಳು ಅರ್ಥಶಾಸ್ತ್ರದ ವ್ಯಾಪ್ತಿ ಬಗೆಗಿನ ವೈವಿಧ್ಯ ದೃಷ್ಟಿಕೋನಕ್ಕೆ ಕಾರಣವಾಗಿದೆ.

ಬಯಕೆಗಳು ಎಲ್ಲಾ ಆರ್ಥಿಕ ಚಟುವಟಿಕೆಗಳಿಗೆ ಆಧಾರವಾಗಿವೆ. ಜನರಿಗೆ ಅಪರಿಮಿತವಾದ ಬಯಕೆಗಳಿವೆ. ಈ ಬಯಕೆಗಳನ್ನು ಸರಕು ಮತ್ತು ಸೇವೆಗಳ ಮೂಲಕ ತೃಪ್ತಿಪಡಿಸಲಾಗುತ್ತದೆ. ಆದ್ದರಿಂದ ಜನರು ತಮಗೆ ಬೇಕಾದ ಅಗತ್ಯ ಸರಕು ಮತ್ತು ಸೇವೆಗಳನ್ನು ಕೊಳ್ಳಲು ಹಣ ಗಳಿಕೆಯ ಕೆಲಸಗಳಲ್ಲಿ ತೊಡಗುತ್ತಾರೆ. ಜನರು ಈ ಸರಕು ಮತ್ತು ಸೇವೆಗಳನ್ನು ಅನುಭೋಗಿಸುವ ಮೂಲಕ ತೃಪ್ತಿ ಪಡೆಯುತ್ತಾರೆ. ಆದ್ದರಿಂದ ಸಂಕ್ಷಿಪ್ತವಾಗಿ ಬಯಕೆ-ಪ್ರಯತ್ನ-ತೃಪ್ತಿಗಳು ಅರ್ಥಶಾಸ್ತ್ರದ ವಿಷಯ ವಸ್ತುಗಳಾಗಿವೆ.

ವಿಶಾಲವಾಗಿ ಅರ್ಥಶಾಸ್ತ್ರದ ವಿಷಯವಸ್ತು ಅಥವಾ ವ್ಯಾಪ್ತಿಯು ವೈಯಕ್ತಿಕ ಅಥವಾ ಸಾಮಾಜಿಕ ಮಟ್ಟದಲ್ಲಿ ಕೈಗೊಳ್ಳುವ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಒಳಗೊಂಡಿದೆ. ಈ ಆರ್ಥಿಕ ಚಟುವಟಿಕೆಗಳು ಅನುಭೋಗ, ಉತ್ಪಾದನೆ, ವಿನಿಮಯ, ವಿತರಣೆ, ಯೋಜನೆ, ರಾಷ್ಟ್ರೀಯ ಆದಾಯ, ಅಂತರರಾಷ್ಟ್ರೀಯ ವ್ಯಾಪಾರ, ಸಾರ್ವಜನಿಕ ಹಣಕಾಸು ಇತ್ಯಾದಿಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕೆಲವನ್ನು ಸಂಕ್ಷಿಪ್ತವಾಗಿ ಚರ್ಚಿಸೋಣ.

ಅನುಭೋಗ: ಮಾನವನ ಬಯಕೆಗಳನ್ನು ತೃಪಿಪಡಿಸಿಕೊಳ್ಳಲು ಸರಕುಗಳು ಮತ್ತು ಸೇವೆಗಳನ್ನು ಬಳಸುವುದನ್ನು ಅನುಭೋಗ ಎನ್ನುವರು. ಮಾನವನ ಬಯಕೆಗಳು ಅಪರಿಮಿತವಾಗಿವೆ, ಆದರೆ ಅವುಗಳನ್ನು ತೃಪ್ತಿಪಡಿಸುವ ಸಂಪನ್ಮೂಲಗಳು ಮಿತಿಯಲ್ಲಿವೆ ಎಂಬುದನ್ನು ನಾವು ತಿಳಿದಿದ್ದೇವೆ. ಇಲ್ಲಿ ಅರ್ಥಶಾಸ್ತ್ರವು ತಮ್ಮ ಅಪರಿಮಿತ ಬಯಕೆಗಳನ್ನು ಈಡೇರಿಸಿಕೊಳ್ಳಲು ಸರಕು ಮತ್ತು ಸೇವೆಗಳನ್ನು ಕೊಳ್ಳುವುದು ಮತ್ತು ಬಳಸಿಕೊಳ್ಳುವುದನ್ನು ಮತ್ತು ಪರಿಮಿತ ಸಂಪನ್ಮೂಲಗಳಿಂದ ವ್ಯಕ್ತಿಗಳು ಆದಾಯವನ್ನು ಹೇಗೆ ಗಳಿಸುತ್ತಾರೆ ಎಂಬುದನ್ನು ಅಧ್ಯಯನ ಮಾಡುತ್ತದೆ.

ಉತ್ಪಾದನೆ: ಉತ್ಪಾದನೆಯು ಕಚ್ಚಾವಸ್ತುಗಳನ್ನು ಸಿದ್ಧಪಡಿಸಿದ ಅಥವಾ ಬಳಕೆಗೆ ಯೋಗ್ಯವಾದ ಸರಕು ಮತ್ತು ಸೇವೆಗಳಾಗಿ ಪರಿವರ್ತಿಸುವ ಒಂದು ಪ್ರಕ್ರಿಯೆಯಾಗಿದೆ. ಇವು ಮಾನವನ ಬಯಕೆಗಳನ್ನು ತೃಪ್ತಿಪಡಿಸುವ ಸಾಮರ್ಥ್ಯ ಹೊಂದಿರುತ್ತವೆ. ಉತ್ಪಾದನೆಯನ್ನು ಕೊರತೆಯಲ್ಲಿರುವ ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಗಳನ್ನು ಸಂಯೋಜಿಸುವ ಮೂಲಕ ಕೈಗೊಳ್ಳಲಾಗುತ್ತದೆ. ಇದು ಕೊರತೆಯಲ್ಲಿರುವ ಸಂಪನ್ಮೂಲಗಳಾದ ಭೂಮಿ, ಶ್ರಮ ಮತ್ತು ಬಂಡವಾಳ ಇತ್ಯಾದಿಗಳನ್ನು ಹೇಗೆ ಉತ್ಪಾದನೆಯಲ್ಲಿ ಬಳಸಿಕೊಳ್ಳಲಾಗುತ್ತದೆ ಎಂಬುದನ್ನು ಅಧ್ಯಯನ ಮಾಡುತ್ತದೆ. ಇಲ್ಲಿ ಹಲವು ಉತ್ಪಾದನಾ ನಿಯಮಗಳು, ಉತ್ಪಾದನೆಯಲ್ಲಿನ ವೆಚ್ಚವನ್ನು ಕನಿಷ್ಠಗೊಳಿಸುವ ತಂತ್ರಗಳು ಇತ್ಯಾದಿಗಳನ್ನು ಚರ್ಚಿಸಲಾಗುತ್ತದೆ. ಅರ್ಥಶಾಸ್ತ್ರವು ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ವಲಯಗಳು ಮತ್ತು ಆರ್ಥಿಕತೆಯ ವಿವಿಧ ವಲಯಗಳ ಉತ್ಪಾದನಾ ಚಟುವಟಿಕೆಗಳನ್ನು ಸಹ ಅಧ್ಯಯನ ಮಾಡುತ್ತದೆ.

ವಿನಿಮಯ: ಸರಕುಗಳು ಮತ್ತು ಸೇವೆಗಳನ್ನು ಉತ್ಪಾದಕರಿಂದ ಅನುಭೋಗಗಳಿಗೆ ವರ್ಗಾಯಿಸುವುದಕ್ಕೆ ವಿನಿಮಯ ಎನ್ನುವರು. ಇದು ಮಾರುಕಟ್ಟೆ ಯಾಂತ್ರಿಕ ವ್ಯವಸ್ಥೆಯಲ್ಲಿ ಕೊಳ್ಳುವವರು ಮತ್ತು ಮಾರುವವರಿಂದ ಕಾರ್ಯ ನಿರ್ವಹಿಸುತ್ತದೆ. ಹಣವನ್ನು ಒಂದು

ವಿನಿಮಯ ಮಾಧ್ಯಮವಾಗಿ ಬಳಸಲಾಗುತ್ತದೆ. ಅರ್ಥಶಾಸ್ತ್ರವು ವಿನಿಮಯ, ಹಣ, ಸಾಲ, ಬ್ಯಾಂಕಿಂಗ್ ಇತ್ಯಾದಿ ಯಾಂತ್ರಿಕ ವ್ಯವಸ್ಥೆಯನ್ನು ಅಧ್ಯಯನ ಮಾಡುತ್ತದೆ. ಇದು ವಿವಿಧ ಸರಕುಗಳು ಮತ್ತು ಸೇವೆಗಳ ಬೆಲೆಗಳು ಹೇಗೆ ನಿರ್ಧಾರವಾಗುತ್ತವೆ ಎಂಬುದನ್ನು ಸಹ ಅಧ್ಯಯನ ಮಾಡುತ್ತದೆ.

ವಿತರಣೆ: ಉತ್ಪಾದನಾಂಗಗಳಿಂದ ಗಳಿಸಿದ ಆದಾಯದ ಹಂಚಿಕೆಯನ್ನು ವಿತರಣೆ ಎಂದು ಕರೆಯಲಾಗುತ್ತದೆ. ಭೂಮಿಗೆ ಗೇಣಿ, ಶ್ರಮಕ್ಕೆ ಕೂಲಿ, ಬಂಡವಾಳಕ್ಕೆ ಬಡ್ಡಿ ಮತ್ತು ಸಂಘಟನೆಯು ಲಾಭವನ್ನು ಪಡೆಯುತ್ತದೆ. ಅರ್ಥಶಾಸ್ತ್ರವು ಈ ಪ್ರತಿಫಲಗಳನ್ನು ವಿವಿಧ ಉತ್ಪಾದನಾಂಗಗಳ ನಡುವೆ ಹೇಗೆ ನಿರ್ಧರಿಸಲಾಗುತ್ತದೆ ಮತ್ತು ಹಂಚಲಾಗುತ್ತದೆ ಎಂಬುದನ್ನು ಅಧ್ಯಯನ ಮಾಡುತ್ತದೆ.

ಯೋಜನೆ: ಯೋಜನೆಯು ಅಪೇಕ್ಷಿತ ಗುರಿಗಳನ್ನು ಸಾಧಿಸಲು ಅಗತ್ಯವಿರುವ ಚಟುವಟಿಕೆಗಳನ್ನು ಸಂಘಟಿಸುವ ಮತ್ತು ಆಯೋಜಿಸುವ ಪ್ರಕ್ರಿಯೆಯಾಗಿದೆ. ಇದು ಸಾಧಿಸಬಹುದಾದ ಗುರಿಗಳು ಅಥವಾ ಉದ್ದೇಶಗಳ ಗುರ್ತಿಸುವಿಕೆಯನ್ನು ಒಳಗೊಂಡಿದೆ. ಅವುಗಳನ್ನು ಸಾಧಿಸಲು ಕಾರ್ಯತಂತ್ರಗಳನ್ನು ರಚಿಸುವಿಕೆ, ಅವಶ್ಯಕವಿರುವ ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಕಾರ್ಯತಂತ್ರಗಳ ಅನುಷ್ಠಾನಕ್ಕಾಗಿ ನಿರ್ದೇಶನ ಮತ್ತು ಮೇಲ್ವಿಚಾರಣೆ ಕೈಗೊಳ್ಳುವಿಕೆಗಳನ್ನು ಒಳಗೊಂಡಿದೆ. ಇಲ್ಲಿ ಚರ್ಚಿಸಲಾಗಿರುವ ವಿಷಯಗಳಲ್ಲಿ ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಹಂಚಿಕೆಗಳು ಅತ್ಯಂತ ಪ್ರಮುಖ ಸಂಗತಿಗಳಾಗಿವೆ.

ರಾಷ್ಟ್ರೀಯ ಆದಾಯ: ಒಂದು ದೇಶ ಒಂದು ವರ್ಷದ ಅವಧಿಯಲ್ಲಿ ಗಳಿಸಿದ ಎಲ್ಲಾ ಜನರ ಒಟ್ಟು ಆದಾಯವನ್ನು ರಾಷ್ಟ್ರೀಯ ಆದಾಯ ಎಂದು ಕರೆಯಲಾಗುತ್ತದೆ. ಸಮಗ್ರ ಅರ್ಥಶಾಸ್ತ್ರವು ರಾಷ್ಟ್ರೀಯ ಆದಾಯದ ನಿರ್ಧಾರ, ಲೆಕ್ಕಾಚಾರದಲ್ಲಿನ ವಿಧಾನಗಳು ಮತ್ತು ಇದರ ಏರಿಳಿತಗಳಿಗೆ ಕಾರಣಗಳನ್ನು ಚರ್ಚಿಸುತ್ತದೆ. ಒಂದು ದೇಶದ ಜನರ ನಡುವೆ ರಾಷ್ಟ್ರೀಯ ಆದಾಯದ ವಿತರಣೆಯು ಸಹ ಅರ್ಥಶಾಸ್ತ್ರದಲ್ಲಿ ಚರ್ಚಿಸುವ ಒಂದು ಪ್ರಮುಖ ವಿಷಯವಾಗಿದೆ.

ಅಂತರರಾಷ್ಟ್ರೀಯ ವ್ಯಾಪಾರ: ಎರಡು ಅಥವಾ ಅದಕ್ಕಿಂತ ಹೆಚ್ಚಿನ ದೇಶಗಳ ನಡುವಿನ ವ್ಯಾಪಾರಕ್ಕೆ ಅಂತರರಾಷ್ಟ್ರೀಯ ವ್ಯಾಪಾರ ಅಥವಾ ವಿದೇಶಿ ವ್ಯಾಪಾರ ಎಂದು ಕರೆಯಲಾಗುತ್ತದೆ. ಅರ್ಥಶಾಸ್ತ್ರವು ಅಂತರರಾಷ್ಟ್ರೀಯ ವ್ಯಾಪಾರದ ಸಿದ್ಧಾಂತಗಳು, ಪಾವತಿಶಿಲ್ಕುವಿನ ಸಮಸ್ಯೆ, ವ್ಯಾಪಾರ ಒಪ್ಪಂದ ಇತ್ಯಾದಿಗಳನ್ನು ಅಧ್ಯಯನ ಮಾಡುತ್ತದೆ.

ಸಾರ್ವಜನಿಕ ಹಣಕಾಸು: ಸಾರ್ವಜನಿಕ ಹಣಕಾಸು ಸರ್ಕಾರದ ಹಣಕಾಸಿನ ಕಾರ್ಯಾಚರಣೆಗಳನ್ನು ಅಧ್ಯಯನ ಮಾಡುವುದನ್ನು ಸೂಚಿಸುತ್ತದೆ. ಸರ್ಕಾರವು ಜನರ ಯೋಗಕ್ಷೇಮಕ್ಕಾಗಿ ಹಲವು ಕಾರ್ಯಗಳನ್ನು ನಿರ್ವಹಿಸುತ್ತದೆ ಮತ್ತು ಇದು ಆರ್ಥಿಕತೆಯ ಆರ್ಥಿಕ ಚಟುವಟಿಕೆಗಳ ಸಂರಚನೆ ಮತ್ತು ರೂಪುರೇಷೆಗಳನ್ನು ಒದಗಿಸುತ್ತದೆ. ಅರ್ಥಶಾಸ್ತ್ರವು ಸರ್ಕಾರದ ಆದಾಯ, ವೆಚ್ಚ, ಸಾಲ ಮತ್ತು ಕೊರತೆಗಳನ್ನು ಅಧ್ಯಯನ ಮಾಡುತ್ತದೆ. ಇದು ಸರ್ಕಾರದ ಕೋಶೀಯ ನೀತಿಗಳನ್ನು ಮತ್ತು ಅವುಗಳ ಪರಿಣಾಮಗಳನ್ನು ಸಹ ಅಧ್ಯಯನ ಮಾಡುತ್ತದೆ. ಪ್ರಸ್ತುತ, ಪ್ರಪಂಚದ ಆರ್ಥಿಕತೆಗಳು ಬಡತನ, ನಿರುದ್ಯೋಗ, ಆದಾಯ ಮತ್ತು ಪ್ರಾದೇಶಿಕ ಅಸಮಾನತೆ, ಆರ್ಥಿಕ ಏರಿಳಿತಗಳು, ನೈಸರ್ಗಿಕ ಸಂಪನ್ಮೂಲಗಳ ಕ್ಷೀಣಿಸುವಿಕೆ

ಇತ್ಯಾದಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಇಂತಹ ಸಮಸ್ಯೆಗಳು ಮತ್ತು ಇವುಗಳಿಗೆ ಸೂಕ್ತವಾದ ಪರಿಹಾರ ಕ್ರಮಗಳನ್ನು ಸೂಚಿಸುವಲ್ಲಿ ಪ್ರಯತ್ನಿಸುವುದನ್ನು ಅರ್ಥಶಾಸ್ತ್ರವು ಅಧ್ಯಯನ ಮಾಡುತ್ತದೆ. ಆದ್ದರಿಂದ ಅರ್ಥಶಾಸ್ತ್ರವು ಜೀವನದ ಗುಣಮಟ್ಟವನ್ನು ಸುಧಾರಿಸಲು ನೀತಿ ಸಲಹೆಗಳನ್ನು ನೀಡುತ್ತದೆ.

ಅಭ್ಯಾಸ

I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಆಡಂಸ್ಮಿತ್‌ರವರು ಅರ್ಥಶಾಸ್ತ್ರವನ್ನು ________ ವಿಜ್ಞಾನವೆಂದು ವ್ಯಾಖ್ಯಾನಿಸಿದ್ದಾರೆ.

   ಅ . ಸಂಪತ್ತು
   ಆ. ಶ್ರಮ
   ಇ. ಬಂಡವಾಳ
   ಈ. ಮೇಲಿನ ಎಲ್ಲವೂ

2. ನವಸಂಪ್ರದಾಯ ಪಂಥದ ಅರ್ಥಶಾಸ್ತ್ರಜ್ಞರೆಂದರೆ ________

   ಅ. ಎ. ಸಿ. ಪಿಗು
   ಆ. ಜೆ. ಬಿ. ಕ್ಲಾರ್ಕ್
   ಇ. ಪ್ರೊ. ಸ್ಯಾಮುಯಲ್ಸನ್
   ಈ. ಅ ಮತ್ತು ಆ ಎರಡು

3. ಎಲ್ಲಾ ಆರ್ಥಿಕ ಚಟುವಟಿಕೆಗಳಿಗೆ ಆಧಾರವೆಂದರೆ ________

   ಅ. ಬಂಡವಾಳ
   ಆ. ಜನರು
   ಇ. ಬಯಕೆಗಳು
   ಈ. ಮೇಲಿನ ಯಾವುದೂ ಅಲ್ಲ

4. ಮಾನವನ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಸರಕು ಮತ್ತು ಸೇವೆಗಳನ್ನು ಬಳಸುವುದನ್ನು ________ ಎನ್ನುವರು.

   ಅ. ಅನುಭೋಗ
   ಆ. ಉತ್ಪಾದನೆ
   ಇ. ವೆಚ್ಚ
   ಈ. ಮೇಲಿನ ಎಲ್ಲವೂ

5. ಆರ್ಥಿಕ ಚಟುವಟಿಕೆಗಳು ಒಳಗೊಂಡಿರುವುದೆಂದರೆ ________

   ಅ. ಯೋಜನೆ
   ಆ. ಉತ್ಪಾದನೆ

ಇ. ಅನುಭೋಗ
ಈ. ಮೇಲಿನ ಎಲ್ಲವೂ

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಅರ್ಥಶಾಸ್ತ್ರವು ________ ನ್ನು ಅಧ್ಯಯನ ಮಾಡುವ ಒಂದು ಸಮಾಜ ವಿಜ್ಞಾನವಾಗಿದೆ.
2. ಕೊರತೆಯ ಕಾರಣದಿಂದ ಉಂಟಾಗುವ ಸಮಸ್ಯೆಗಳನ್ನು ಅರ್ಥಶಾಸ್ತ್ರವು ಅಧ್ಯಯನ ಮಾಡುತ್ತದೆ. ಇದನ್ನು ________ ವಿಜ್ಞಾನವೆಂದೂ ಕರೆಯಲಾಗುತ್ತದೆ.
3. ಒಂದು ವರ್ಷದ ಅವಧಿಯಲ್ಲಿ ಗಳಿಸಿದ ಎಲ್ಲಾ ಜನರ ಒಟ್ಟು ಆದಾಯವನ್ನು _______ಎಂದು ಕರೆಯಲಾಗುತ್ತದೆ.
4. ಉತ್ಪಾದನಾಂಗಗಳಿಂದ ಗಳಿಸಿದ ಆದಾಯದ ಹಂಚಿಕೆಯನ್ನು _______ ಎಂದು ಕರೆಯಲಾಗುತ್ತದೆ.
5. ಸರ್ಕಾರದ ಹಣಕಾಸಿನ ಕಾರ್ಯಾಚರಣೆಗಳನ್ನು ಅಧ್ಯಯನ ಮಾಡುವುದನ್ನು _______ ಎಂದು ಕರೆಯಲಾಗುತ್ತದೆ.

III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಅರ್ಥಶಾಸ್ತ್ರ ಎಂದರೇನು?
2. ಮೂಲ ಆರ್ಥಿಕ ಸಮಸ್ಯೆಗಳನ್ನು ಹೆಸರಿಸಿ.
3. ಉತ್ಪಾದನೆ ಎಂದರೇನು?
4. ರಾಷ್ಟ್ರೀಯ ಆದಾಯ ಎಂದರೇನು?
5. ಅಂತರರಾಷ್ಟ್ರೀಯ ವ್ಯಾಪಾರ ಎಂದರೇನು?

IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಅರ್ಥಶಾಸ್ತ್ರದ ವ್ಯಾಪ್ತಿಯೇನು?
2. ಅರ್ಥಶಾಸ್ತ್ರವನ್ನು ವಿವರಿಸುವ ವಿವಿಧ ಬಗೆಗಳನ್ನು ಪಟ್ಟಿಮಾಡಿರಿ.
3. ಅರ್ಥಶಾಸ್ತ್ರದ ಸಂಪತ್ತಿನ ವ್ಯಾಖ್ಯಾನವೇನು?
4. ಆಲ್‌ಫ್ರೆಡ್ ಮಾರ್ಷಲ್‌ರವರು ನೀಡಿರುವ ಅರ್ಥಶಾಸ್ತ್ರದ ಯೋಗಕ್ಷೇಮ ವ್ಯಾಖ್ಯಾನದ ಅರ್ಥ ತಿಳಿಸಿ.
5. ಕೇನ್ಸ್‌ರವರ ಅರ್ಥಶಾಸ್ತ್ರದ ವ್ಯಾಖ್ಯಾನವನ್ನು ತಿಳಿಸಿ.

V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.

1. ಅರ್ಥಶಾಸ್ತ್ರದ ಮೇಲಿನ ವಿವಿಧ ವ್ಯಾಖ್ಯಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಅರ್ಥಶಾಸ್ತ್ರದ ಕೊರತೆಯ ವ್ಯಾಖ್ಯಾನದ ಮೇಲೆ ಸಂಕ್ಷಿಪ್ತವಾಗಿ ಟಿಪ್ಪಣಿ ಬರೆಯಿರಿ.
3. ಅರ್ಥಶಾಸ್ತ್ರದ ಅರ್ಥವನ್ನು ಸಂಕ್ಷಿಪ್ತವಾಗಿ ವಿವರಿಸಿ.

4. ಅರ್ಥಶಾಸ್ತ್ರದಲ್ಲಿ ಯೋಜನೆ ಮತ್ತು ವಿತರಣೆ ಚಟುವಟಿಕೆಯ ಮೇಲೆ ಟಿಪ್ಪಣಿ ಬರೆಯಿರಿ.
5. ಸಾರ್ವಜನಿಕ ಹಣಕಾಸು ಪರಿಕಲ್ಪನೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.

ನಿಯೋಜಿತ ಕಾರ್ಯ:

1. ಕೆಲವು ಅರ್ಥಶಾಸ್ತ್ರಜ್ಞರು ಮತ್ತು ಅವರ ಕೊಡುಗೆಯನ್ನು ಪಟ್ಟಿ ಮಾಡಿರಿ.
2. ಭಾರತದ ಕೆಲವು ಅರ್ಥಶಾಸ್ತ್ರಜ್ಞರು ಮತ್ತು ಅವರ ಕೊಡುಗೆಯನ್ನು ಪಟ್ಟಿ ಮಾಡಿರಿ.

ಅಧ್ಯಾಯ-2 ಮೂಲಭೂತ ಆರ್ಥಿಕ ಸಮಸ್ಯೆಗಳು

''ಕೊರತೆಯು ಅರ್ಥಶಾಸ್ತ್ರದ ಮೂಲಭೂತ ಸಮಸ್ಯೆಯಾಗಿದ್ದು, ಅದು ಅಸ್ತಿತ್ವದಲ್ಲಿ ಇರದಿದ್ದರೆ ನನ್ನ ಅರ್ಥಶಾಸ್ತ್ರದ ಅಧ್ಯಯನಕ್ಕೆ ಕಾರಣವೇ ಇರುತ್ತಿರಲಿಲ್ಲ. ಜನರು ಹೇಗೆ ಮಿತವಾದ ಸಂಪನ್ಮೂಲಗಳನ್ನು ಬಳಸಿ ತಮ್ಮ ಅಪರಿಮಿತವಾದ ಬಯಕೆಗಳನ್ನು ಈಡೇರಿಸಿಕೊಳ್ಳುತ್ತಾರೆ ಮತ್ತು ಅಗತ್ಯಗಳ ಸಹಾಯದಿಂದ ತಮ್ಮ ಬಳಿ ಇರುವ ಸಂಪನ್ಮೂಲಗಳನ್ನು ಹೇಗೆ ಸದ್ಬಳಕೆ ಮಾಡಿಕೊಳ್ಳಬೇಕು ಎಂಬುದರ ಅಧ್ಯಯನಕ್ಕೆ ಸಮಯವನ್ನು ಮೀಸಲಿಡಲಾಗಿದೆ.'' ಕರ್ಟ್ ಬಿಲ್ಸ್

ಪೀಠಿಕೆ:

ಉತ್ಪಾದನೆ, ಅನುಭೋಗ, ಹಂಚಿಕೆ, ಸರಕು ಮತ್ತು ಸೇವೆಗಳ ವಿನಿಮಯವು ಮೂಲಭೂತ ಆರ್ಥಿಕ ಚಟುವಟಿಕೆಗಳು. ಇವುಗಳನ್ನು ನಿರ್ವಹಿಸುವಾಗ ಪ್ರತಿ ಆರ್ಥಿಕತೆಯು ಕೆಲ ಮೂಲಭೂತ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತವೆ. ಹಾಗಾದರೆ ಅರ್ಥವ್ಯವಸ್ಥೆಯ ಮೂಲಭೂತ ಆರ್ಥಿಕ ಸಮಸ್ಯೆಗಳು ಯಾವುವು? ಈ ಸಮಸ್ಯೆಗಳು ಏಕೆ ಉದ್ಭವಿಸುತ್ತದೆ? ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ ಈ ಎಲ್ಲಾ ಪ್ರಶ್ನೆಗಳಿಗೆ ನೀವು ಉತ್ತರಿಸಲು ಶಕ್ತರಾಗುತ್ತೀರಿ, ಅಲ್ಲದೇ ಮೂಲಭೂತ ಆರ್ಥಿಕ ಸಮಸ್ಯೆಯ ಪ್ರಮುಖ ವಿಷಯಗಳನ್ನು ಅರ್ಥಮಾಡಿಕೊಳುತ್ತೀರಿ.

ಮೂಲಭೂತ ಆರ್ಥಿಕ ಸಮಸ್ಯೆಗಳು:

ಬಯಕೆಯು ಒಂದು ರೀತಿಯಲ್ಲಿ ಅಪೇಕ್ಷೆಯೇ ಆಗಿದೆ. ಮಾನವನ ಬಯಕೆಗಳು ಸಂಖ್ಯೆ ಮತ್ತು ವೈವಿಧ್ಯತೆಯಲ್ಲಿ ಅಪರಿಮಿತವಾಗಿದೆ. ಈ ಬಯಕೆಗಳನ್ನು ಅಗತ್ಯ, ಸುಖದಾಯಕ ಮತ್ತು ಭೋಗವಿಲಾಸಿ ಸರಕುಗಳಾಗಿ ವಿಂಗಡಿಸಬಹುದು. ಆಹಾರ, ಬಟ್ಟೆ ವಸತಿ, ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಇತ್ಯಾದಿಗಳ ಬೇಡಿಕೆಯು ಮೂಲತಃ ಸ್ವಾಭಾವಿಕವಾದವಾಗಿವೆ. ಇವುಗಳನ್ನು ಅಗತ್ಯ ಬೇಡಿಕೆ ಎನ್ನುವರು. ಇವು ಮನುಷ್ಯನ ಮೂಲಭೂತ ಅಗತ್ಯಗಳಾಗಿವೆ.

ಕೆಲ ಸರಕುಗಳ ಬಳಕೆಯು ಮಾನವನ ಜೀವನವನ್ನು ಸುಖದಾಯಕವಾಗಿಸುತ್ತದೆ. ಕುರ್ಚಿ, ಫ್ಯಾನು, ದೂರದರ್ಶಕ, ಏರ್‌ಕಂಡಿಷನರ್, ಬಟ್ಟೆ ಒಗೆಯುವ ಯಂತ್ರ, ಮುಂತಾದವುಗಳ ಬಳಕೆಯು ಜೀವನವನ್ನು ಹೆಚ್ಚು ಆರಾಮದಾಯಕಗೊಳಿಸುತ್ತದೆ. ಆದುದರಿಂದ ಈ ರೀತಿಯ ಸರಕುಗಳ ಬಯಕೆಯನ್ನು 'ಸುಖದಾಯಕ' ಎನ್ನುವರು.

ಅತ್ಯಂತ ಅಮೂಲ್ಯ ಮತ್ತು ಬೆಲೆಬಾಳುವ ರತ್ನ, ಆಭರಣ, ವಿಲಾಸಿ ಕಾರು, ಬಂಗಲೆ ಇತರೆಗಳನ್ನು ಸಾಮಾನ್ಯವಾಗಿ ಶ್ರೀಮಂತ ಜನರು ಬಳಸುವರು. ಈ ಸರಕುಗಳ ಬಯಕೆಯನ್ನು 'ಭೋಗವಿಲಾಸಿ ಬಯಕೆ' ಎನ್ನುವರು.

ಈ ಬಯಕೆಗಳನ್ನು ಈಡೇರಿಸಲು ಲಭ್ಯವಿರುವ ಸಂಪನ್ಮೂಲಗಳು ಮಿತವಾಗಿವೆ ಮತ್ತು ಕೊರತೆಯಲ್ಲಿವೆ. ಆರ್ಥಿಕತೆಯ ಪ್ರಮುಖ ಸಂಪನ್ಮೂಲಗಳೆಂದರೆ ನೈಸರ್ಗಿಕ

ಸಂಪನ್ಮೂಲಗಳು, ಕುಶಲ ಕಾರ್ಮಿಕರು, ಬಂಡವಾಳ ಇತ್ಯಾದಿ. ಇವುಗಳು ಸರಕು ಮತ್ತು ಸೇವೆಯ ಉತ್ಪಾದನೆಯಲ್ಲಿ ಬಳಸಲಾಗುವ ಪ್ರಾಥಮಿಕ ಆದಾನ ಅಥವಾ ಕಚ್ಚಾ ಸರಕುಗಳಾಗಿವೆ. ಅಪರಿಮಿತ ಬಯಕೆಗಳಿಗೆ ಹೋಲಿಸಿದರೆ ಸಂಪನ್ಮೂಲಗಳಲ್ಲಿ ಕೊರತೆಯಿದೆ ಇಲ್ಲವೆ ಅದರ ಪೂರೈಕೆಯಲ್ಲಿನ ಪ್ರಮಾಣ ಸ್ಥಿರವಾಗಿದೆ. ಇವುಗಳು ಕೊರತೆಯಲ್ಲಿರುವುದೇ ಅಲ್ಲದೇ ಇವು ಪರ್ಯಾಯ ಉಪಯುಕ್ತತೆಯನ್ನು ಹೊಂದಿವೆ. ಉದಾಹರಣೆಗೆ ಭೂಮಿಯನ್ನು ಕೃಷಿ ಸರಕಿನ ಉತ್ಪಾದನೆಗೆ ಬಳಸಬಹುದು. ಇಲ್ಲವೇ ಕಾರ್ಖಾನೆ ಅಥವಾ ಮನೆಯ ನಿರ್ಮಾಣಕ್ಕೂ ಬಳಸಬಹುದು. ಒಂದು ಸಮಯದಲ್ಲಿ ಗರಿಷ್ಠ ಉಪಯುಕ್ತತೆಗಾಗಿ ಭೂಮಿಯನ್ನು ಒಂದು ಉದ್ದೇಶಕ್ಕೆ ಮಾತ್ರ ಬಳಸಬಹುದು. ಒಂದು ಆರ್ಥಿಕತೆಯು ತನ್ನ ಹೆಚ್ಚು ಭೂಮಿಯನ್ನು ಕಾರ್ಖಾನೆಗಳ ನಿರ್ಮಾಣಕ್ಕೆ ಬಳಸಿದರೆ ಅಲ್ಲಿ ಕೃಷಿಗೆ ಭೂಮಿಯ ಕೊರತೆ ಉಂಟಾಗುವುದು ಮತ್ತು ಕೃಷಿ ಉತ್ಪಾದನೆ ಕಡಿಮೆಯಾಗುವುದು. ಆದುದರಿಂದ ಆರ್ಥಿಕತೆಯು ತನಗೆ ಕೈಗಾರಿಕಾ ಸರಕು ಇಲ್ಲವೇ ಕೃಷಿ ಸರಕು, ಅನುಭೋಗಿ ಸರಕು ಇಲ್ಲವೇ ಉತ್ಪಾದಕ ಸರಕು, ಅಗತ್ಯ ಸರಕು ಇಲ್ಲವೇ ಐಷರಾಮಿ ಸರಕುಗಳನ್ನು ಉತ್ಪಾದಿಸಬೇಕೇ ಎಂಬುದನ್ನು ನಿರ್ಧರಿಸಬೇಕು. ಇದು ವಿವಿಧ ಸರಕುಗಳ ಉತ್ಪಾದನೆಯಲ್ಲಿ ಉತ್ತಮ ಸಮತೋಲನವನ್ನು ಕಾಪಾಡಿಕೊಳ್ಳಬೇಕು.

ಪ್ರತಿ ಆರ್ಥಿಕತೆಯು ಸಂಪನ್ಮೂಲಗಳ ಕೊರತೆಯನ್ನು ಎದುರಿಸುತ್ತದೆ. ಈ ಸಂಪನ್ಮೂಲಗಳು ಪರ್ಯಾಯ ಉಪಯುಕ್ತತೆಯನ್ನು ಹೊಂದಿವೆ. ಆದರೆ ಮಾನವನ ಬಯಕೆಗಳು ಅಪರಿಮಿತವಾಗಿರುವುದರಿಂದ ಜನರು ಬಯಸುವ ಎಲ್ಲಾ ಬಯಕೆಗಳನ್ನು ಹೊಂದಲು ಸಾಧ್ಯವಿಲ್ಲ ಮತ್ತು ಈಡೇರಿಸಿಕೊಳ್ಳಲು ಸಾಧ್ಯವಾಗುವ ಪರ್ಯಾಯವನ್ನು ಹುಡುಕಬೇಕು. ಹೀಗಾಗಿ ಆಯ್ಕೆಯ ಸಮಸ್ಯೆ ಉದ್ಭವಿಸುತ್ತದೆ. ಹಾಗಾಗಿ ಆಯ್ಕೆಯನ್ನು ಮಾಡುವುದು ಮೂಲ ಆರ್ಥಿಕ ಸಮಸ್ಯೆಯಾಗಿದೆ. ಆದುದರಿಂದ ಅರ್ಥಶಾಸ್ತ್ರವನ್ನು 'ಪರ್ಯಾಯಗಳ ವಿಜ್ಞಾನ' ಎನ್ನುವರು. ಆರ್ಥಿಕತೆಯು ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳನ್ನು ಮೂರು ವಿಧಗಳಾಗಿ ವಿಂಗಡಿಸಬಹುದು. ಇವುಗಳನ್ನು 'ಏನು', 'ಹೇಗೆ', ಮತ್ತು 'ಯಾರಿಗೆ' ಎಂಬ ಸಮಸ್ಯೆಗಳೆಂದು ಕರೆಯುವರು. ಇವು ಸಂಪನ್ಮೂಲಗಳ ಕೊರತೆಯಿಂದಾಗಿ ಉದ್ಭವಿಸುತ್ತವೆ.

ಏನನ್ನು ಉತ್ಪಾದಿಸಬೇಕು?

ಆರ್ಥಿಕತೆಯ ಮೊಟ್ಟಮೊದಲ ಮತ್ತು ಅತಿ ಪ್ರಮುಖವಾದ ಸಮಸ್ಯೆಯೆಂದರೆ ಯಾವ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಬೇಕು? ಮತ್ತು ಅದನ್ನು ಯಾವ ಪ್ರಮಾಣದಲ್ಲಿ ಉತ್ಪಾದಿಸಬೇಕು? ಎಂಬುದಾಗಿದೆ. ಇದು ಸರಕುಗಳು ಮತ್ತು ಅವುಗಳ ಉತ್ಪಾದನೆಯ ಪ್ರಮಾಣದ ಆಯ್ಕೆಯ ಸಮಸ್ಯೆಯಾಗಿದೆ. ಇದು ಕೊರತೆಯಲ್ಲಿರುವ ಸಂಪನ್ಮೂಲಗಳನ್ನು ಆರ್ಥಿಕತೆಯ ಒಟ್ಟು ಉತ್ಪಾದನೆಯ ಸಂಯೋಜನೆಗೆ ತಕ್ಕಂತೆ ಹಂಚುವುದಾಗಿದೆ. ಆರ್ಥಿಕತೆಯು ಬಂಡವಾಳ ಸರಕು ಅಥವಾ ಅನುಭೋಗಿ ಸರಕು, ಅಗತ್ಯ ಸರಕು, ಸುಖದಾಯಕ ಸರಕು ಅಥವಾ ಐಷರಾಮಿ ಸರಕು, ಕೃಷಿ ಸರಕು ಅಥವಾ ಕೈಗಾರಿಕಾ ಸರಕನ್ನು ಉತ್ಪಾದಿಸಬೇಕೆ ಎಂಬುದನ್ನು ನಿರ್ಧರಿಸಬೇಕು. ಒಂದು ದೇಶವು ಪ್ರಸ್ತುತ ಅನುಭೋಗಿ ಸರಕುಗಳ ಉತ್ಪಾದನೆಗೆ ಆದ್ಯತೆ ನೀಡಿದರೆ ಭವಿಷ್ಯದಲ್ಲಿ ಅದಕ್ಕೆ ಕಡಿಮೆ ಆದ್ಯತೆ ಸಿಗುವುದು. ಕೆಲ ಸರಕುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಿದರೆ ಇನ್ನೂ ಕೆಲ

ಸರಕುಗಳನ್ನು ಕಡಿಮೆ ಪ್ರಮಾಣದಲ್ಲಿ ಉತ್ಪಾದಿಸಲಾಗುವುದು. ಹಾಗಾಗಿ ಪ್ರಸ್ತುತ ಮತ್ತು ಭವಿಷ್ಯದ ಅಗತ್ಯತೆಗಳ ನಡುವೆ ಸಮತೋಲನವನ್ನು ಕಾಪಾಡಬೇಕು.

ಹೇಗೆ ಉತ್ಪಾದಿಸಬೇಕು?

ಈ ಸಮಸ್ಯೆಯು ಆಯ್ಕೆಯ ತಂತ್ರಕ್ಕೆ ಸಂಬಂಧಿಸಿದಾಗಿದೆ. ಇದು ಆರ್ಥಿಕತೆಯಲ್ಲಿ ನಿರ್ಣಾಯಕ ವಿಷಯವಾಗಿದೆ. ಉತ್ಪಾದನೆಯಲ್ಲಿ ಹೆಚ್ಚು ಶ್ರಮ ಬಳಸಬೇಕೇ ಅಥವಾ ಹೆಚ್ಚು ಯಂತ್ರವನ್ನು ಬಳಸಬೇಕೇ ಎಂಬುದನ್ನು ಆರ್ಥಿಕತೆ ನಿರ್ಧರಿಸಬೇಕು. ಹಾಗಾಗಿ ಉತ್ಪಾದನಾ ತಂತ್ರದಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ;

1. ಶ್ರಮ ಸಾಂದ್ರ ತಂತ್ರಜ್ಞಾನ
2. ಬಂಡವಾಳ ಸಾಂದ್ರ ತಂತ್ರಜ್ಞಾನ

ಯಾವ ಉತ್ಪಾದನಾ ತಂತ್ರದಲ್ಲಿ ಬಂಡವಾಳಕ್ಕಿಂತ ಹೆಚ್ಚು ಶ್ರಮ ಬಳಕೆಯಾಗುತ್ತದೆಯೋ ಅದನ್ನು ಶ್ರಮ ಸಾಂದ್ರ ತಂತ್ರಜ್ಞಾನ ಎನ್ನುವರು. ಇದು ಆರ್ಥಿಕತೆಯಲ್ಲಿ ಯಥೇಚ್ಛವಾಗಿ ಉದ್ಯೋಗಾವಕಾಶವನ್ನು ಸೃಷ್ಟಿಸುತ್ತದೆ. ಯಾವ ಉತ್ಪಾದನಾ ತಂತ್ರದಲ್ಲಿ ಶ್ರಮಕ್ಕಿಂತ ಹೆಚ್ಚು ಬಂಡವಾಳ ಬಳಕೆಯಾಗುತ್ತದೆಯೋ ಅದನ್ನು ಬಂಡವಾಳ ಸಾಂದ್ರ ತಂತ್ರಜ್ಞಾನ ಎನ್ನುವರು. ಈ ಎರಡರ ನಡುವಿನ ಆಯ್ಕೆಯು ನಿರ್ಣಾಯಕವಾಗಿದೆ.

ಆಯ್ಕೆಯ ತಂತ್ರದ ಸಮಸ್ಯೆಯು ಪ್ರಮುಖವಾಗಿ ಆರ್ಥಿಕತೆಯಲ್ಲಿ ಲಭ್ಯವಿರುವ ಸಂಪನ್ಮೂಲವನ್ನು ಅವಲಂಬಿಸಿದೆ. ಆರ್ಥಿಕತೆಯು ಸಾಪೇಕ್ಷವಾಗಿ ಹೇರಳವಾಗಿರುವ ಸಂಪನ್ಮೂಲವನ್ನು ಹೆಚ್ಚು ಬಳಸುವರು. ಅಗ್ಗದ ಶ್ರಮವು ಹೇರಳವಾಗಿ ಲಭ್ಯವಿದ್ದರೆ ಶ್ರಮಸಾಂದ್ರ ತಂತ್ರಜ್ಞಾನವನ್ನು ಬಳಸಲಾಗುವುದು. ಆದರೆ ಶ್ರಮವು ಕೊರತೆಯಲ್ಲಿದ್ದು, ದುಬಾರಿಯಾಗಿದ್ದರೆ ಬಂಡವಾಳ ಸಾಂದ್ರ ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಉದಾಹರಣೆಗೆ ಭಾರತದಲ್ಲಿ ಶ್ರಮವು ಹೇರಳವಾಗಿದೆ ಮತ್ತು ಅಗ್ಗವಾಗಿದೆ. ಅಲ್ಲದೇ ಹೆಚ್ಚಿನ ಉದ್ಯೋಗಾವಕಾಶವನ್ನು ಸೃಷ್ಟಿಸಲು ಶ್ರಮಸಾಂದ್ರ ತಂತ್ರಜ್ಞಾನವು ಸರಿಯಾದ ಆಯ್ಕೆಯಾಗಿದೆ.

ಯಾರಿಗಾಗಿ ಉತ್ಪಾದಿಸಬೇಕು?

ಇದು ಹಂಚಿಕೆಯ ಸಮಸ್ಯೆಯಾಗಿದೆ. ಉತ್ಪಾದಿಸಿದ ಎಲ್ಲಾ ಸರಕು ಮತ್ತು ಸೇವೆಗಳನ್ನು ಸಮಾಜದ ಸದಸ್ಯರಿಗೆ ಹಂಚಿಕೆಯಾಗಬೇಕು. ಇದನ್ನು ಮಾರುಕಟ್ಟೆಯ ಮೂಲಕ ಹಂಚಿಕೆಯನ್ನು ಮಾಡಲಾಗುವುದು. ಉತ್ಪಾದಕರು ವಿವಿಧ ಸರಕು ಮತ್ತು ಸೇವೆಯನ್ನು ಉತ್ಪಾದಿಸಲು ಉತ್ಪಾದನಾಂಗಗಳನ್ನು ನಿಯೋಜಿಸುವರು. ಈ ಉತ್ಪಾದನಾಂಗಗಳ ಪೂರೈಕೆದಾರರು ಗೇಣಿ, ಕೂಲಿ, ಬಡ್ಡಿ ಮತ್ತು ಲಾಭದ ರೂಪದಲ್ಲಿ ಆದಾಯವನ್ನು ಪಡೆಯುವರು. ಈ ಒಟ್ಟಾರೆ ಆದಾಯವು ರಾಷ್ಟ್ರೀಯ ಆದಾಯವಾಗುತ್ತದೆ. ಆರ್ಥಿಕತೆಯಲ್ಲಿ ರಾಷ್ಟ್ರೀಯ ಆದಾಯವು ಜನರಿಗೆ ವಿತರಣೆಯಾಗಬೇಕು. ರಾಷ್ಟ್ರೀಯ ಆದಾಯವು ಜನರಿಗೆ ಸಮಾನವಾಗಿ ಹಂಚಿಕೆಯಾದರೆ, ಅದು ಸ್ವಾಭಾವಿಕವಾಗಿ ಸರಕು ಮತ್ತು ಸೇವೆಗಳ ಸಮಾನ ಹಂಚಿಕೆಗೆ ದಾರಿಯಾಗುವುದು. ಆದರೆ ಆರ್ಥಿಕತೆಯಲ್ಲಿ

ಶ್ರೀಮಂತರು, ಮಧ್ಯಮ ವರ್ಗ ಮತ್ತು ಬಡವರು ಎಂಬ ಹಲವು ಜನರ ಗುಂಪುಗಳಿರುತ್ತವೆ. ಇವುಗಳಿಗೆ ವಿವಿಧ ಬಗೆಯ ಸರಕು ಮತ್ತು ಸೇವೆಗಳ ಅಗತ್ಯವಿದೆ. ಆದುದರಿಂದ ಉದ್ಭವವಾಗುವ ಪ್ರಮುಖ ಪ್ರಶ್ನೆಗಳೆಂದರೆ, ಯಾರಿಗಾಗಿ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವುದು? ಯಾರು ಅನುಭೋಗಿಸಲು ಎಷ್ಟು ಸರಕು ಪಡೆಯಬೇಕು? ಹಾಗಾಗಿ ಆರ್ಥಿಕತೆಯಲ್ಲಿ ವಿವಿಧ ಜನರ ಗುಂಪುಗಳ ನಡುವೆ ಸರಕು ಮತ್ತು ಸೇವೆಗಳ ವಿತರಣೆಯಲ್ಲಿ ಸರಿಯಾದ ಸಮತೋಲನ ಕಾಪಾಡಿಕೊಳ್ಳಬೇಕು.

ಇತರೆ ಸಮಸ್ಯೆಗಳು:

ಮೇಲಿನ ಮೂರು ಮೂಲಭೂತ ಸಮಸ್ಯೆಗಳ ಹೊರತಾಗಿ ಆರ್ಥಿಕತೆಯು ಇನ್ನೂ ಕೆಲವು ಪ್ರಮುಖ ಸಮಸ್ಯೆಗಳನ್ನು ಎದುರಿಸುತ್ತಿದೆ. ಅವುಗಳೆಂದರೆ:

ಆರ್ಥಿಕ ದಕ್ಷತೆಯ ಸಮಸ್ಯೆ:

ಆರ್ಥಿಕ ದಕ್ಷತೆಯು ಒಂದು ಆರ್ಥಿಕ ಸ್ಥಿತಿಯಾಗಿದ್ದು, ಇಲ್ಲಿ ಪ್ರತಿ ಸಂಪನ್ಮೂಲವನ್ನು ಗರಿಷ್ಠವಾಗಿ ಹಂಚಿಕೆ ಮಾಡುವುದರಿಂದ, ಅಪವ್ಯಯವು ಕಡಿಮೆಯಾಗುತ್ತದೆ. ಉತ್ಪಾದನೆಯಲ್ಲಿ ಮತ್ತು ಸರಕು ಸೇವೆಗಳ ಹಂಚಿಕೆಯಲ್ಲಿ ದಕ್ಷತೆಯನ್ನು ತರುವುದು ಪ್ರಮುಖ ವಿಷಯವಾಗಿದೆ. ಉತ್ಪಾದಕ ಸಂಪನ್ಮೂಲಗಳು ವಿರಳವಾಗಿರುವುದರಿಂದ ಉತ್ಪಾದನಾ ಪ್ರಕ್ರಿಯೆಯಲ್ಲಿ ಸಂಪನ್ಮೂಲಗಳು ಅಪವ್ಯಯವಾಗದಂತೆ ಎಚ್ಚರಿಕೆಯನ್ನು ವಹಿಸಬೇಕು. ಉತ್ಪಾದಿಸಿದ ಸರಕು ಮತ್ತು ಸೇವೆಗಳನ್ನು ಅನುಭೋಗಿಗಳಿಗೆ ದಕ್ಷವಾಗಿ ವಿತರಣೆಯಾದರೆ ಗರಿಷ್ಠ ಆರ್ಥಿಕ ಕಲ್ಯಾಣ ದೊರಕುತ್ತದೆ.

ಪೂರ್ಣ ಉದ್ಯೋಗದ ಸಮಸ್ಯೆ:

ಸಂಪನ್ಮೂಲಗಳನ್ನು ಗರಿಷ್ಠವಾಗಿ ಬಳಸುವ ವಿಚಾರವೆ ಪ್ರಮುಖ ಸಮಸ್ಯೆಯಾಗಿದೆ. ಉತ್ಪಾದಕ ಸಂಪನ್ಮೂಲಗಳಾದ ನೈಸರ್ಗಿಕ ಸಂಪನ್ಮೂಲಗಳು, ಶ್ರಮ ಮತ್ತು ಬಂಡವಾಳವನ್ನು ಆರ್ಥಿಕ ಅಭಿವೃದ್ಧಿಗಾಗಿ ಪೂರ್ಣವಾಗಿ ಮತ್ತು ದಕ್ಷವಾಗಿ ಬಳಸಬೇಕು. ಆರ್ಥಿಕತೆಯಲ್ಲಿ ಈ ಸಂಪನ್ಮೂಲಗಳನ್ನು ಪೂರ್ಣವಾಗಿ ತೊಡಗಿಸಿಕೊಳ್ಳುವುದು ಸವಾಲಿನ ವಿಷಯವಾಗಿದೆ. ಯಾವಾಗ ವಿವಿಧ ಉತ್ಪಾದಕ ಸಂಪನ್ಮೂಲಗಳನ್ನು ಹಲವು ಸರಕುಗಳ ಉತ್ಪಾದನೆ ಮಾಡುವ ಉತ್ಪಾದಕರು ಮತ್ತು ಉತ್ಪಾದಿಸಲ್ಪಟ್ಟ ಸರಕು ಸೇವೆಗಳನ್ನು ವಿವಿಧ ಗ್ರಾಹಕರಿಗೆ ವಿತರಣೆ ಮಾಡಲು ಆದರ್ಶವಾಗಿ ಹಂಚಿಕೆಯಾದಾಗ ಮಾತ್ರ ಗರಿಷ್ಠ ಯೋಗಕ್ಷೇಮ ಸಾಧಿಸಬಹುದು.

ಆರ್ಥಿಕ ಬೆಳವಣಿಗೆಯ ಸಮಸ್ಯೆ:

ಸರಕು ಮತ್ತು ಸೇವೆಗಳ ಉತ್ಪಾದನಾ ಸಾಮರ್ಥ್ಯದಲ್ಲಿನ ನಿರಂತರ ಏರಿಕೆಯನ್ನು ಆರ್ಥಿಕ ಬೆಳವಣಿಗೆ ಎನ್ನುವರು ಅಥವಾ ಆರ್ಥಿಕತೆಯಲ್ಲಿ ರಾಷ್ಟ್ರೀಯ ಆದಾಯದಲ್ಲಿನ ನಿರಂತರ ಏರಿಕೆಯನ್ನು ಆರ್ಥಿಕ ಬೆಳವಣಿಗೆ ಎನ್ನುವರು. ರಾಷ್ಟ್ರೀಯ ಆದಾಯದಲ್ಲಿನ ಏರಿಕೆಯು ಸ್ಥಿರವಾಗಿರಬೇಕು. ಇದನ್ನು 'ಆರ್ಥಿಕ ಸ್ಥಿರತೆ' ಎನ್ನುವರು.

ಆರ್ಥಿಕತೆಯ ಬೆಳವಣಿಗೆಯು ಹೂಡಿಕೆಯ ಗಾತ್ರವನ್ನು ಅವಲಂಬಿಸಿದೆ. ಹೂಡಿಕೆಯ ಪ್ರಮಾಣವು ಹೆಚ್ಚಾಗಿದ್ದರೆ, ಆರ್ಥಿಕತೆಯ ಬೆಳವಣಿಗೆಯ ದರವು ಅಧಿಕವಾಗಿರುವುದು. ಆರ್ಥಿಕತೆಯ ಬೆಳವಣಿಗೆಯ ದರವು ಹೆಚ್ಚಾದರೆ, ತಲಾದಾಯ ಮತ್ತು ಜನರ ಜೀವನದ

ಗುಣಮಟ್ಟವು ಹೆಚ್ಚಾಗುವುದು. ಆದರೆ ಆಧುನಿಕ ಅರ್ಥವ್ಯವಸ್ಥೆಯಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸುವುದು ಪ್ರಮುಖ ಸಮಸ್ಯೆಯಾಗಿದೆ.

ಚರ್ಚಿಸಿದ ಎಲ್ಲಾ ಸಮಸ್ಯೆಗಳು ಎಲ್ಲಾ ಆರ್ಥಿಕತೆಯಲ್ಲಿ ಸಾಮಾನ್ಯವಾಗಿದೆ. ಆದರೆ ಈ ಸಮಸ್ಯೆಗಳ ಸ್ವರೂಪ ಮತ್ತು ಪ್ರಮಾಣವು ಒಂದು ಆರ್ಥಿಕತೆಯಿಂದ ಮತ್ತೊಂದು ಆರ್ಥಿಕತೆಗೆ ಭಿನ್ನವಾಗಿರುತ್ತದೆ. ಪ್ರತಿ ಆರ್ಥಿಕತೆಯು ತನ್ನದೇ ಆದ ರೀತಿಯಲ್ಲಿ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತವೆ.

ಅಭ್ಯಾಸ

I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಬಯಕೆಗಳನ್ನು ________ ಎಂದು ವರ್ಗೀಕರಿಸಬಹುದು.

ಅ. ಅಗತ್ಯಗಳು
ಆ. ಸುಖದಾಯಕಗಳು
ಇ. ಐಷರಾಮಿಗಳು
ಈ. ಮೇಲಿನ ಎಲ್ಲವೂ

2. ಆರ್ಥಿಕತೆಯು ಮೂಲಭೂತವಾಗಿ ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳನ್ನು ________ ವಿಧಗಳಾಗಿ ವರ್ಗೀಕರಿಸಬಹುದು.

ಅ. ಎರಡು
ಆ. ಮೂರು
ಇ. ನಾಲ್ಕು
ಈ. ಐದು

3. ಮಾನವ ಬಯಕೆಗಳು .

ಅ. ಮಿತವಾಗಿವೆ.
ಆ. ಅಪರಿಮಿತವಾಗಿವೆ
ಇ. ವಿವರಿಸಲು ಅಸಾಧ್ಯ
ಈ. ಮೇಲಿನ ಯಾವುದೂ ಅಲ್ಲ ________

4. ದೂರದರ್ಶನ (ಟಿ. ವಿ.) ಯು ________ ಗೆ ಉದಾಹರಣೆಯಾಗಿದೆ.

ಅ. ಅಗತ್ಯ ಬಯಕೆ
ಆ. ಸುಖದಾಯಕ ಬಯಕೆ
ಇ. ಐಷರಾಮಿ ಬಯಕೆ
ಈ. ಅ ಮತ್ತು ಆ ಎರಡೂ

5. ಸರಕು ಮತ್ತು ಸೇವೆಗಳ ಉತ್ಪಾದನೆಯಲ್ಲಿನ ಸಾಮರ್ಥ್ಯದಲ್ಲಿನ ನಿರಂತರ ಹೆಚ್ಚಳವನ್ನು ________ ಎನ್ನುವರು.

   ಅ. ಆರ್ಥಿಕ ಬೆಳೆವಣಿಗೆ
   ಆ. ಪೂರ್ಣ ಉದ್ಯೋಗ
   ಇ. ಆರ್ಥಿಕ ದಕ್ಷತೆ
   ಈ. ಮೇಲಿನ ಯಾವುದೂ ಅಲ್ಲ

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಅರ್ಥಶಾಸ್ತ್ರವನ್ನು ________ ವಿಜ್ಞಾನ ಎಂದು ವಿವರಿಸುವರು.
2. ಮಾನವನ ಬಯಕೆಗಳ ಸಂಖ್ಯೆ ಮತ್ತು ________ ಅಪರಿಮಿತವಾಗಿವೆ.
3. ಬಯಕೆ ಒಂದು ರೀತಿಯಲ್ಲಿ ________ ಆಗಿದೆ.
4. ಉತ್ಪಾದನೆ ಮತ್ತು ಹಂಚಿಕೆಯಲ್ಲಿನ ದಕ್ಷತೆಯು ಗರಿಷ್ಠ ________ ನ್ನು ತರುವುದು.
5. ಯಾವ ಉತ್ಪಾದನಾ ತಂತ್ರಜ್ಞಾನದಲ್ಲಿ ಬಂಡವಾಳಕ್ಕಿಂತ ಶ್ರಮವನ್ನೇ ಅಧಿಕವಾಗಿ ಬಳಸುವರೋ ಅದನ್ನು ________ ಎನ್ನುವರು.

III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ‘ಬಯಕೆ’ ಎಂದರೇನು?
2. ಅಗತ್ಯ ಬಯಕೆಗಳಿಗೆ ಎರಡು ಉದಾಹರಣೆ ನೀಡಿರಿ.
3. ಐಷರಾಮಿ ಬಯಕೆಗಳು ಎಂದರೇನು?
4. ಆರ್ಥಿಕತೆಯ ಮೂಲಭೂತ ಆರ್ಥಿಕ ಸಮಸ್ಯೆಗಳನ್ನು ಪಟ್ಟಿಮಾಡಿರಿ.
5. ಆರ್ಥಿಕ ಬೆಳವಣಿಗೆ ಎಂದರೇನು?

IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಬಯಕೆಯನ್ನು ವರ್ಗೀಕರಿಸುವ ವಿವಿಧ ವಿಧಗಳನ್ನು ಹೆಸರಿಸಿ.
2. ಸುಖದಾಯಕ ಸರಕು ಎಂದರೇನು? ಅವುಗಳನ್ನು ಪಟ್ಟಿಮಾಡಿರಿ.
3. ವಿವಿಧ ಉತ್ಪಾದನಾ ತಂತ್ರಗಳನ್ನು ಪಟ್ಟಿಮಾಡಿರಿ.
4. ಆರ್ಥಿಕತೆಯ ಮೂಲಭೂತ ಸಮಸ್ಯೆಗಳನ್ನು ಹೊರತುಪಡಿಸಿ ಇತರೆ ಸಮಸ್ಯೆಗಳನ್ನು ಪಟ್ಟಿ ಮಾಡಿರಿ.
5. ಆರ್ಥಿಕತೆಯಲ್ಲಿ ಪೂರ್ಣ ಉದ್ಯೋಗದ ಸಮಸ್ಯೆಯನ್ನು ವಿವರಿಸಿ.

V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.

1. ಬಯಕೆಯ ವಿವಿಧ ವಿಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ‘ಏನನ್ನು ಉತ್ಪಾದಿಸುವುದು?’ ಇದರ ಅರ್ಥವನ್ನು ವಿವರಿಸಿ.
3. ‘ಯಾರಿಗಾಗಿ ಉತ್ಪಾದಿಸುವುದು?’ ಇದರ ಅರ್ಥವನ್ನು ಚರ್ಚಿಸಿ.
4. ಉತ್ಪಾದನೆಯ ವಿವಿಧ ತಂತ್ರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

5. ಆರ್ಥಿಕತೆಯ ಆರ್ಥಿಕ ಬೆಳವಣಿಗೆಯ ಸಮಸ್ಯೆಗಳ ಬಗ್ಗೆ ಟಿಪ್ಪಣಿ ಬರೆಯಿರಿ.

ಯೋಜನಾ ಕಾರ್ಯ:

1. ನಿಮ್ಮ ಮತ್ತು ನಿಮ್ಮ ಸ್ನೇಹಿತರ ವಿವಿಧ ಬಯಕೆಗಳನ್ನು ಪಟ್ಟಿಮಾಡಿರಿ ಮತ್ತು ವಿಧಗಳಾಗಿ ಅವುಗಳನ್ನು ವರ್ಗೀಕರಿಸಿ.
2. ನಿಮ್ಮ ಜಿಲ್ಲೆಯ ವಿವಿಧ ಆರ್ಥಿಕ ಸಮಸ್ಯೆಗಳನ್ನು ಪಟ್ಟಿಮಾಡಿರಿ.

ಅಧ್ಯಾಯ-3 ಆರ್ಥಿಕ ವ್ಯವಸ್ಥೆ

''ನಮ್ಮ ಆರ್ಥಿಕ ವ್ಯವಸ್ಥೆ ಉಳಿದುಕೊಳಬೇಕಾದರೆ, ಸಂಪತ್ತಿನ ಉತ್ತಮ ಹಂಚಿಕೆ ಇರಬೇಕಾಗುತ್ತದೆ. ನಾವು ಕೆಲವು ಜನರು ಅತಿ ಸಮೃದ್ಧಿಯಿಂದ, ವೈಭವಪೂರಿತ ಸಂಪತ್ತಿನಲ್ಲಿ ವಾಸಿಸುವಂತೆ, ಇನ್ನು ಕೆಲವರು ಕಡು ಬಡತನದಲ್ಲಿ ವಾಸಿಸುವಂತ ವ್ಯವಸ್ಥೆಯಲ್ಲಿ ಇರಲು ಸಾಧ್ಯವಿಲ್ಲ.'' ಮಾರ್ಟಿನ್ ಲೂಥರ್ ಕಿಂಗ್

ಪೀಠಿಕೆ:

ನಮ್ಮ ದೈನಂದಿನ ಜೀವನದಲ್ಲಿ ನಮಗೆಲ್ಲರಿಗೂ ಅನೇಕ ಸರಕು ಮತ್ತು ಸೇವೆಗಳ ಅಗತ್ಯವಿ ತ್ತದೆ. ಇವುಗಳನ್ನು ಯಾರು ಉತ್ಪಾದಿಸುತ್ತಾರೆ? ಹೇಗೆ ಉತ್ಪಾದಿಸುತ್ತಾರೆ? ಮತ್ತು ಹೇಗೆ ಅವುಗಳನ್ನು ವಿತರಿಸುತ್ತಾರೆ ಎಂಬ ಚಿಂತೆಯಿಲ್ಲದೇ ನಾವು ಅವುಗಳನ್ನು ಮಾರುಕಟ್ಟೆಯಲ್ಲಿ ಕೊಂಡುಕೊಳ್ಳುತ್ತೇವೆ. ಆರ್ಥಿಕ ವ್ಯವಸ್ಥೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಸಹಾಯಕವಾಗಿದೆ. ಹಾಗಾದರೆ ಆರ್ಥಿಕ ವ್ಯವಸ್ಥೆ ಎಂದರೇನು? ಆರ್ಥಿಕ ವ್ಯವಸ್ಥೆಯ ವಿವಿಧ ಮಾದರಿಗಳು ಯಾವುವು? ವಿವಿಧ ಆರ್ಥಿಕ ವ್ಯವಸ್ಥೆಗಳ ಪ್ರಮುಖ ಲಕ್ಷಣಗಳು ಯಾವುವು? ವಿವಿಧ ಆರ್ಥಿಕ ವ್ಯವಸ್ಥೆಗಳ ಗುಣಗಳು ಮತ್ತು ಅವಗುಣಗಳಾವುವು? ವಿವಿಧ ಆರ್ಥಿಕ ವ್ಯವಸ್ಥೆಗಳಲ್ಲಿ ಹೇಗೆ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ. ಈ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ಮತ್ತು ಆರ್ಥಿಕ ವ್ಯವಸ್ಥೆಯ ಮೇಲಿನ ಇತರೆ ವಿಷಯಗಳನ್ನು ತಿಳಿದುಕೊಳ್ಳುವುದು ಈ ಅಧ್ಯಾಯದ ಉದ್ದೇಶವಾಗಿದೆ.

ಅರ್ಥವ್ಯವಸ್ಥೆಯ ಅರ್ಥ:

ಯಾಂತ್ರಿಕ ಕೌಶಲ್ಯದ ಮೂಲಕ ಆರ್ಥಿಕತೆಗಳು ಸಂಪನ್ಮೂಲಗಳ ಹಂಚಿಕೆ ಮತ್ತು ವಿತರಣೆಯೊಂದಿಗೆ ಸರಕು ಮತ್ತು ಸೇವೆಗಳ ವ್ಯಾಪಾರ ಮಾಡುವ ಪ್ರಕ್ರಿಯೆಗೆ ಆರ್ಥಿಕ ವ್ಯವಸ್ಥೆ ಎನ್ನುತ್ತಾರೆ. ಇದನ್ನು ಬೇರೆ ಪದಗಳಲ್ಲಿ ಹೇಳುವುದಾದರೆ ಆರ್ಥಿಕತೆಯಲ್ಲಿ ಸರಕು ಮತ್ತು ಸೇವೆಗಳ ಉತ್ಪಾದನೆ ಮತ್ತು ವಿನಿಮಯದ ಜೊತೆಗೆ ಸಂಪನ್ಮೂಲಗಳ ಹಂಚಿಕೆಯ ವ್ಯವಸ್ಥೆಯನ್ನು ಆರ್ಥಿಕ ವ್ಯವಸ್ಥೆ ಎನುತ್ತಾರೆ. ಆರ್ಥಿಕ ವ್ಯವಸ್ಥೆಯು ಸರಕು ಮತ್ತು ಸೇವೆಗಳ ವಿನಿಮಯ ಮತ್ತು ಸಂಪನ್ಮೂಲಗಳ ವಿತರಣೆಗಾಗಿ ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಗಳನ್ನು ನಿಯಂತ್ರಿಸುತ್ತದೆ. ಈ ನಿಯಂತ್ರಣ ಮಾಡುವ ಮಾಲೀಕತ್ವವು ಎಲ್ಲಾ ಆರ್ಥಿಕ ವ್ಯವಸ್ಥೆಗಳಲ್ಲಿ ಒಂದೇ ಆಗಿರುವುದಿಲ್ಲ. ಆದ್ದರಿಂದ ಮಾಲೀಕತ್ವದ ಸ್ವರೂಪ ಮತ್ತು ಉತ್ಪಾದನಾಂಗಗಳ ನಿಯಂತ್ರಣ ಮತ್ತು ಆದಾಯ ವಿತರಣೆಯ ಆಧಾರದ ಮೇಲೆ ಆರ್ಥಿಕ ವ್ಯವಸ್ಥೆಗಳನ್ನು ಬಂಡವಾಳಶಾಹಿ ಅಥವಾ ಮಾರುಕಟ್ಟೆ ಆರ್ಥಿಕತೆ, ಸಮಾಜವಾದಿ ಅಥವಾ ಯೋಜಿತ ಆರ್ಥಿಕ ವ್ಯವಸ್ಥೆ ಮತ್ತು ಮಿಶ್ರ ಆರ್ಥಿಕ ವ್ಯಸ್ಥೆ ಎಂದು ವರ್ಗೀಕರಿಸಲಾಗಿದೆ. ಪ್ರತಿಯೊಂದು ಆರ್ಥಿಕ ವ್ಯವಸ್ಥೆಗಳನ್ನು ಸಂಕ್ಷಿಪ್ತವಾಗಿ ತಿಳಿಯೋಣ.

ಬಂಡವಾಳಶಾಹಿ ಅರ್ಥವ್ಯವಸ್ಥೆ:

ಬಂಡವಾಳಶಾಹಿ ಅರ್ಥವ್ಯವಸ್ಥೆಯು ಅತ್ಯಂತ ಹಳೆಯ ಆರ್ಥಿಕ ವ್ಯವಸ್ಥೆಯಾಗಿದೆ. ಇದು 18 ನೇ ಶತಮಾನದ ಮಧ್ಯಭಾಗದಲ್ಲಿ ಇಂಗ್ಲೆಂಡ್ ದೇಶದಲ್ಲಿ ಕೈಗಾರಿಕಾ ಕ್ರಾಂತಿಯ ಬಳುವಳಿಯಾಗಿ ಅಭಿವೃದ್ಧಿಯಾಯಿತು. ಮೊದಲಿನ ಅರ್ಥಶಾಸ್ತ್ರಜ್ಞರು ಮುಕ್ತ ಆರ್ಥಿಕತೆ ಅಥವಾ ಕನಿಷ್ಠ ಸರ್ಕಾರದ ಹಸ್ತಕ್ಷೇಪದೊಂದಿಗೆ ವೈಯಕ್ತಿಕ ಉದ್ದಿಮೆಯ ಪೂರ್ಣ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು. ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಉತ್ಪಾದನಾಂಗಗಳ ಒಡೆತನವನ್ನು ಖಾಸಗಿ ವ್ಯಕ್ತಿಗಳು ಹೊಂದಿರುತ್ತಾರೆ ಮತ್ತು ಲಾಭಗಳಿಸುವುದು ಮತ್ತು ಸಂಪತ್ತಿನ ಕ್ರೋಢೀಕರಣವೇ ಅವರ ಪ್ರಮುಖ ಗುರಿಯಾಗಿರುತ್ತದೆ. ಸರ್ಕಾರದ ಹಸ್ತಕ್ಷೇಪ ಕನಿಷ್ಠವಾಗಿರುವುದರಿಂದ, ಇಂತಹ ಆರ್ಥಿಕ ವ್ಯವಸ್ಥೆಯನ್ನು ಮುಕ್ತ ಮಾರುಕಟ್ಟೆ ಆರ್ಥಿಕತೆ ಇಲ್ಲವೇ ಮುಕ್ತ ಉದ್ದಿಮೆಗಳ ಆರ್ಥಿಕತೆ ಎಂದು ಸಹ ಕರೆಯುತ್ತಾರೆ. ಇಂತಹ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ಅಮೇರಿಕಾ, ಜಪಾನ್, ಇಂಗ್ಲೆಂಡ್, ಆಸ್ಟ್ರೇಲಿಯಾ ಮತ್ತು ಇತರೆ ಮುಂದುವರಿದ ರಾಷ್ಟ್ರಗಳಲ್ಲಿ ಕಾಣಬಹುದಾಗಿದೆ.

ಬಂಡವಾಳಶಾಹಿ ಅರ್ಥವ್ಯವಸ್ಥೆಯ ಲಕ್ಷಣಗಳು:

ಬಂಡವಾಳಶಾಹಿ ಅರ್ಥವ್ಯವಸ್ಥೆಯ ಪ್ರಮುಖ ಲಕ್ಷಣಗಳೆಂದರೆ:

1. ಖಾಸಗಿ ಆಸ್ತಿ: ಬಂಡವಾಳಶಾಹಿ ವ್ಯವಸ್ಥೆಯಲ್ಲಿ ವ್ಯಕ್ತಿಗಳು ಖಾಸಗಿ ಆಸ್ತಿಯನ್ನು ಸಂಪಾದಿಸುವ ಮತ್ತು ಖಾಸಗಿ ಆಸ್ತಿಯನ್ನು ಹೊಂದುವ ಹಕ್ಕನ್ನು ಹೊಂದಿರುತ್ತಾರೆ. ವ್ಯಕ್ತಿಯು ಆಸ್ತಿಯನ್ನು ಹೊಂದುವುದಲ್ಲದೇ ತಮ್ಮದೇ ಕುಟುಂಬದ ಪ್ರಯೋಜನಕ್ಕಾಗಿ ಬಳಸಬಹುದು. ಈ ವ್ಯವಸ್ಥೆಯಲ್ಲಿ ಭೂಮಿಯ ಒಡೆತನ ಹೊಂದಲು, ಯಂತ್ರಗಳು, ಗಣಿಗಳು, ಕಾರ್ಖಾನೆಗಳ ಮಾಲೀಕತ್ವ ಮತ್ತು ಲಾಭಗಳಿಸಿ, ಸಂಪತ್ತು ಸಂಗ್ರಹಿಸಲು ಯಾವುದೇ ನಿರ್ಬಂಧವಿರುವುದಿಲ್ಲ. ಒಬ್ಬ ವ್ಯಕ್ತಿಯ ಸಾವಿನ ನಂತರ ಆತನ ಆಸ್ತಿ ಅಥವಾ ಸಂಪತ್ತನ್ನು ಕಾನೂನು ಬದ್ಧವಾಗಿ

ಉತ್ತರಾಧಿಕಾರಿಗಳಿಗೆ ವರ್ಗಾಯಿಸಲ್ಪಡುತ್ತದೆ. ಹೀಗಾಗಿ ಖಾಸಗಿ ಆಸ್ತಿಯ ಸ್ಥಾಪನೆ ಅನುವಂಶೀಯತೆಯ ಹಕ್ಕಿನ ಕಾರಣದಿಂದ ನಿರಂತರವಾಗಿ ಮುಂದುವರೆದಿದೆ.

2. ಖಾಸಗಿ ಉದ್ದಿಮೆಗಳ ಸಾತ್ವಂತ್ರ್ಯ: ಈ ಪದ್ಧತಿಯಲ್ಲಿ ವ್ಯಕ್ತಿಗಳು ತಮ್ಮ ಆಯ್ಕೆಯ ಪ್ರಕಾರ ಅನುಭೋಗಿಸುವ ಅಥವಾ ಹೂಡಿಕೆ ಮಾಡುವ ಸಾತ್ವಂತ್ರ್ಯವನ್ನು ಹೊಂದಿರುತ್ತಾರೆ. ವ್ಯಕ್ತಿಗಳು ತಮ್ಮ ಆಸಕ್ತಿಯ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಹೂಡಿಕೆ ಮಾಡುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ.
3. ಅನುಭೋಗಿಯ ಸಾರ್ವಭೌಮತ್ವ: ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಅನುಭೋಗಿಯೇ ಸಾರ್ವಭೌಮನಾಗಿರುತ್ತಾನೆ. ಇಡೀ ಉತ್ಪಾದನಾ ಪ್ರವೃತ್ತಿಯು ಅನುಭೋಗಿಯ ಬಯಕೆಗಳನ್ನು ಹಾಗೂ ಬೇಡಿಕೆಯನ್ನು ಪೂರೈಸುವುದೇ ಆಗಿದೆ. ಅನುಭೋಗಿಯು ಅನುಭವಿಸುವ ಇಂತಹ ಸ್ವಾತಂತ್ರ್ಯವನ್ನು ಅನುಭೋಗಿಯ ಸಾರ್ವಭೌಮತ್ವ ಎನ್ನುತ್ತಾರೆ.
4. ಲಾಭದ ಉದ್ದೇಶ ಮತ್ತು ಸ್ವಯಂ ಆಸಕ್ತಿ: ಲಾಭಗಳಿಕೆಯ ಉದ್ದೇಶ ಮತ್ತು ಸ್ವಯಂ ಆಸಕ್ತಿಯೇ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಪ್ರೇರಕ ಶಕ್ತಿಯಾಗಿದೆ. ಉತ್ಪಾದಕರು ವೆಚ್ಚವನ್ನು ಕಡಿಮೆ ಮಾಡಿ ಗರಿಷ್ಠ ಉತ್ಪನ್ನ ಗಳಿಸಿ ಹೆಚ್ಚಿನ ಲಾಭಗಳಿಸಲು ಪ್ರಯತ್ನಿಸುತ್ತಾರೆ. ಹಾಗಾಗಿ ಸ್ವಯಂ ಆಸಕ್ತಿಯಿಂದ ಹೆಚ್ಚಿನ ಶ್ರಮವಹಿಸಿ ಗ್ರಾಹಕರನ್ನು ಸಂತೃಪ್ತಿಗೊಳಿಸಿ ಹೆಚ್ಚಿನ ಆದಾಯವನ್ನು ಗಳಿಸುತ್ತಾರೆ. ಇದು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ದಕ್ಷ ಕಾರ್ಯಚರಣೆಗೆ ಕಾರಣವಾಗುತ್ತದೆ.
5. ಸ್ಪರ್ಧೆ: ಸರ್ಕಾರದ ಕನಿಷ್ಠ ಹಸ್ತಕ್ಷೇಪದಿಂದಾಗಿ ಮಾರುಕಟ್ಟೆಗಳು ಆರ್ಥಿಕ ವ್ಯವಸ್ಥೆಯ ಪ್ರಗತಿಗೆ ಪ್ರಮುಖವಾದ ಮಾರ್ಗದರ್ಶಿ ಸಾಧನಗಳಾಗಿವೆ. ಆದ್ದರಿಂದ ಉತ್ಪಾದಕರು ವ್ಯವಹಾರದಲ್ಲಿ ಉಳಿಯಲು ಅನುಭೋಗಿಗಳ ಆಶ್ರಯಗಳಿಸಲು ಪೈಪೋಟಿ ನಡೆಸುತ್ತಾರೆ. ಆದ್ದರಿಂದ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಉದ್ದಿಮೆಗಳ ನಡುವಿನ ಸ್ಪರ್ಧೆಯು ಪ್ರಧಾನ ಅಂಶಗಳಲ್ಲಿ ಒಂದಾಗಿದೆ. ಮಾರುಕಟ್ಟೆಗಳು ಮತ್ತು ಬೆಲೆಗಳು, ಸಂಪನ್ಮೂಲಗಳು, ಸರಕು ಮತ್ತು ಸೇವೆಗಳ ಹಂಚಿಕೆಯಲ್ಲಿ ಮತ್ತು ಆದಾಯ ವಿತರಣೆಯಲ್ಲಿ ಪ್ರಧಾನ ಪಾತ್ರ ನಿರ್ವಹಿಸುತ್ತವೆ.
6. ಸರಕು ಮತ್ತು ಸೇವೆಗಳ ಆಯ್ಕೆಗೆ ಮುಕ್ತ ಅವಕಾಶ: ಇಡೀ ಉತ್ಪಾದನಾ ಪ್ರಕ್ರಿಯೆಯೇ ಅನುಭೋಗಿಯ ಅಗತ್ಯತೆಗಳು ಮತ್ತು ಬಯಕೆಗಳ ಸುತ್ತ ಆವರಿಸಲ್ಪಟ್ಟಿದೆ. ಆದ್ದರಿಂದ ಉತ್ಪಾದಕರು ತಮ್ಮ ಘಟಕವು ಉತ್ಪಾದಿಸಿದ ಸರಕು ಮತ್ತು ಸೇವೆಗಳನ್ನು ಗ್ರಾಹಕರು ಕೊಂಡುಕೊಳ್ಳುವಂತೆ ಮಾಡಲು ಅವರಿಗೆ ವಿವಿಧ ಮಾದರಿಯ ಸರಕು ಮತ್ತು ಸೇವೆಗಳನ್ನು ಪೂರೈಸುವುದರಲ್ಲಿ ಪೈಪೋಟಿ ನಡೆಸುತ್ತಾರೆ. ಆದ್ದರಿಂದ ಗ್ರಾಹಕರು ತಮ್ಮ ಸರಕು ಮತ್ತು ಸೇವೆಗಳ ಆಯ್ಕೆಗೆ ಮುಕ್ತ ಅವಕಾಶ ಲಭ್ಯವಿರುತ್ತದೆ.
7. ಸಂಪನ್ಮೂಲಗಳ ದಕ್ಷ ಬಳಕೆ: ಲಭ್ಯವಿರುವ ಸಂಪನ್ಮೂಲಗಳನ್ನು ಸರಕು ಮತ್ತು ಸೇವೆಗಳ ಉತ್ಪಾದನೆಗೆ ದಕ್ಷವಾಗಿ ಬಳಸಲಾಗುತ್ತದೆ. ಉತ್ಪಾದನೆಯ ಪ್ರಮುಖ ಉದ್ದೇಶ ಲಾಭಗಳಿಸುವುದಾಗಿರುವುದರಿಂದ ಸಂಪನ್ಮೂಲಗಳ ಪೋಲು ಆಗುವುದಿಲ್ಲ ಅಥವಾ ಸಂಪನ್ಮೂಲಗಳ ಪೋಲು ಕನಿಷ್ಠವಾಗಿರುತ್ತದೆ. ಇದರಿಂದ ಗ್ರಾಹಕರಿಗೆ ಅಗ್ಗದ ಬೆಲೆಯಲ್ಲಿ ವಿವಿಧ ಗುಣಮಟ್ಟದ ಸರಕುಗಳು ಸಿಗುತ್ತದೆ ಎಂದು ಅರ್ಥೈಸಬಹುದು.
8. ಸರ್ಕಾರದ ಮೇಲೆ ಕಡಿಮೆ ಹೊರೆ: ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಆರ್ಥಿಕತೆಯ ಪ್ರಮುಖ ವಲಯಗಳಾದ ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ಖಾಸಗಿ ವ್ಯಕ್ತಿಗಳ ಒಡೆತನದಲ್ಲಿರುವುದರಿಂದ ಸರ್ಕಾರದ ಮೇಲೆ ಕಡಿಮೆ ಹೊರೆ ಇರುತ್ತದೆ.
9. ಸಾಮರ್ಥ್ಯಕ್ಕನುಗುಣವಾಗಿ ಪ್ರತಿಫಲ: ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಅವರ ಸಾಮರ್ಥ್ಯಕ್ಕೆ ತಕ್ಕ ಪ್ರತಿಫಲವು ದೊರೆಯುತ್ತದೆ. ಹಾಗಾಗಿ ವ್ಯಕ್ತಿಗಳು ಕೆಲಸ ಮಾಡಲು ಪ್ರೇರಣೆ ಹಾಗೂ ಪ್ರೋತ್ಸಾಹ ನೀಡುತ್ತದೆ. ಹಾಗಾಗಿ ಆ ದೇಶದ ರಾಷ್ಟ್ರೀಯ ಆದಾಯವು ಹೆಚ್ಚಳವಾಗುತ್ತದೆ.
10. ಉತ್ತಮ ಜೀವನಮಟ್ಟ: ಬಡವರನ್ನು ಒಳಗೊಂಡ ಎಲ್ಲ ಜನರಿಗೆ ಅನೇಕ ಮಾದರಿಯ ಸರಕು ಮತ್ತು ಸೇವೆಗಳು ಕಡಿಮೆ ದರಗಳಲ್ಲಿ ಸಿಗುವುದರಿಂದ ಜನರ ಜೀವನಮಟ್ಟ ಉತ್ತಮವಾಗಿರುತ್ತದೆ.

ಬಂಡವಾಳಶಾಹಿ ಅರ್ಥವ್ಯವಸ್ಥೆಯ ಅವಗುಣಗಳು:

ಬಂಡವಾಳಶಾಹಿ ಅರ್ಥವ್ಯವಸ್ಥೆಯು ಕೆಲವು ದುರ್ಬಲ ಅಂಶಗಳಿಂದ ಕೂಡಿದೆ. ಅಂತಹ ಪ್ರಮುಖ ಅವಗುಣಗಳೆಂದರೆ-

1. ಕಾರ್ಮಿಕರ ಶೋಷಣೆ: ಬಂಡವಾಳಶಾಹಿ ಅರ್ಥವ್ಯವಸ್ಥೆಯ ಪ್ರಮುಖ ದೋಷವೆಂದರೆ ಕಾರ್ಮಿಕರ ಶೋಷಣೆಯಾಗಿದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳು ಹೆಚ್ಚು ಲಾಭಗಳಿಸುವ ಉದ್ದೇಶದಿಂದ ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲಾಗಲಿ, ಇಲ್ಲವೇ ವಾಸಸ್ಥಳದಲ್ಲಾಗಲಿ ಅಗತ್ಯ ಸೌಲಭ್ಯಗಳನ್ನು ನೀಡದೇ ಕಾರ್ಮಿಕರಿಗೆ ಕಡಿಮೆ ಕೂಲಿ ನೀಡಿ ಹೆಚ್ಚು ದುಡಿಸಿಕೊಳ್ಳುವ ಮೂಲಕ ಶೋಷಿಸುತ್ತಾರೆ.
2. ಸಂಪತ್ತು ಮತ್ತು ಆದಾಯದ ಅಸಮಾನ ಹಂಚಿಕೆ: ಬಂಡವಾಳಶಾಹಿಗಳು ಸಂಪನ್ಮೂಲಗಳ ಮತ್ತು ಉದ್ದಿಮೆಗಳ ಮಾಲೀಕರಾಗಿರುವುದರಿಂದ ಶ್ರೀಮಂತರಾಗಿರುತ್ತಾರೆ (ಉಳ್ಳವರು). ಇವರು ಬಡವರಾದ (ಉಳ್ಳದವರು) ಕಾರ್ಮಿಕರನ್ನು ಶೋಷಿಸುತ್ತಾರೆ. ಆದ್ದರಿಂದ ಸಂಪತ್ತು ಮತ್ತು ಆದಾಯದ ಅಸಮಾನತೆ ಹೆಚ್ಚಾಗಿರುತ್ತದೆ.
3. ವರ್ಗ ಸಂಘರ್ಷ: ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳ (ಶ್ರೀಮಂತರ) ಹಿಡಿತದಲ್ಲಿ ಉದ್ದಿಮೆಗಳು ಮತ್ತು ಸಂಪನ್ಮೂಲಗಳು ಇರುತ್ತವೆ. ಇವರು ಅಧಿಕ ಲಾಭ ಗಳಿಸುವುದರಿಂದ ಹೆಚ್ಚಿನ ಸಂಪತ್ತನ್ನು ಕ್ರೋಢೀಕರಣ ಮಾಡುತ್ತಾರೆ. ಇದು ಎರಡು ವರ್ಗಗಳನ್ನು ಸೃಷ್ಟಿಸುತ್ತದೆ. ಅವುಗಳೆಂದರೆ,

   1. ಶ್ರೀಮಂತ ಬಂಡವಾಳಶಾಹಿಗಳು ಮತ್ತು 2. ಬಡವರು ಮತ್ತು ಶೋಷಿತ ಕಾರ್ಮಿಕರು. ಇವರ ನಡುವಿನ ಅಂತರ ಹೆಚ್ಚಾದಂತೆ, ಅದು ವರ್ಗ ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತದೆ.
4. ಎಲ್ಲರನ್ನು ಒಳಗೊಂಡ ಅಭಿವೃದ್ಧಿಯಾಗುವುದಿಲ್ಲ: ಬಂಡವಾಳಶಾಹಿಗಳು ಲಾಭ ಮಾಡುವ ಕ್ಷೇತ್ರಗಳಲ್ಲಿ ಮಾತ್ರ ಹೂಡಿಕೆ ಮಾಡುತ್ತಾರೆ. ಇದು ಅಸಮತೋಲನ ಬೆಳವಣಿಗೆಗೆ ಕಾರಣವಾಗುತ್ತದೆ. ಹಾಗಾಗಿ ಬೆಳವಣಿಗೆ ದರವು ಹೆಚ್ಚಾಗಿದ್ದರೂ ಇದು ಎಲ್ಲಾ ವಲಯಗಳನ್ನು ಒಳಗೊಂಡಿರುವುದಿಲ್ಲ, ಆದ್ದರಿಂದ ಅಧಿಕ ಬೆಳವಣಿಗೆ ದರವು ಎಲ್ಲರಿಗೂ ಅನುಕೂಲವಾಗುವುದಿಲ್ಲ.

ಸಮಾಜವಾದಿ ಆರ್ಥಿಕ ವ್ಯವಸ್ಥೆ:

ಖ್ಯಾತ ಆರ್ಥಿಕ ತಜ್ಞ ಸ್ಯಾಮ್ಯುಯಲ್‌ಸನ್‌ರವರ ಪ್ರಕಾರ 'ಸಮಾಜವಾದವೆಂದರೆ ಉತ್ಪಾದನಾಂಗಗಳ ಒಡೆತನವನ್ನು ಮತ್ತು ಅದರ ಹಂಚಿಕೆಯನ್ನು ಸರ್ಕಾರವೇ ಮಾಡುತ್ತದೆ, ಅಲ್ಲದೇ ಯೋಜನೆಯನ್ನು, ಆದಾಯದ ಮರುಹಂಚಿಕೆಯನ್ನು ಸಹ ಸರ್ಕಾರವೇ ಮಾಡುತ್ತದೆ'. ಸಮಾಜವಾದಿ ಆರ್ಥಿಕವ್ಯವಸ್ಥೆಯ ಪರಿಕಲ್ಪನೆಯನ್ನು 1848 ರಲ್ಲಿ ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಏಂಜೆಲ್‌ರವರು ತಮ್ಮ 'ದಿ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ಎಂಬ ಗ್ರಂಥದಲ್ಲಿ ನೀಡಿದ್ದಾರೆ. ಸಮಾಜವಾದಿ ಆರ್ಥಿಕ ವ್ಯವಸ್ಥೆಯನ್ನು ಕೇಂದ್ರೀಯ ಯೋಜನಾ ಅರ್ಥವ್ಯವಸ್ಥೆ ಅಥವಾ ಪ್ರಭುತ್ವ ಆರ್ಥಿಕತೆ ಎಂದು ಕರೆಯುತ್ತಾರೆ. ಇದನ್ನು ಹಿಂದೆ ಅಸ್ತಿತ್ವದಲ್ಲಿದ್ದ ಯು. ಎಸ್. ಎಸ್. ಆರ್. ಮತ್ತು ಉತ್ತರ ಕೊರಿಯಾ ಆರ್ಥಿಕತೆಗಳು ಅಳವಡಿಸಿಕೊಂಡಿದ್ದವು. ಈಗ ಇದು ವಿಯೆಟ್ನಾಂ ಮತ್ತು ಕ್ಯೂಬಾ ದೇಶಗಳಲ್ಲಿ ಅಸ್ತಿತ್ವದಲ್ಲಿದೆ.

ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಲಕ್ಷಣಗಳು

ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳೆಂದರೆ:

1. ಸಾಮೂಹಿಕ ಒಡೆತನ: ಎಲ್ಲಾ ಉತ್ಪಾದನಾಂಗಗಳ ಒಡೆತನ, ವಿತರಣೆ ಹಾಗೂ ನಿಯಂತ್ರಣವನ್ನು ಜನರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ಸರ್ಕಾರವೇ ಹೊಂದಿರುತ್ತದೆ. ಇಲ್ಲಿ ವ್ಯಕ್ತಿಗಳು ನಿರ್ದಿಷ್ಟ ಮಿತಿಯನ್ನು ಮೀರಿ ಖಾಸಗಿ ಆಸ್ತಿಯನ್ನು ಹೊಂದುವ ಆಗಿಲ್ಲ.
2. ಕೇಂದ್ರೀಯ ಯೋಜನೆ: ಆರ್ಥಿಕ ಚಟುವಟಿಕೆಗಳಾದ ಉತ್ಪಾದನೆ, ವಿನಿಮಯ ಮತ್ತು ವಿತರಣೆಗಳನ್ನು ಕೇಂದ್ರೀಯ ಯೋಜನಾ ಪ್ರಾಧಿಕಾರವು ನಿರ್ಧರಿಸುತ್ತದೆ. ಇದು ರಾಷ್ಟ್ರೀಯ ಆದ್ಯತೆಗಳು ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಪನ್ಮೂಲಗಳನ್ನು ಹಂಚಿಕೆ ಮಾಡುತ್ತದೆ. ಸರ್ಕಾರವು ಪ್ರಸ್ತುತ ಮತ್ತು ಭವಿಷ್ಯದ ಅಗತ್ಯತೆಗಳನ್ನು ಪರಿಗಣಿಸಿ ಉತ್ಪಾದನೆ, ಅನುಭೋಗ ಮತ್ತು ಹೂಡಿಕೆಯ ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಯೋಜನಾ ಪ್ರಾಧಿಕಾರವು ಸಂಪನ್ಮೂಲಗಳ ದಕ್ಷ ಬಳಕೆಯನ್ನು ಖಚಿತಪಡಿಸಿಕೊಳ್ಳಲು ವಿವಿಧ ವಲಯಗಳ ಗುರಿಗಳನ್ನು ನಿರ್ಧರಿಸುತ್ತದೆ.
3. ಸರ್ಕಾರದ ಪಾತ್ರ: ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಎಲ್ಲಾ ಉತ್ಪಾದನಾಂಗಗಳ ವಿತರಣೆಯಲ್ಲಿ ಸರ್ಕಾರವೇ ಒಡೆತನ ಮತ್ತು ನಿಯಂತ್ರಣ ಹೊಂದಿರುತ್ತದೆ. ಇದು ಏನನ್ನು ಉತ್ಪಾದಿಸಬೇಕು? ಹೇಗೆ ಉತ್ಪಾದಿಸಬೇಕು ಮತ್ತು ಯಾರಿಗಾಗಿ ಉತ್ಪಾದಿಸಬೇಕು? ಎಂಬ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ.
4. ಆರ್ಥಿಕ ಮತ್ತು ಸಾಮಾಜಿಕ ಸಮಾನತೆ: ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಶ್ರೀಮಂತರು (ಉಳ್ಳವರು) ಮತ್ತು ಬಡವರು (ಉಳ್ಳದವರು) ಎಂಬ ವರ್ಗ ವಿಭಾಗಗಳು ಇರುವುದಿಲ್ಲ. ಆದಾಯ ವಿತರಣೆಯಲ್ಲಿ ಹೆಚ್ಚಿನ ಮಟ್ಟದ ಸಮಾನತೆಯಿರುತ್ತದೆ. ಸರ್ಕಾರವು ಹೆಚ್ಚುವರಿ ಆದಾಯವನ್ನು ಸಾಮಾಜಿಕ-ಆರ್ಥಿಕ ಮೂಲಭೂತ

ಸೌಕರ್ಯಗಳಾದ ಉಚಿತ ಶಿಕ್ಷಣ, ಉಚಿತ ಆರೋಗ್ಯ, ಉಚಿತ ವಿಮೆ ಮತ್ತು ಸಾರ್ವಜನಿಕರಿಗೆ ಉತ್ತಮ ಭೌತಿಕ ಮೂಲಸೌಕರ್ಯಗಳನ್ನು ಒದಗಿಸಲು ಬಳಸುತ್ತದೆ.

5. ಗರಿಷ್ಠ ಸಾಮಾಜಿಕ ಕಲ್ಯಾಣ: ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಪ್ರಮುಖ ಉದ್ದೇಶವೆಂದರೆ ಸಾರ್ವಜನಿಕರಿಗೆ ಗರಿಷ್ಠ ಸಾಮಾಜಿಕ ಕಲ್ಯಾಣ ಒದಗಿಸುವುದಾಗಿದೆ. ಇದು ವರ್ಗರಹಿತ ಸಮಾಜದ ಮೇಲೆ ಆಧಾರಿತವಾಗಿದೆ. ಇಲ್ಲಿ ಶ್ರೀಮಂತ- ಬಡ ವರ್ಗಗಳಾಗಲಿ ಇಲ್ಲವೇ ಕಾರ್ಮಿಕ ಶೋಷಣೆಯಾಗಲಿ ಇರುವುದಿಲ್ಲ.

ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಗುಣಗಳು:

ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿನ ಪ್ರಮುಖ ಗುಣಗಳೆಂದರೆ:

1. ಗರಿಷ್ಠ ಆರ್ಥಿಕ ದಕ್ಷತೆ: ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಉತ್ಪಾದನಾಂಗಗಳು ಸರ್ಕಾರದ ಮಾಲೀಕತ್ವ ಮತ್ತು ನಿಯಂತ್ರಣದಲ್ಲಿರುತ್ತದೆ. ಹಾಗಾಗಿ ಕೇಂದ್ರ ಯೋಜನಾ ಪ್ರಾಧಿಕಾರವು ಜನರ ಗರಿಷ್ಠ ಕಲ್ಯಾಣಕ್ಕಾಗಿ ಸಂಪನ್ಮೂಲಗಳ ದಕ್ಷ ಬಳಕೆಗೆ ಯೋಜನೆ ರೂಪಿಸುತ್ತದೆ.

2. ಕಾರ್ಮಿಕರ ಶೋಷಣೆಯಿಲ್ಲ: ಸರ್ಕಾರವು ಉತ್ಪಾದನಾಂಗಗಳ ಮಾಲೀಕತ್ವ ಹೊಂದಿರುವುದರಿಂದ ಅದು ಎಲ್ಲ ಜನರಿಗೂ ಅನುಕೂಲವಾಗುವಂತೆ ವಿತರಣೆಯನ್ನು ನಿರ್ಧರಿಸುತ್ತದೆ. ಆದ್ದರಿಂದ ಆದಾಯ ವಿತರಣೆಯಲ್ಲಿ ತೀವ್ರ ಅಸಮಾನತೆಯಿರುವುದಿಲ್ಲ ಮತ್ತು ಬಡವರು ಮತ್ತು ಶ್ರೀಮಂತರು ಎಂಬ ವರ್ಗ ವಿಭಾಗಗಳು ಕಂಡುಬರುವುದಿಲ್ಲ. ಹಾಗಾಗಿ ಹೆಚ್ಚು ಲಾಭಗಳಿಸುವ ಉದ್ದೇಶದಿಂದ ಒಂದು ವರ್ಗವು ಇನ್ನೊಂದು ವರ್ಗವನ್ನು ಶೋಷಿಸುವುದಿಲ್ಲ.

3. ಗರಿಷ್ಠ ಸಾಮಾಜಿಕ ಕಲ್ಯಾಣ: ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಸರ್ಕಾರವು ಎಲ್ಲರಿಗೂ ಅತ್ಯುತ್ತಮ ಸೌಲಭ್ಯಗಳನ್ನು ಕೊಡುವ ದೃಷ್ಟಿಯಿಂದ ಗುಣಮಟ್ಟದ ಸಾಮಾಜಿಕ-ಆರ್ಥಿಕ ಮೂಲಸೌಕರ್ಯಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ.

4. ಸಮತೋಲಿತ ಆರ್ಥಿಕ ಅಭಿವೃದ್ಧಿ: ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಯೋಜನೆಯು ಪ್ರಮುಖವಾಗಿದ್ದು, ಸರ್ಕಾರವು ಉತ್ಪಾದನಾಂಗಗಳನ್ನು ನಿಯಂತ್ರಿಸುವ ಮತ್ತು ನಿರ್ಬಂಧಿಸುವ ಅಧಿಕಾರ ಹೊಂದಿದೆ. ಆದ್ದರಿಂದ ಸರ್ಕಾರವೇ ಎಲ್ಲಾ ವಲಯಗಳಿಗೆ ಅಂದರೆ ಕೃಷಿ, ಕೈಗಾರಿಕೆ ಮತ್ತು ಸೇವೆಗಳು ಹಾಗೆಯೇ ಎಲ್ಲಾ ಕ್ಷೇತ್ರಗಳಿಗೂ ಸಂಪನ್ಮೂಲಗಳನ್ನು ಹಂಚಿಕೆ ಮಾಡುವುದರ ಫಲವಾಗಿ ಸಮತೋಲಿತ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ.

5. ತೀವ್ರ ಆರ್ಥಿಕ ಅಭಿವೃದ್ಧಿ: ಸರ್ಕಾರವು ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಉತ್ಪಾದನಾಂಗಗಳ ಮಾಲೀಕತ್ವ, ಆರ್ಥಿಕ ಚಟುವಟಿಕೆಗಳ ಮೇಲಿನ ನಿರ್ಧಾರಗಳು, ಸಮತೋಲಿತ ಆರ್ಥಿಕ ಅಭಿವೃದ್ಧಿಗೆ ಯೋಜನೆಗಳು ತೆಗೆದುಕೊಳ್ಳುವುದರಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ. ಆದ್ದರಿಂದ ಇದು ತೀವ್ರ ಆರ್ಥಿಕ ಅಭಿವೃದ್ಧಿಗೆ ಕಾರಣವಾಗುತ್ತದೆ.

ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಅವಗುಣಗಳು

ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿನ ಪ್ರಮುಖ ಅವಗುಣಗಳೆಂದರೆ:

1. ಅಧಿಕಾರಿಶಾಹಿಯ ಕಠಿಣ ಯೋಜನೆ: ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಯೋಜನೆಯು ಅಧಿಕಾರಿಶಾಹಿಗಳಿಂದ ಜಾರಿಗೊಳಿಸಲ್ಪಡುತ್ತದೆ. ಹಾಗಾಗಿ ಒಂದು ವೇಳೆ ಕೆಲವು ಅಧಿಕಾರಿಶಾಹಿಗಳು ಅಪ್ರಾಮಾಣಿಕರಾದರೆ ಮತ್ತು ಯೋಜನೆಗಳನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರದೆ ಹೋದಲ್ಲಿ ಇಡೀ ಆರ್ಥಿಕತೆಯು ಸಂಕಷ್ಟಕ್ಕೆ ಒಳಗಾಗುತ್ತದೆ. ಆದ್ದರಿಂದ, ಅಧಿಕಾರಿಶಾಹಿಗಳ ದರ್ಪ, ಭ್ರಷ್ಟಚಾರ, ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಬೆಳವಣಿಗೆಗೆ ಅಡ್ಡಿಯಾಗಬಹುದು.

2. ಅನುಭೋಗಿ ಸಾರ್ವಭೌಮನಾಗಿರುವುದಿಲ್ಲ: ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಅನುಭೋಗಿಗೆ ಆಯ್ಕೆಯ ಅವಕಾಶವಾಗಲಿ ಇಲ್ಲವೇ ಆಸಕ್ತಿಗೆ ಅನುಗುಣವಾಗಿ ಸರಕು ಮತ್ತು ಸೇವೆಗಳನ್ನು ಕೊಳ್ಳುವ ಸ್ವಾತಂತ್ರ್ಯ ಇರುವುದಿಲ್ಲ. ಅವರಿಗಾಗಿ ಉತ್ಪಾದಿಸಲ್ಪಟ್ಟಿರುವ ಹಾಗೂ ಲಭ್ಯವಿರುವ ಸರಕುಗಳನ್ನು ಮಾತ್ರ ಖರೀದಿಸಬೇಕು. ಹಾಗೆಯೇ ಒಂದು ಕುಟುಂಬ ಎಷ್ಟು ಪ್ರಮಾಣದಲ್ಲಿ ಕೊಂಡುಕೊಳ್ಳಬೇಕು ಎಂಬುದನ್ನು ಸಹ ಸರ್ಕಾರವೇ ನಿರ್ಧರಿಸುತ್ತದೆ.

3. ಕಠಿಣ ಆರ್ಥಿಕತೆ: ಬದಲಾಗುವ ಆರ್ಥಿಕತೆಯ ಯಾವುದೇ ಸನ್ನಿವೇಶಕ್ಕೂ ಅಥವಾ ಅಗತ್ಯತೆಗಳಿಗೆ ಪೂರ್ವ ನಿಯೋಜಿತ ಗುರಿಗಳು ಬದಲಾಗುವುದಿಲ್ಲವಾದ್ದರಿಂದ ಸಮಾಜವಾದಿ ಆರ್ಥಿಕ ವ್ಯವಸ್ಥೆಯು ಬದಲಾವಣೆಗೆ

ಸ್ಪಂದಿಸುವುದಿಲ್ಲ.

ಮಿಶ್ರ ಆರ್ಥಿಕ ವ್ಯವಸ್ಥೆ:

ಮಿಶ್ರ ಅರ್ಥವ್ಯವಸ್ಥೆಯು ಸಮಾಜವಾದಿ ಆರ್ಥಿಕತೆ ಮತ್ತು ಬಂಡವಾಳಶಾಹಿ ಆರ್ಥಿಕತೆಯ ಉತ್ತಮ ಲಕ್ಷಣಗಳ ಮಿಶ್ರಣವಾಗಿದೆ. ಮಿಶ್ರ ಆರ್ಥಿಕತೆಯಲ್ಲಿ ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳೆರಡೂ ಸಹ ಅಸ್ತಿತ್ವದಲ್ಲಿರುತ್ತವೆ. ಆದ್ದರಿಂದ ಇದು ಸಾರ್ವಜನಿಕ ಕಲ್ಯಾಣವನ್ನು ಹೆಚ್ಚಿಸಲು ಖಾಸಗಿ ಉದ್ದಿಮೆಗಳು ಮತ್ತು ಆರ್ಥಿಕ ಚಟುವಟಿಕೆಗಳಿಗಾಗಿ ಯೋಜನೆಗಳ ಒಂದು ಮಿಶ್ರಣವಾಗಿದೆ. ಪ್ರೊ. ಸ್ಯಾಮ್ಯುಯೆಲ್ ರವರ ಪ್ರಕಾರ: "ಖಾಸಗಿ ಮತ್ತು ಸಾರ್ವಜನಿಕ ವಲಯಗಳೆರಡು ಸಹ ಅಸ್ತಿತ್ವ ಮತ್ತು ಸಹಕರಿಸುವ ಆರ್ಥಿಕ ವ್ಯವಸ್ಥೆಗೆ ಮಿಶ್ರ ಆರ್ಥಿಕ ವ್ಯವಸ್ಥೆ" ಎಂದು ಕರೆಯುತ್ತಾರೆ. 1930 ರ ವಿಶ್ವ ಆರ್ಥಿಕ ಮುಗ್ಗಟ್ಟಿನ ನಂತರ ಮಿಶ್ರ ಆರ್ಥಿಕ ವ್ಯವಸ್ಥೆಯು ಉಗಮವಾಯಿತು. ಪ್ರೊ. ಜೆ. ಎಂ. ಕೇನ್ಸ್ ರವರು ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಅನುಮೋದಿಸಿದರು. ಭಾರತದ ಆರ್ಥಿಕತೆಯು ಮಿಶ್ರ ಆರ್ಥಿಕ ವ್ಯವಸ್ಥೆಗೆ ಒಂದು ಪ್ರಮುಖ ಉದಾಹರಣೆಯಾಗಿದೆ.

ಮಿಶ್ರ ಆರ್ಥಿಕ ವ್ಯವಸ್ಥೆಯ ಪ್ರಮುಖ ಲಕ್ಷಣಗಳು

1. ಖಾಸಗಿ ಮತ್ತು ಸಾರ್ವಜನಿಕ ವಲಯದ ಸಹಭಾಗಿತ್ವ: ಮಿಶ್ರ ಆರ್ಥಿಕ ವ್ಯವಸ್ಥೆಯು ಖಾಸಗಿ ಮತ್ತು ಸಾರ್ವಜನಿಕ ವಲಯಗಳ ಸಹ ಅಸ್ತಿತ್ವದ ಲಕ್ಷಣವನ್ನು ಹೊಂದಿದೆ. ಸಾಮಾನ್ಯವಾಗಿ ರಕ್ಷಣೆ, ಪರಮಾಣು ಶಕ್ತಿ, ಬೃಹತ್ ಎಂಜಿನಿಯರಿಂಗ್ ಕೈಗಾರಿಕೆಗಳು ಸಾರ್ವಜನಿಕ ವಲಯದ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಗ್ರಾಹಕ ಸರಕುಗಳ ಕೈಗಾರಿಕೆಗಳು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಕೃಷಿ ಇತ್ಯಾದಿಗಳು ಖಾಸಗಿ ವಲಯದಲ್ಲಿ ಕಂಡುಬರುತ್ತವೆ.
2. ವೈಯಕ್ತಿಕ ಸ್ವಾತಂತ್ರ್ಯ: ವ್ಯಕ್ತಿಗಳು ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ವೃತ್ತಿ ಮತ್ತು ಅನುಭೋಗದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಹೊಂದಿರುತ್ತಾರೆ. ವ್ಯಕ್ತಿಗಳು ತಮ್ಮ ಆಯ್ಕೆಗೆ ಅನುಗುಣವಾಗಿ ಸರಕು ಮತ್ತು ಸೇವೆಗಳನ್ನು ಕೊಳ್ಳಬಹುದು. ಆದರೆ ಹಣದುಬ್ಬರದ ಕಾಲಾವಧಿಯಲ್ಲಿ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಗಾಗಿ ಬೆಲೆಗಳನ್ನು ಸಾರ್ವಜನಿಕ ವಿತರಣೆಯ ಮೂಲಕ ನಿಯಂತ್ರಿಸುತ್ತದೆ ಮತ್ತು ಕೊರತೆಯ ಅವಧಿಯಲ್ಲಿ ಪಡಿತರ ಪದ್ಧತಿಯನ್ನು ಅನುಸರಿಸುತ್ತದೆ. ಆದ್ದರಿಂದ ಇಂತಹ ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಅನುಭೋಗಿಯು ಬಂಡವಾಳಶಾಹಿ ವ್ಯವಸ್ಥೆಯಲ್ಲಿಯಂತೆ ಸಾರ್ವಭೌಮನಾಗಿರುವುದಿಲ್ಲ ಅಥವಾ ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿಯಂತೆ ಒಬ್ಬ ಗುಲಾಮನಾಗಿಯೂ ಇರುವುದಿಲ್ಲ ಎಂದು ಹೇಳಲಾಗುತ್ತದೆ.
3. ಆರ್ಥಿಕ ಯೋಜನೆಗಳು: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಸರ್ಕಾರವು ದೇಶದ ಸಮಗ್ರ ಆರ್ಥಿಕ ಅಭಿವೃದ್ಧಿ ಸಾಧಿಸಲು ಆರ್ಥಿಕ ಯೋಜನೆಗಳನ್ನು ಜಾರಿಗೊಳಿಸುತ್ತದೆ. ಆರ್ಥಿಕ ಯೋಜನೆಯ ಪೂರ್ವ ನಿರ್ಧರಿತ ಉದ್ದೇಶಗಳ ಮತ್ತು ಗುರಿಗಳ ಪ್ರಕಾರವಾಗಿ ಖಾಸಗಿ ಮತ್ತು ಸಾರ್ವಜನಿಕ ವಲಯಗಳು ಬೆಳೆಯುವ ನಿರೀಕ್ಷೆಯಿರುತ್ತದೆ.
4. ಸರ್ಕಾರದ ಪಾತ್ರ: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಸರ್ಕಾರವು ಅಪೇಕ್ಷಿಸಿದ ಕ್ಷೇತ್ರಗಳಲ್ಲಿ ಸಾರ್ವಜನಿಕ ವಲಯದ ಮೂಲಕ ಮಧ್ಯಪ್ರವೇಶಿಸುತ್ತದೆ. ಇದು ಸೂಕ್ತ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಖಾಸಗಿ ಹೂಡಿಕೆಯ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.
5. 5 ಆರ್ಥಿಕ ಸಮಾನತೆ ತರುವಲ್ಲಿ ಸಹಾಯಕವಾಗಿದೆ: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಸರ್ಕಾರವು ಆದಾಯ ಅಸಮಾನತೆಯನ್ನು ಕಡಿಮೆ ಮಾಡಲು ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಇದು ಆದಾಯ ಮತ್ತು ಸಂಪತ್ತಿನ ಮೇಲೆ ಪ್ರಗತಿಪರ ತೆರಿಗೆ ವಿಧಿಸುತ್ತದೆ. ಇದು ಹಲವಾರು ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತದೆ. ಸರ್ಕಾರವು ಉಚಿತ ಆರೋಗ್ಯ ಚಿಕಿತ್ಸೆ, ವಿಧವೆ ಪಿಂಚಣಿ, ವೃದ್ಧಾಪ್ಯ ಪಿಂಚಣಿ, ಉಚಿತ ಆರೋಗ್ಯ ಮತ್ತು ಶೈಕ್ಷಣಿಕ ಸೌಲಭ್ಯಗಳಂತಹ ಹಲವು ಸಾಮಾಜಿಕ ಭದ್ರತಾ ಕ್ರಮಗಳನ್ನು ಕೈಗೊಳ್ಳುತ್ತದೆ.
6. ಏಕಸ್ವಾಮ್ಯದ ನಿಯಂತ್ರಣ: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಗೆ ಅನುಗುಣವಾಗಿ ಖಾಸಗಿ ರಂಗದಲ್ಲಿ ಏಕಸ್ವಾಮ್ಯದ ತಡೆಗೆ ಅಗತ್ಯ ಕ್ರಮಗಳನ್ನು ಕಾಯಿದೆಗಳು ಮತ್ತು ಇತರೆ ಕ್ರಮಗಳ ಮೂಲಕ ಕೈಗೊಳ್ಳುತ್ತದೆ. ಖಾಸಗಿ ವಲಯದಲ್ಲಿನ ಏಕಸ್ವಾಮ್ಯ ನಿಯಂತ್ರಣಕ್ಕಾಗಿ ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಸರ್ಕಾರವು ಕೆಲವು ಕೈಗಾರಿಕೆಗಳನ್ನು ರಾಷ್ಟ್ರೀಕರಣಗೊಳಿಸುತ್ತದೆ.

ಮಿಶ್ರ ಆರ್ಥಿಕ ವ್ಯವಸ್ಥೆಯ ಗುಣಗಳು

ಮಿಶ್ರ ಆರ್ಥಿಕ ವ್ಯವಸ್ಥೆಯ ಪ್ರಮುಖ ಗುಣಗಳೆಂದರೆ:

ಸಾರ್ವಜನಿಕ ವಲಯದ ಜೊತೆಗೆ ಖಾಸಗಿ ವಲಯಕ್ಕೂ ಪ್ರೋತ್ಸಾಹ: ಸಾರ್ವಜನಿಕ ವಲಯದ ಕೈಗಾರಿಕೆಗಳಂತೆ ಖಾಸಗಿ ವಲಯದ ಕೈಗಾರಿಕೆಗಳಿಗೂ ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಪ್ರೋತ್ಸಾಹ ಮತ್ತು ಅವಕಾಶವನ್ನು ನೀಡುತ್ತದೆ.

1. ಸಂಪನ್ಮೂಲಗಳ ದಕ್ಷ ಬಳಕೆ: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ವಲಯ ಹಾಗೂ ಖಾಸಗಿ ವಲಯಗಳೆರಡೂ ಸಂಪನ್ಮೂಲಗಳ ದಕ್ಷ ಬಳಕೆ ಮಾಡುತ್ತದೆ. ಸಾರ್ವಜನಿಕ ವಲಯವು ಸಾಮಾಜಿಕ ಕಲ್ಯಾಣಕ್ಕಾಗಿ ಶ್ರಮಿಸಿದರೆ, ಖಾಸಗಿ ವಲಯವು ಗರಿಷ್ಠ ಲಾಭಕ್ಕಾಗಿ ಕಾರ್ಯನಿರ್ವಹಿಸುತ್ತದೆ. ಆದ್ದರಿಂದ ಸಾರ್ವಜನಿಕ ಮತ್ತು ಖಾಸಗಿ ಉದ್ಯಮಗಳು ಸಂಪನ್ಮೂಲಗಳನ್ನು ದಕ್ಷವಾಗಿ ಬಳಸುತ್ತವೆ. ಇದಲ್ಲದೇ ಆರ್ಥಿಕ ಯೋಜನೆಯು ಸಂಪನ್ಮೂಲಗಳ ವ್ಯರ್ಥವನ್ನು ಕಡಿಮೆಗೊಳಿಸಲು ಮತ್ತು ಸಂಪನ್ಮೂಲಗಳ ಆದರ್ಶ ಬಳಕೆಗೆ ಸಹಾಯಕವಾಗಿದೆ.
2. ಕಡಿಮೆ ಆರ್ಥಿಕ ಮತ್ತು ಪ್ರಾದೇಶಿಕ ಅಸಮಾನತೆ: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಕಡಿಮೆ ಆರ್ಥಿಕ ಮತ್ತು ಪ್ರಾದೇಶಿಕ ಅಸಮಾನತೆಗಳು ಇರುತ್ತವೆ. ಸರ್ಕಾರವು ಪ್ರಗತಿಪರ ತೆರಿಗೆ ಮತ್ತು ಬಡತನ ನಿರ್ಮೂಲನ ಕಾರ್ಯಕ್ರಮಗಳ ಮೂಲಕ ಆದಾಯ ಅಸಮಾನತೆಗಳನ್ನು ಕಡಿಮೆಗೊಳಿಸುತ್ತದೆ. ಇದು ಹಿಂದುಳಿದ ಪ್ರದೇಶಗಳಲ್ಲಿ ಸಾರ್ವಜನಿಕ ವಲಯದ ಉದ್ಯಮಗಳನ್ನು ಸಹ ಸ್ಥಾಪಿಸುತ್ತದೆ. ಆದ್ದರಿಂದ ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಕಡಿಮೆ ಆರ್ಥಿಕ ಮತ್ತು ಪ್ರಾದೇಶಿಕ ಅಸಮಾನತೆ ಸಾಧ್ಯವಾಗುತ್ತದೆ.
3. ಅನುಭೋಗಿಯ ಸ್ವಾತಂತ್ರ್ಯ: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಅನುಭೋಗಿಗಳು ಸಾಕಷ್ಟು ಆಯ್ಕೆಗಳನ್ನು ಹೊಂದಿರುತ್ತಾರೆ. ಮತ್ತು ತಮಗೆ ಇಷ್ಟ ಬಂದ ಸರಕುಗಳನ್ನು ಖರೀದಿಸುವ ಸಂಪೂರ್ಣ ಆಯ್ಕೆ ಹೊಂದಿರುತ್ತಾರೆ.
4. ಗರಿಷ್ಠ ಕಲ್ಯಾಣ: ಮಿಶ್ರ ಆರ್ಥಿಕತೆಯು ಸಾರ್ವಜನಿಕ ಮತ್ತು ಖಾಸಗಿ ವಲಯದ ಉತ್ತಮ ಲಕ್ಷಣಗಳ ಮಿಶ್ರಣವಾಗಿದೆ. ಸರ್ಕಾರವು ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಕ್ರಮಗಳನ್ನು ಒದಗಿಸುತ್ತದೆ. ಇದರ ಜೊತೆಗೆ ಸರ್ಕಾರವು ಉಚಿತ ವಸತಿ, ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ, ಸಹಾಯಧನದ ಪ್ರೌಢ ಮತ್ತು ಉನ್ನತ ಶಿಕ್ಷಣ ಮತ್ತು ಕನಿಷ್ಠ ವೇತನ ಕಾಯಿದೆ, ಕಾರ್ಖಾನೆ ಕಾಯಿದೆ, ಉತ್ತಮ ಕಾರ್ಯನಿರ್ವಹಣಾ ಸ್ಥಿತಿ ಕಾಯಿದೆ, ಇತ್ಯಾದಿಗಳನ್ನು ಸರ್ಕಾರವು ಶಾಸನ ತರುತ್ತದೆ. ಖಾಸಗಿ ಉದ್ಯಮಗಳು ಸಾರ್ವಜನಿಕ-ಖಾಸಗಿ ಪಾಲುದಾರಿಕೆಯ ಮೂಲಕ ಮೂಲಭೂತ ಸೌಕರ್ಯಗಳಲ್ಲಿ ಹೂಡಿಕೆ ಮಾಡುತ್ತವೆ. ಆದ್ದರಿಂದ ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಜನರಿಗೆ ಗರಿಷ್ಠ ಕಲ್ಯಾಣ ಸಾಧ್ಯವಾಗುತ್ತದೆ.
5. ಆರ್ಥಿಕ ಯೋಜನೆಗಳು: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಗರಿಷ್ಠ ಆರ್ಥಿಕಾಭಿವೃದ್ಧಿಯ ಸಾಧನೆಗಾಗಿ ಆರ್ಥಿಕ ಯೋಜನೆಗಳನ್ನು ಸರ್ಕಾರ ಜಾರಿಗೆ ತರುತ್ತದೆ.

ಮಿಶ್ರ ಆರ್ಥಿಕ ವ್ಯವಸ್ಥೆಯ ಅವಗುಣಗಳು

ಮಿಶ್ರ ಆರ್ಥಿಕ ವ್ಯವಸ್ಥೆಯ ಪ್ರಮುಖ ಅವಗುಣಗಳೆಂದರೆ:

1. ಅಸ್ಥಿರ ಆರ್ಥಿಕತೆ: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಸರ್ಕಾರವು ಸಾರ್ವಜನಿಕ ವಲಯದ ವಿಸ್ತರಣೆಗೆ ಹೆಚ್ಚಿನ ಆದ್ಯತೆ ನೀಡಿ, ಖಾಸಗಿ ವಲಯವನ್ನು ನಿಯಂತ್ರಿಸಲು ಪ್ರಯತ್ನಿಸುತ್ತದೆ. ಖಾಸಗಿ ವಲಯವು ನಿರ್ದಿಷ್ಟ ಸಂದರ್ಭಗಳಲ್ಲಿ ಯಾವಾಗಲೂ ರಾಷ್ಟ್ರೀಕರಣದ ಬೆದರಿಕೆ ಅಡಿಯಲ್ಲಿರುತ್ತದೆ.
2. ನಿಧಾನಗತಿಯ ಆರ್ಥಿಕ ನಿರ್ಧಾರಗಳು: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ವಲಯವನ್ನು ನಿಯಂತ್ರಿಸುವ ಅಧಿಕಾರಿಶಾಹಿಗಳು ಕೆಲವೊಮ್ಮೆ ಭ್ರಷ್ಟಚಾರ ಮತ್ತು ನಿಧಾನಗತಿಯ ಆಡಳಿತದಿಂದ ಕೂಡಿರುತ್ತಾರೆ. ಇದರಿಂದಾಗಿ ಸಾರ್ವಜನಿಕ ವಲಯದ ಉದ್ಯಮಗಳಲ್ಲಿನ ಕಾರ್ಯನಿರ್ವಹಣೆಯ ಸ್ಪಷ್ಟ ನಿರ್ಧಾರಗಳು ವಿಳಂಬವಾಗುತ್ತದೆ.
3. ದಕ್ಷತೆಯ ಕೊರತೆ: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ವಲಯಗಳೆರಡೂ, ಸಹ ಅದಕ್ಷತೆಯ ಕಾರಣದಿಂದಾಗಿ ಬಳಲುತ್ತವೆ. ಸಾರ್ವಜನಿಕ ವಲಯವು ನಿಧಾನಗತಿಯ ನಿರ್ಧಾರಗಳು, ಭ್ರಷ್ಟಚಾರ, ಸ್ವಾಯತ್ತತೆ ಕೊರತೆಯ ಕಾರಣಗಳಿಂದಾಗಿ ಅದಕ್ಷತೆಯಲ್ಲಿ ಬಳಲುತ್ತದೆ. ಹಾಗೆಯೇ ಖಾಸಗಿ ವಲಯವು ಪರವಾನಿಗೆಗಳು ಮತ್ತು ನಿಯಂತ್ರಣಗಳ ರೂಪದಲ್ಲಿನ ಸರ್ಕಾರದ ನಿರ್ಬಂಧಗಳ ಕಾರಣಗಳಿಂದಾಗಿ ಉಂಟಾಗುವ ಅದಕ್ಷತೆಯಿಂದಾಗಿ ಬಳಲುತ್ತದೆ.

4. ತಡೆಯಿಲ್ಲದ ಕಪ್ಪು ಹಣದ ಅಸ್ತಿತ್ವ: ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಪರವಾನಿಗೆಗಳು ಮತ್ತು ಕೋಟಾಗಳ ಅಸ್ತಿತ್ವವು ಭ್ರಷ್ಟಚಾರ ಮತ್ತು ಕಪ್ಪು ಹಣದ ಮಾರುಕಟ್ಟೆಗೆ ಕಾರಣವಾಗಿದೆ. ನಿಯಂತ್ರಣವಿಲ್ಲದ ತೆರಿಗೆ ವಂಚನೆಯಲ್ಲಿ ಹೆಚ್ಚಳವಾಗಿ ತಡೆಯಿಲ್ಲದ ಕಪ್ಪು ಹಣದ ಅಸ್ತಿತ್ವಕ್ಕೆ ಕಾರಣವಾಗುತ್ತದೆ.

ಈ ಕೆಳಗಿನ ಪಟ್ಟಿಯು ಬಂಡವಾಳಶಾಹಿ, ಸಮಾಜವಾದ ಹಾಗೂ ಮಿಶ್ರ ಆರ್ಥಿಕ ವ್ಯವಸ್ಥೆಗಳ ನಡುವಿನ ವ್ಯತ್ಯಾಸವನ್ನು ತೋರಿಸುತ್ತದೆ.

	ವ್ಯತ್ಯಾಸ	ಬಂಡವಾಳಶಾಹಿ	ಸಮಾಜವಾದ	ಮಿಶ್ರಆರ್ಥಿಕ ವ್ಯವಸ್ಥೆ
1	ಉತ್ಪಾದನಾಂಗಗಳಮಾಲೀಕತ್ವ	ಖಾಸಗಿ ನಿಯಂತ್ರಣ	ಸಾರ್ವಜನಿಕ ನಿಯಂತ್ರಣ	ಖಾಸಗಿ ಮತ್ತುಸಾರ್ವಜನಿಕ ನಿಯಂತ್ರಣ
2	ಆರ್ಥಿಕ ಸಮಸ್ಯೆಗಳಿಗೆ ಪರಿಹಾರ	ಬೆಲೆ ಯಂತ್ರ	ಆರ್ಥಿಕ ಯೋಜನೆ	ಆರ್ಥಿಕ ಯೋಜನೆ ಮತ್ತು ಬೆಲೆ ಯಂತ್ರ
3	ಉದ್ದೇಶ	ಲಾಭ ಗಳಿಸುವುದು	ಸಾಮಾಜಿಕ ಕಲ್ಯಾಣ	ಗರಿಷ್ಠ ಲಾಭ ಮತ್ತು ಸಾಮಾಜಿಕ ಕಲ್ಯಾಣ
4	ಉದ್ಯಮಗಳ ಸ್ವರೂಪ	ಖಾಸಗಿ	ಸಾರ್ವಜನಿಕ	ಖಾಸಗಿ ಮತ್ತು ಸಾರ್ವಜನಿಕ
5	ಆರ್ಥಿಕ ಸ್ವಾತಂತ್ರ್ಯ	ಪೂರ್ಣ ಸ್ವಾತಂತ್ರ್ಯ	ಸರ್ಕಾರಿ ನಿಯಂತ್ರಣ	ಸರ್ಕಾರಿ ನಿಯಂತ್ರಣ ದಡಿಯಲ್ಲಿ ಸ್ವಾತಂತ್ರ್ಯ
6	ಆದಾಯದ ವಿತರಣೆ	ಅಸಮಾನ ವಿತರಣೆ	ಸಮಾನ ವಿತರಣೆ	ಹೆಚ್ಚಿನ ಅಸಮಾನ ವಿತರಣೆ ಇಲ್ಲ
7	ಸ್ಪರ್ಧೆ	ಸ್ಪರ್ಧೆ ಹೆಚ್ಚು	ಸ್ಪರ್ಧೆ ಕೊರತೆ	ಕಡಿಮೆ ಸ್ಪರ್ಧೆ
8	ಅನುಭೋಗಿಯ ಸಾರ್ವಭೌಮತ್ವ	ಅನುಭೋಗಿಯೆಸಾರ್ವಭೌಮ	ಅನುಭೋಗಿಯು ಸಾರ್ವಭೌಮ ಆಗಿರುವುದಿಲ್ಲ	ನಿಯಂತ್ರಿತ ಅನುಭೋಗಿಯ ಸಾರ್ವಭೌಮತ್ವ
9	ವರ್ಗ ಸಂಘರ್ಷ	ಅಧಿಕ ಪ್ರಮಾಣದ ವರ್ಗ ಸಂಘರ್ಷ	ವರ್ಗ ಸಂಘರ್ಷ ಇರುವುದಿಲ್ಲ	ಕಡಿಮೆ ಪ್ರಮಾಣದ ವರ್ಗ ಸಂಘರ್ಷ
10	ಕೆಲಸ ಪ್ರೇರಣೆ	ಅಧಿಕವಾಗಿರುತ್ತದೆ	ಅಸ್ತಿತ್ವದಲ್ಲಿರುವುದಿಲ್ಲ	ಸಾಪೇಕ್ಷವಾಗಿ ಕಡಿಮೆಯಿರುತ್ತದೆ.

ಭಾರತವು ಒಂದು ಮಿಶ್ರ ಆರ್ಥಿಕತೆ:

ಭಾರತವು ಸ್ವಾತಂತ್ರ್ಯ ಪಡೆದ ನಂತರ ಮಿಶ್ರ ಆರ್ಥಿಕತೆಯನ್ನು ಆರಿಸಿಕೊಂಡಿತು. ಭಾರತೀಯ ಆರ್ಥಿಕತೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ವಲಯ ಉದ್ಯಮಗಳೆರಡೂ ಸಹ ಅಸ್ತಿತ್ವ ಹೊಂದಿವೆ. ಭಾರತವು ಮಿಶ್ರ ಆರ್ಥಿಕ ನೀತಿಯನ್ನು ತನದಾಗಿಸಿಕೊಂಡು 1951 ರಿಂದ 1991 ರವರೆಗೆ ಸರ್ಕಾರಿವಲಯದ ಪ್ರಾಬಲ್ಯವಿದ್ದ ಖಾಸಗಿ ವಲಯ ಅಸ್ತಿತ್ವವಿದ್ದ, ಮಿಶ್ರ ಆರ್ಥಿಕ ನೀತಿ ಅನುಸರಿಸಿತ್ತು. 1991 ರ ಹೊಸ ಆರ್ಥಿಕನೀತಿ ಜಾರಿಯಿಂದಾಗಿ ಖಾಸಗಿ ವಲಯವೂ ಹೆಚ್ಚಿನ ಮಾನ್ಯತೆ ಪಡೆದುಕೊಂಡಿತ್ತು. ಯೋಜನೆಗಳನ್ನು ತಯಾರಿಸುವುದು, ಜಾರಿಗೊಳಿಸುವುದು ಮತ್ತು ಮೌಲ್ಯಮಾಪನ ಮಾಡಲು ಭಾರತದ ಯೋಜನಾ ಆಯೋಗವನ್ನು 1950 ರಲ್ಲಿ ಸ್ಥಾಪಿಸಲಾಯಿತು. ಇದು ಅಲ್ಪಾವಧಿಯ (ವಾರ್ಷಿಕ), ಮಧ್ಯಮಾವಧಿಯ (5 ವರ್ಷ) ದೂರದೃಷ್ಟಿ (15 ರಿಂದ 20 ವರ್ಷಗಳ) ಯೋಜನೆಗಳನ್ನು 1950-51 ರಿಂದ ತಯಾರಿಸಿ ಅನುಷ್ಠಾನಗೊಳಿಸಿದೆ. ಇದೀಗ ನಾವು 12 ನೇ ಪಂಚವಾರ್ಷಿಕ ಯೋಜನೆಯ (2016) ನಡುವೆ ಇದ್ದೇವೆ. ಎನ್. ಡಿ. ಎ. ಸರ್ಕಾರವು ಯೋಜನಾ ಆಯೋಗದ ಬದಲಿಗೆ 'ಭಾರತದ ರಾಷ್ಟ್ರೀಯ ಪರಿವರ್ತನಾ ಸಂಸ್ಥೆ' (ನ್ಯಾಷನಲ್ ಇನ್‌ಸ್ಟಿಟ್ಯೂಶನ್ ಫಾರ್ ಟ್ರಾನ್ಸ್‌ಫಾರ್ಮಿಂಗ್ ಇಂಡಿಯಾ) ವನ್ನು ಜಾರಿಗೆ ತಂದಿದೆ. ಇದನ್ನು ಜನಪ್ರಿಯವಾಗಿ 'ನೀತಿ ಆಯೋಗ' (NITI Aayog) ಎಂದು ಕರೆಯಲಾಗುತ್ತದೆ.

ಅಭ್ಯಾಸ

I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಬಂಡವಾಳಶಾಹಿ ಆರ್ಥಿಕ ಪದ್ಧತಿಯು ಮೊದಲಿಗೆ _______ ದೇಶದಲ್ಲಿ ಪ್ರಾರಂಭವಾಯಿತು.

ಅ. ಇಂಗ್ಲೆಂಡ್
ಆ. ಯು. ಎಸ್. ಎ.
ಇ. ಆಸ್ಟ್ರೇಲಿಯಾ
ಈ. ಜಪಾನ್

2. ಬಂಡವಾಳಶಾಹಿ ಆರ್ಥಿಕ ಪದ್ಧತಿಯಲ್ಲಿ ಸರ್ಕಾರದ ಮಧ್ಯಪ್ರವೇಶವು _______ ಆಗಿದೆ.

ಅ. ಕನಿಷ್ಠ
ಆ. ಗರಿಷ್ಠ
ಇ. ಸಮ
ಈ. ಮೇಲಿನ ಯಾವುದೂ ಅಲ್ಲ

3. ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಏಂಜೆಲ್ ರವರು _______ ಆರ್ಥಿಕ ಪದ್ಧತಿಯ ಪರಿಕಲ್ಪನೆಯನ್ನು ಪರಿಚಯಿಸಿದರು.

ಅ. ಬಂಡವಾಳಶಾಹಿ ಆರ್ಥಿಕತೆ
ಆ. ಸಮಾಜವಾದಿ ಆರ್ಥಿಕತೆ
ಇ. ಮಿಶ್ರ ಆರ್ಥಿಕತೆ
ಈ. ಮೇಲಿನ ಯಾವುದೂ ಅಲ್ಲ

4. ಯೋಜಿತ ಆರ್ಥಿಕತೆಯ ಮತ್ತೊಂದು ಹೆಸರು _______

ಅ. ಬಂಡವಾಳಶಾಹಿ ಆರ್ಥಿಕತೆ
ಆ. ಸಮಾಜವಾದಿ ಆರ್ಥಿಕತೆ
ಇ. ಮಿಶ್ರ ಆರ್ಥಿಕತೆ
ಈ. ಮೇಲಿನ ಯಾವುದೂ ಅಲ್ಲ

5. ರಲ್ಲಿ ವಿಶ್ವ ಆರ್ಥಿಕ ಮುಗ್ಗಟ್ಟಿನ ನಂತರ ಮಿಶ್ರ ಆರ್ಥಿಕ ವ್ಯವಸ್ಥೆಯು ಉಗಮವಾಯಿತು.

ಅ. 1930
ಆ. 1935
ಇ. 1940
ಈ. 1942

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. 1 ಬಂಡವಾಳಶಾಹಿ ಆರ್ಥಿಕತೆಯಲ್ಲಿ ಅನುಭೋಗಿಯು ಆಗಿರುತ್ತಾನೆ.
2. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಅವರ ತಕ್ಕ ಪ್ರತಿಫಲವು ದೊರೆಯುತ್ತದೆ.
3. ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಎಲ್ಲ ಉತ್ಪಾದನಾಂಗಗಳ ಒಡೆತನ ಮತ್ತು ವಿತರಣೆಯು ಹೊಂದಿರುತ್ತದೆ.
4. ಆರ್ಥಿಕತೆಯನ್ನು ಕೆಲವೊಮ್ಮೆ ಕಠಿಣ ಆರ್ಥಿಕತೆ ಎಂದು ಕರೆಯಲಾಗುತ್ತದೆ.
5. ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಸರ್ಕಾರವು ಆದಾಯ ಕಡಿಮೆ ಮಾಡಲು ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

III. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಆರ್ಥಿಕ ವ್ಯವಸ್ಥೆ ಎಂದರೇನು?

2. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ಅನುಸರಿಸುತ್ತಿರುವ ಯಾವುದಾದರರೂ ಎರಡು ದೇಶಗಳನ್ನು ಹೆಸರಿಸಿ.
3. ಯಾವ ಆರ್ಥಿಕತೆಯ ಮಾದರಿಯನ್ನು 'ಮುಕ್ತ ಮಾರುಕಟ್ಟೆ ಆರ್ಥಿಕತೆ' ಎಂದು ಕರೆಯಲಾಗುತ್ತದೆ?
4. ಸಮಾಜವಾದಿ ಆರ್ಥಿಕ ವ್ಯವಸ್ಥೆಯನ್ನು ಅನುಸರಿಸುತ್ತಿರುವ ದೇಶಗಳನ್ನು ಪಟ್ಟಿ ಮಾಡಿರಿ.
5. ಎನ್. ಐ. ಟಿ. ಐ. (NITI) ಆಯೋಗವನ್ನು ವಿಸ್ತರಿಸಿ.

IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ರಾಷ್ಟ್ರೀಯ ಆದಾಯ ಎಂದರೇನು?
2. ಆರ್ಥಿಕ ವ್ಯವಸ್ಥೆಯ ವಿವಿಧ ವರ್ಗೀಕರಣವನ್ನು ಹೆಸರಿಸಿ
3. ಗರಿಷ್ಠ ಸಾಮಾಜಿಕ ಕಲ್ಯಾಣದ ಅರ್ಥವೇನು?
4. ಮಿಶ್ರ ಆರ್ಥಿಕತೆಯಲ್ಲಿ ಸರ್ಕಾರದ ಪಾತ್ರವೇನು?
5. ಆರ್ಥಿಕ ಸ್ವಾತಂತ್ರ್ಯದ ಆಧಾರದ ಮೇಲೆ ಸಮಾಜವಾದಿ ಮತ್ತು ಮಿಶ್ರ ಆರ್ಥಿಕತೆಯು ಹೇಗೆ ಭಿನ್ನವಾಗಿದೆ?

V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.

1. ಆರ್ಥಿಕ ವ್ಯವಸ್ಥೆಯ ಅರ್ಥವನ್ನು ಸಂಕ್ಷಿಪ್ತವಾಗಿ ಚರ್ಚಿಸಿ.
2. ಮಿಶ್ರ ಆರ್ಥಿಕ ವ್ಯವಸ್ಥೆಯ ಗುಣಗಳನ್ನು ಚರ್ಚಿಸಿ.
3. ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಲಕ್ಷಣಗಳನ್ನು ವಿವರಿಸಿರಿ.
4. ಮಿಶ್ರ ಆರ್ಥಿಕ ವ್ಯವಸ್ಥೆಯ ಮೇಲೆ ಟಿಪ್ಪಣಿ ಬರೆಯಿರಿ.
5. ಸಮಾಜವಾದಿ ಆರ್ಥಿಕತೆ ಮತ್ತು ಬಂಡವಾಳ ಆರ್ಥಿಕತೆಗಳ ನಡುವಿನ ವ್ಯತ್ಯಾಸ ಬರೆಯಿರಿ.

ನಿಯೋಜಿತ ಕಾರ್ಯ:

1. ಏಷ್ಯಾ ದೇಶಗಳನ್ನು ಮತ್ತು ಅವುಗಳ ಆರ್ಥಿಕತೆಯ ಮಾದರಿಗಳನ್ನು ಪಟ್ಟಿ ಮಾಡಿರಿ.
2. ನಿಮ್ಮ ಜಿಲ್ಲೆಯಲ್ಲಿನ ಸಾರ್ವಜನಿಕ ಮತ್ತು ಖಾಸಗಿ ಉದ್ಯಮಗಳ ಬಗ್ಗೆ ಮಾಹಿತಿ ಸಂಗ್ರಹಿಸಿರಿ.

ಅಧ್ಯಾಯ-4 ಆರ್ಥಿಕತೆಯ ವಿವಿಧ ವಲಯಗಳು


''ನೀನು ಕೃಷಿಯಲ್ಲಿ ಒಂದು ಕಾರ್ಯವನ್ನು ಮಾಡುವುದರಲ್ಲಿ ವಿಳಂಬ ಮಾಡಿದರೆ, ನಿನ್ನ ಎಲ್ಲಾ ಕಾರ್ಯದಲ್ಲೂ ವಿಳಂಬವಾಗುವುದು.'' ಕ್ಯಾಟೋ, ಕ್ರಿ. ಪೂ. 2ನೇ ಶತಮಾನ

''ಕೈಗಾರೀಕರಣವು ಉಕ್ಕನ್ನು ಉತ್ಪಾದಿಸುತ್ತದೆ, ಇದು ವಿದ್ಯುಚ್ಛಕ್ತಿಯನ್ನು ತಯಾರಿಸುತ್ತದೆ, ಇವೇ ಮೂಲ ಅಡಿಪಾಯ.. ಯಾವಾಗ ನಿಮ್ಮ ಬಳಿ ಮೂಲ ಅಡಿಪಾಯ ಇರುವುದೋ!, ಆಗ ನಿರ್ಮಾಣ ಸುಲಭವಾಗುವುದು.'' ಜವಹರ್ ಲಾಲ್ ನೆಹರು

ಪೀಠಿಕೆ:

ಸರಕು ಮತ್ತು ಸೇವೆಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು: 1. ಆಹಾರ ಪದಾರ್ಥಗಳು 2. ಆಹಾರೇತರ ಪದಾರ್ಥಗಳು. ಆಹಾರವನ್ನು ತಯಾರಿಸಲು ನಮಗೆ ಆಹಾರ ಧಾನ್ಯಗಳು, ಹಣ್ಣುಗಳು ಮತ್ತು ತರಕಾರಿ, ಅಡುಗೆ ಎಣ್ಣೆ ಇತರೆಗಳು ಅಗತ್ಯವಿದೆ. ಈ ಪದಾರ್ಥಗಳನ್ನು ಗ್ರಾಮೀಣ ಪ್ರದೇಶದಲ್ಲಿ ರೈತರು ಉತ್ಪಾದಿಸುತ್ತಾರೆ. ನಾವು ಬಟ್ಟೆ, ಶೂ, ಪೀಠೋಪಕರಣ, ಪಾತ್ರೆ, ಮೋಟಾರು ಗಾಡಿ, ಪೆನ್ನು, ಕಾಗದ, ಪುಸ್ತಕ ಇತರೆಗಳ ಬಳಕೆಯನ್ನು ಮಾಡುತ್ತೇವೆ. ಇವುಗಳ ಜೊತೆಗೆ ನಮಗೆ ಹಲವು ಸೇವೆಗಳಾದ ಶಿಕ್ಷಣ, ಆರೋಗ್ಯ, ಬ್ಯಾಂಕಿಂಗ್, ಹಣಕಾಸು, ವಿಮೆ, ಸಾರಿಗೆ, ಮಾರುಕಟ್ಟೆ ಇತರೆಗಳು ಅಗತ್ಯವಿದೆ. ಈ ಆಹಾರೇತರ ಪದಾರ್ಥಗಳನ್ನು ಪಟ್ಟಣ ಮತ್ತು ನಗರಗಳಲ್ಲಿ ಕೈಗಾರಿಕೆಗಳು ಮತ್ತು ಏಜೇನ್ಸಿಗಳು ಉತ್ಪಾದಿಸುತ್ತಾರೆ. ಆಹಾರಧಾನ್ಯಗಳು, ಆಹಾರೇತರ ಪದಾರ್ಥಗಳು ಮತ್ತು ಸೇವೆಗಳು ವಿಭಿನ್ನ ಆರ್ಥಿಕತೆಯ ಪರಿಸರಗಳಲ್ಲಿ ಉತ್ಪಾದಿಸಲ್ಪಡುವುದರಿಂದ ನಾವು ಇದನ್ನು ಅರ್ಥವ್ಯವಸ್ಥೆಯ ವಿವಿಧ ವಲಯಗಳಾಗಿ ವಿಂಗಡಿಸಿದ್ದೇವೆ. ಆರ್ಥಿಕ ಚಟುವಟಿಕೆಗಳನ್ನು ಮೂರು ಪ್ರಮುಖ ವಲಯಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ, 1. ಪ್ರಾಥಮಿಕ 2. ದ್ವಿತೀಯ ಮತ್ತು 3. ತೃತೀಯ ವಲಯಗಳು. ಪ್ರತಿಯೊಂದು ವಲಯವು ತಮ್ಮದೇ ಆದ ಲಕ್ಷಣ, ಸಂಬಂಧಿತ ಚಟುವಟಿಕೆಗಳು, ಮಹತ್ವ ಮತ್ತು ಸಮಸ್ಯೆಗಳನ್ನು ಹೊಂದಿದೆ. ಹಾಗಾದರೆ, ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ವಲಯಗಳೆಂದರೇನು? ಆರ್ಥಿಕ ಅಭಿವೃದ್ಧಿಯಲ್ಲಿ ಈ ವಲಯಗಳ ಪಾತ್ರ ಮತ್ತು ಮಹತ್ವ ಏನು? ಕೃಷಿ ವಲಯ ಎದುರಿಸುತ್ತಿರುವ ಸಮಸ್ಯೆಗಳಾವುವು? ಈ ಸಮಸ್ಯೆಗಳಿಗೆ ಸಂಭವನೀಯ ಪರಿಹಾರೋಪಾಯಗಳಾವುವು? ಈ ಅಧ್ಯಾಯದ ಉದ್ದೇಶ ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡು ಭಾರತದ ಆರ್ಥಿಕತೆಯ ವಿವಿಧ ವಲಯಗಳ ಇತರೆ ವಿಷಯಗಳನ್ನು ಅನ್ವೇಷಿಸುವುದಾಗಿದೆ.

ಪ್ರದೇಶಗಳು



ಪ್ರಾಥಮಿಕ ವಲಯ

ದ್ವಿತೀಯ ವಲಯ

ತೃತೀಯ ವಲಯ

ಪ್ರಾಥಮಿಕ ವಲಯ:

ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಸರಕುಗಳನ್ನು ಉತ್ಪಾದನೆ ಮಾಡುವ ಆರ್ಥಿಕ ಚಟುವಟಿಕೆಗಳನ್ನು 'ಪ್ರಾಥಮಿಕ ವಲಯ' ಎನ್ನುವರು. ಇದು ಬಹುಸಂಖ್ಯಾತ ಜನರ ಜೀವನೋಪಾಯದ ಆಧಾರ ಸ್ತಂಭವಾಗಿದೆ. ಕೃಷಿ (ಬೇಸಾಯ ಮತ್ತು ಜಾನುವಾರು), ಅರಣ್ಯೋತ್ಪನ್ನ, ಮೀನುಗಾರಿಕೆ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಪ್ರಾಥಮಿಕ ವಲಯವು ಒಳಗೊಂಡಿದೆ. ಉದಾಹರಣೆಗೆ, 2011 ರಲ್ಲಿ ಭಾರತದಲ್ಲಿ ಸುಮಾರು ಶೇ. 49 ರಷ್ಟು ಜನರು ತಮ್ಮ ಜೀವನೋಪಾಯಕ್ಕಾಗಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಯನ್ನು ಅವಲಂಬಿಸಿದ್ದರು. 2015-16 ರಲ್ಲಿ ಭಾರತದ ರಾಷ್ಟ್ರೀಯ ಆದಾಯಕ್ಕೆ ಕೃಷಿ ಮತ್ತು ಸಂಬಂಧಿತ ಚಟುವಟಿಕೆಯ ಪಾಲು (ಕೃಷಿ, ಜಾನುವಾರು, ಅರಣ್ಯೋತ್ಪನ್ನ, ಮತ್ತು ಮೀನುಗಾರಿಕೆ ಸೇರಿ) ಶೇ. 15.3 ರಷ್ಟಿತ್ತು.

ಕೃಷಿಯ ಅರ್ಥ:

ಕೃಷಿಯು ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಕೃಷಿ ಎಂದರೆ ಉಳುಮೆ ಮಾಡಿ, ಬೆಳೆ ಬೆಳೆಯುವುದು ಮತ್ತು ಜಾನುವಾರುಗಳನ್ನು ಬೆಳೆಸುವುದಾಗಿದೆ. ಭಾರತದ ಬಹುತೇಕ ಗ್ರಾಮೀಣ ಕುಟುಂಬಗಳು ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿವೆ. ಪ್ರೊ. ಅರ್ಥರ್ ಕೆಥ್‌ರವರು ತಿಳಿಸುವಂತೆ "ನಾಗರಿಕ ಬದುಕಿನೆಡೆಗೆ ಮೊದಲ ದೊಡ್ಡ ಹೆಜ್ಜೆ ಕೃಷಿಯ ಅನಾವರಣವಾಗಿದೆ". ಮುಂದುವರೆದು ಅವರು ಕೃಷಿಯಲ್ಲಿ

ಮನುಷ್ಯರು ತೊಡಗಿಕೊಂಡಿದ್ದರಿಂದ ಅವರು ಒಂದೆಡೆ ನೆಲೆಸಿ ನಾಗರಿಕ ಬದುಕಿಗೆ ಅನುವು ಮಾಡಿಕೊಟ್ಟಿತ್ತು.

ಭಾರತದಲ್ಲಿ ಕೃಷಿ ಮತ್ತು ಆರ್ಥಿಕ ಅಭಿವೃದ್ಧಿ:

ಕೃಷಿಯು ಯಾವುದೇ ಆರ್ಥಿಕತೆಯಲ್ಲಿ ಮೂಲ ವಲಯವಾಗಿದೆ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಇದು ನಿರಂತರವಾಗಿ ಪ್ರಮುಖ ಪಾತ್ರವನ್ನು ಈ ಕೆಳಗೆ ಚರ್ಚಿಸಿದಂತೆ ನಿರ್ವಹಿಸಿದೆ. ಅವುಗಳಲ್ಲಿ ಪ್ರಮುಖವಾಗಿ

1. ಆಹಾರ ಪದಾರ್ಥಗಳಿಗೆ ಕೃಷಿಯು ಪ್ರಮುಖ ಮೂಲವಾಗಿದೆ. ಕೃಷಿಯು ಧಾನ್ಯಗಳಾದ ಅಕ್ಕಿ, ರಾಗಿ, ಗೋಧಿ, ಜೋಳ, ಸಜ್ಜೆ ಇತ್ಯಾದಿ ಬೇಳೆಕಾಳುಗಳಾದ ತೊಗರಿಬೇಳೆ, ಕಡಲೆ, ಎಣ್ಣೆ ಕಾಳುಗಳಾದ ಕಡಲೆಕಾಯಿ, ಸೂರ್ಯಕಾಂತಿ, ಹತ್ತಿ, ಸೆಣಬು, ಕಬ್ಬು, ತರಕಾರಿ ಮತ್ತು ಹಣ್ಣುಗಳನ್ನು ಜನರ ಅನುಭೋಗಕ್ಕೆ ಒದಗಿಸುತ್ತದೆ.
2. ಇದು ಜಾನುವಾರುಗಳಿಗೆ ಮೇವನ್ನು ಒದಗಿಸುವ ಮೂಲಕ ಹಾಲು, ಮಾಂಸ, ಉಣ್ಣೆ ಇತರೆ ಉತ್ಪಾದನೆಗೆ ನೆರವಾಗುವುದು.
3. 3.. ಕೃಷಿಯು ನಮಗೆ ಆಹಾರ ಭದ್ರತೆಯನ್ನು ಒದಗಿಸಿದೆ. 2015-16 ರಲ್ಲಿ ಭಾರತದ ಒಟ್ಟು ಆಹಾರದ ಉತ್ಪಾದನೆಯು 253.2 ಮಿಲಿಯನ್ ಟನ್‌ನಷ್ಟು ಆಗಿದೆ.
4. ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾ ಸರಕುಗಳನ್ನು ಒದಗಿಸುವುದರ ಮೂಲಕ ಕೃಷಿ ಆಧಾರಿತ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಕೃಷಿಯು ಪ್ರಮುಖ ಪಾತ್ರ ವಹಿಸುತ್ತದೆ. ಉದಾಹರಣೆಗೆ; ಆಹಾರ ಸಂಸ್ಕರಣೆ, ಸಕ್ಕರೆ, ಟೀ, ಕಾಗದ, ಸೆಣಬು, ಬಟ್ಟೆ ಕೈ ಮಗ್ಗ, ಗುಡಿ ಕೈಗಾರಿಕೆ ಇತ್ಯಾದಿ.
5. ಕೃಷಿ ಸರಕುಗಳ ರಫ್ತು ವಿದೇಶಿ ವಿನಿಮಯವನ್ನು ಗಳಿಸುತ್ತದೆ. ಕೃಷಿ ಸರಕುಗಳಾದ ಹತ್ತಿ, ತಂಬಾಕು, ಟೀ ಮತ್ತು ಸೆಣಬು ನಮ್ಮ ಕೃಷಿ ರಫ್ತುಗಳಲ್ಲಿನ ಪ್ರಮುಖ ಪದಾರ್ಥಗಳಾಗಿವೆ.
6. ಕೃಷಿಯು ಶ್ರಮ ಆಧಾರಿತವಾದ ವೃತ್ತಿಯಾಗಿದ್ದು, ಅದು ಭಾರತದಲ್ಲಿ ಅತೀ ಹೆಚ್ಚು ಉದ್ಯೋಗಾವಕಾಶ ನೀಡಿರುವ ಕ್ಷೇತ್ರವಾಗಿದೆ.
7. ಕೃಷಿಯು ಗ್ರಾಮೀಣ ಸಮೃದ್ಧತೆಗೆ ಹಾಗೂ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ. ಇದು ಗ್ರಾಮೀಣ ಪ್ರದೇಶದಲ್ಲಿನ ಜನರ ಬಡತನವನ್ನು ಕಡಿಮೆ ಮಾಡಲು ಆದಾಯ ಸೃಷ್ಟಿಯ ಮೂಲವಾಗಿದೆ.
8. ಕೃಷಿಯು ದ್ವಿತೀಯ ಮತ್ತು ತೃತೀಯ ವಲಯಗಳ ಸರಕು ಮತ್ತು ಸೇವೆಗಳ ಬೇಡಿಕೆ ಹೆಚ್ಚಳಕ್ಕೆ ಕಾರಣವಾಗುವ ಮೂಲಕ ಆ ವಲಯಗಳ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ನೆರವು ನೀಡುತ್ತದೆ.

ಭಾರತದ ಕೃಷಿ ವಲಯದ ಸಮಸ್ಯೆಗಳು:

ಆರ್ಥಿಕತೆಯಲ್ಲಿ ಕೃಷಿಗಿರುವ ಮಹತ್ವದ ಹೊರತಾಗಿಯೂ ಕೃಷಿಯು ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. 1960 ಮತ್ತು 2011 ರ ನಡುವೆ ಕೃಷಿ ವಲಯದ ಹೂಡಿಕೆ ಬೆಳವಣಿಗೆ ದರವು ಕೇವಲ ಶೇ. 2 ರಷ್ಟಿದೆ ಹಾಗೂ ಕೃಷಿಯು ಸಾಕಷ್ಟು ಆದಾಯ ಸೃಷ್ಟಿಸದ ಕಾರಣ ಗ್ರಾಮೀಣ ಬಡತನದ ಪ್ರಮಾಣ ಹೆಚ್ಚಾಗಿಯೇ ಮುಂದುವರೆದಿದೆ. ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳು ಕೃಷಿ ಎದುರಿಸುತ್ತಿರುವ ಹಲವು ಸಮಸ್ಯೆಗಳ ಅಭಿವ್ಯಕ್ತಿಯಂತೆ ತೋರುತ್ತಿದೆ. ಕೃಷಿಯು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳೆಂದರೆ:

1. ಸಣ್ಣ ಹಿಡುವಳಿಗಳು: ರೈತರು ಬೇಸಾಯ ಮಾಡುತ್ತಿರುವ ಭೂಮಿಯ ಸರಾಸರಿ ಗಾತ್ರವು ಅತ್ಯಂತ ಕಡಿಮೆಯಿರುವುದು ಅಲ್ಲದೇ ನಿರಂತರವಾಗಿ ಕಡಿಮೆಯಾಗುತ್ತಿದೆ. ಪ್ರಸ್ತುತ ಇದು 0.5 ಹೆಕ್ಟೇರ್ ಗಿಂತ ಕಡಿಮೆ ಇದೆ. ಇದರಿಂದಾಗಿ ಈ ಸಣ್ಣ ಹಿಡುವಳಿಗಳಲ್ಲಿ ಆಧುನಿಕ ವ್ಯವಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಸಣ್ಣ ಹಿಡುವಳಿಗಳು ಹೆಚ್ಚುತ್ತಿರುವುದಕ್ಕೆ ಕೃಷಿಯ ಮೇಲಿನ ಅಧಿಕ ಅವಲಂಬನೆ ಮತ್ತು ಪಿತ್ರಾರ್ಜಿತ ಆಸ್ತಿ ಕಾನೂನು ಪ್ರಮುಖ ಕಾರಣವಾಗಿದೆ.

2. ಮಳೆಯ ಮೇಲಿನ ಅವಲಂಬನೆ: ನೀರಾವರಿ ಯೋಜನೆಗಳ ಮೇಲೆ ದೊಡ್ಡ ಪ್ರಮಾಣದ ಹೂಡಿಕೆಯ ಹೊರತಾಗಿಯೂ ಎಲ್ಲಾ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ದೊರೆತಿಲ್ಲ. ಇದರ ಫಲಿತಾಂಶವಾಗಿ ಪ್ರಸ್ತುತ ಶೇ. 60 ಕೃಷಿ ಮಳೆಯನ್ನು ಅವಲಂಬಿಸಿದೆ. ನಮಗೆ ತಿಳಿದಿರುವಂತೆ ಮಳೆಯು ಅನಿಶ್ಚಿತ, ಅನಿಯಮಿತವಾಗಿದೆ ಮತ್ತು ಹಲವು ಭಾರಿ ಸಾಕಷ್ಟು ಮಳೆಯಾಗುವುದಿಲ್ಲ. ಭಾರತದ ಕೃಷಿ 'ಮಾನ್ಸೂನ್‌ನೊಂದಿಗೆ ಜೂಜಾಟವಾಡುತ್ತದೆ'.

3. ಪ್ರಾಚೀನ ಮತ್ತು ಸಂಪ್ರಾದಾಯಿಕ ತಂತ್ರಜ್ಞಾನದ ಬಳಕೆ: ಸಣ್ಣ ಹಿಡುವಳಿ ಮತ್ತು ವರ್ಷಪೂರ್ತಿ ಭೂಮಿಯಲ್ಲಿ ತೇವಾಂಶ ಇರುವುದಿಲ್ಲವಾದ್ದರಿಂದ ರೈತರ ಆದಾಯ ಗಳಿಸುವ ಸಾಮರ್ಥ ಕುಂದಿದೆ. ಇದು ಹೂಟೆಯನ್ನು ಮಾಡಿ ಉತ್ತಮ ಆದಾನಗಳನ್ನು ಬಳಸಿ, ಉತ್ತಮ ಇಳುವರಿ ಪಡೆಯುವ ಸಾಮರ್ಥವನ್ನು ಕಡಿಮೆಗೊಳಿಸುತ್ತದೆ. ಬಹುತೇಕ ರೈತರು ಉತ್ತಮ ಇಳುವರಿ ಪಡೆಯಲು ಗುಣಮಟ್ಟದ ಬಿತ್ತನೆ ಬೀಜ, ಸಾವಯುವ ಗೊಬ್ಬರ, ಯಂತ್ರೋಪಕರಣ, ವಿದ್ಯುತ್ ಇತರೆ ಅಗತ್ಯತೆಗಳನ್ನು ಹೊಂದಲು ಸಾಧ್ಯವಾಗುತ್ತಿಲ್ಲ. ಇದು ಕೃಷಿಯ ಕಡಿಮೆ ಉತ್ಪಾದನೆಗೆ ಕಾರಣವಾಗಿದೆ.

4. ಕಡಿಮೆ ಇಳುವರಿ: ಭಾರತದಲ್ಲಿ ಇಳುವರಿಯ ಮಟ್ಟ ಇತರೆ ದೇಶಗಳಿಗಿಂತ ಮೇಲೆ ಚರ್ಚಿಸಿದ ಕಾರಣಗಳಿಂದಾಗಿ ಕಡಿಮೆ ಇದೆ. ಇದರ ಫಲಿತಾಂಶ ಆಹಾರ ಉತ್ಪಾದನೆ ಕಡಿಮೆಯಾಗಿದೆ ಮತ್ತು ಅಧಿಕ ಅಪೌಷ್ಟಿಕತೆ ಮತ್ತು ಹಸಿವಿನ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ.

5. ಋತುಮಾನದ ಉದ್ಯೋಗಾವಕಾಶ ಮತ್ತು ಮರೆಮಾಚಿದ ನಿರುದ್ಯೋಗ: ರೈತರ ಕೃಷಿ ಚಟುವಟಿಕೆಯು ಮಳೆಯನ್ನು ಅವಲಂಬಿಸಿರುವುದರಿಂದ ಅವರು ವರ್ಷಪೂರ್ತಿ ಉದ್ಯೋಗಾವಕಾಶ ಪಡೆಯುವುದಿಲ್ಲ. ಅವರು ಕೆಲವು

ತಿಂಗಳುಗಳ ಕಾಲ ಉದ್ಯೋಗಾವಕಾಶ ಪಡೆಯುವರು. ಇದಲ್ಲದೇ, ಕುಟುಂಬದ ಎಲ್ಲಾ ಸದಸ್ಯರು ಅದೇ ಸಣ್ಣ ಹಿಡುವಳಿಯಲ್ಲಿ ಕೆಲಸ ಮಾಡುವುದರಿಂದ, ಕೆಲವರಿಗೆ ಮಾತ್ರ ಕೆಲಸವಿದ್ದರೂ, ಎಲ್ಲರೂ ಕೆಲಸ ಮಾಡುತ್ತಾರೆ. ಹಾಗಾಗಿ ಯಾರಿಗೂ ಪೂರ್ಣಪ್ರಮಾಣದಲ್ಲಿ ಕೆಲಸವಿರುವುದಿಲ್ಲ. ಇದನ್ನು 'ಮರೆಮಾಚಿದ ನಿರುದ್ಯೋಗ' ಎನ್ನುವರು.

6. ಸಮರ್ಪಕವಾದ ಮತ್ತು ದಕ್ಷ ಮಾರುಕಟ್ಟೆ ವ್ಯವಸ್ಥೆಯ ಕೊರತೆ: ಕೃಷಿ ಸರುಕುಗಳ ಮಾರುಕಟ್ಟೆ ವ್ಯವಸ್ಥೆ ಕೃಷಿ ವಸ್ತುಗಳಿಗೆ ಉತ್ತಮ ಬೆಲೆಯ ಭರವಸೆ ನೀಡುತ್ತಿಲ್ಲ. ಮತ್ತೊಂದೆಡೆ ದೊಡ್ಡ ಸಂಖ್ಯೆಯಲ್ಲಿ ಇರುವ ಸ್ಥಳೀಯ ಮಾರಾಟಗಾರರು ಮತ್ತು ದಲ್ಲಾಳಿಗಳು, ರೈತರು ತಮ್ಮ ಸರಕನ್ನು ಕಡಿಮೆ ಬೆಲೆಗೆ ಮಾರುವಂತೆ ಒತ್ತಡ ತಂದು ಅವರನ್ನು ಸುಲಿಗೆ ಮಾಡುತ್ತಿದ್ದಾರೆ. ಇದರಿಂದ ಅವರ ಆದಾಯ ಕಡಿಮೆಯಾಗಿದೆ.

7. ಅಜ್ಞಾನ ಮತ್ತು ಮಾಹಿತಿ ಕೊರತೆ: ಬಹುಸಂಖ್ಯಾತ ರೈತರು ಅನಕ್ಷರಸ್ಥರು ಅಥವಾ ಅರೆ- ಅಕ್ಷರಸ್ಥರಾಗಿದ್ದಾರೆ. ಅವರು ಕೃಷಿ ಆದಾನಗಳು ಹಾಗೂ ಕೃಷಿ ಉತ್ಪನ್ನಗಳ ಚಾಲ್ತಿಯಲ್ಲಿರುವ ಬೆಲೆಗಳು ಮಾರುಕಟ್ಟೆ ವಿಚಾರಗಳ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಮಾಹಿತಿಗಳು ದೊಡ್ಡ ಮಟ್ಟದಲ್ಲಿನ ಪ್ರಚಾರದ ಹೊರತಾಗಿಯೂ, ರೈತರು ಇದನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಬಹುತೇಕ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸರ್ಕಾರವು ಅವರ ಕಲ್ಯಾಣಕ್ಕಾಗಿ ಜಾರಿಗೊಳಿಸಿರುವ ಅನೇಕ ಯೋಜನೆಗಳ ಬಗ್ಗೆ ಮಾಹಿತಿಯೇ ಇಲ್ಲ.

8. ಸಾಲದ ಹೊರೆ: ರೈತರು ಕಡಿಮೆ ಆದಾಯ ಮತ್ತು ಹೆಚ್ಚುತ್ತಿರುವ ವೆಚ್ಚಗಳ ಕಾರಣದಿಂದ ಹಲವು ಮೂಲಗಳಿಂದ ಸಾಲವನ್ನು ಮಾಡುತ್ತಿದ್ದಾರೆ. ರೈತರ ಸಾಲದ ಬಹುದೊಡ್ಡ ಮೂಲ ಸ್ಥಳೀಯ ಲೇವಾದೇವಿಗಾರರು ಮತ್ತು ವ್ಯಾಪಾರಸ್ಥರಾಗಿದ್ದು, ಇವರು ಅಧಿಕ ಬಡ್ಡಿದರ ವಿಧಿಸುವರು ಮತ್ತು ಹಲವು ಭಾರಿ ರೈತರ ಉತ್ಪನ್ನವನ್ನು ಕಡಿಮೆ ಬೆಲೆಗೆ ಕೊಂಡುಕೊಳ್ಳುವರು. ಬ್ಯಾಂಕು ಮತ್ತು ಹಣಕಾಸಿನ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆಯಾದರೂ, ಇವುಗಳು ದೊಡ್ಡ ರೈತರಿಗೆ ನೆರವಾಗುತ್ತಿದ್ದು, ಸಣ್ಣ ಮತ್ತು ಅತೀ ಸಣ್ಣ ರೈತರು ಲೇವಾದೇವಿಗಾರರ ಕಪಿಮುಷ್ಟಿಯಲ್ಲಿ ಬಳಲುವಂತೆ ಆಗಿದೆ. ಇದು ರೈತರ ಸಾಲದ ಹೊರೆಯನ್ನು ಹೆಚ್ಚಿಸಿದ್ದು, ಹಲವು ಬಾರಿ ಮುಂದಿನ ಪೀಳಿಗೆಗೆ ವರ್ಗಾವಣೆಯಾಗಿ, ಅಂತಿಮವಾಗಿ ರೈತರು ಜಮೀನನ್ನು ಮಾರಾಟ ಮಾಡಿ ಸಾಲ ತೀರಿಸುವಂತಹ ಪರಿಸ್ಥಿತಿ ತಂದೊಡ್ಡುತ್ತಿದೆ.

9. ಫಲವತ್ತತೆಯ ಕುಸಿತ: ನೀರಾವರಿ ಪ್ರದೇಶಗಳಲ್ಲಿ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಅಧಿಕ ಬಳಕೆಯಿಂದಾಗಿ ಭೂಮಿಯ ಫಲವತ್ತತೆಯು ಕುಂದಿದೆ. ತಪ್ಪಾದ ಬೇಸಾಯ ಪದ್ಧತಿ ಮತ್ತು ನೀರಾವರಿ ಅನುಸರಣೆಯು ಭೂ ಸವಕಳಿಯನ್ನು ಹೆಚ್ಚಿಸಿದ್ದರೆ, ಇದರ ಪರಿಣಾಮ ಪ್ರಸ್ತುತ ಇಳುವರಿ

ಕಡಿಮೆಯಾಗಿರುವುದು ಅಲ್ಲದೆ, ಭವಿಷದ ಪೋಷಣ ಶಕ್ತಿಯು ಕುಂದಿರುವುದರಿಂದ ಆಹಾರ ಭದ್ರತೆಗೆ ಬೆದರಿಕೆಯೊಡ್ಡುತ್ತಿದೆ.

ಪರಿಹಾರೋಪಾಯಗಳು:

ಭಾರತದ ಕೃಷಿ ವಲಯದ ಸಮಸ್ಯೆಗಳಿಗೆ ಕೆಲವು ಪ್ರಮುಖ ಪರಿಹಾರೋಪಾಯಗಳೆಂದರೆ.

1. ಸಹಕಾರಿ ಬೇಸಾಯ ಮತ್ತು ಭೂ ಹಿಡುವಳಿಗಳ ಕ್ರೋಢೀಕರಣವು ಭೂ ವಿಭಜನೆ, ಸಣ್ಣ ಹಿಡುವಳಿ ಮತ್ತು ಆರ್ಥಿಕವಾಗಿ ಯೋಗ್ಯವಲ್ಲದ ಹಿಡುವಳಿಗಳ ಸಮಸ್ಯೆಯನ್ನು ಪರಿಹರಿಸುವುದು.
2. ಬೆಳೆ ನಿರ್ವಹಣಾ ತಂತ್ರದ ಜಾರಿಯ ಮೂಲಕ ಬೆಳೆ ವೈವಿಧತೆ, ಬೆಳೆ ಆವರ್ತ, ಉತ್ತಮ ಆದಾನಗಳ ಬಳಕೆ ಮೊದಲಾದವುಗಳ ಮೂಲಕ ಭೂಮಿಯ ಇಳುವರಿಯಲ್ಲಿನ ಏರಿಳಿತಗಳನ್ನು ಕಡಿಮೆ ಮಾಡಬಹುದು.
3. ಬೆಳೆ ವೈವಿಧ್ಯತೆ, ಇತರೆ ಆದಾನ ಮತ್ತು ಬೇಸಾಯ ಪದ್ಧತಿಗಳಲ್ಲಿ ಎಲ್ಲಾ ರೀತಿಯ ಬೆಳೆಗಳಿಗೆ ಸಂಬಂಧಿಸಿದಂತೆ ಸಂಶೋಧನೆಗೆ ಪ್ರೋತ್ಸಾಹಿಸುವ ಮೂಲಕ ರೈತರು ಎದುರಿಸುತ್ತಿರುವ ತಂತ್ರಜ್ಞಾನದ ಸಮಸ್ಯೆಯಿಂದ ಹೊರಬರಬಹುದು.
4. ಭೂಮಿಯ ಪರೀಕ್ಷೆಗೆ ಉತ್ತೇಜಿಸುವ ಮೂಲಕ ನಿರ್ದಿಷ್ಟ ಸಮಸ್ಯೆಗಳನ್ನು ಗುರುತಿಸಬಹುದು ಮತ್ತು ರೈತರಿಗೆ ಗೊಬ್ಬರ ಮತ್ತು ಪೌಷ್ಠಿಕಾಂಶಗಳ ಬಳಕೆಯ ಬಗ್ಗೆ ಸಲಹೆಗಳನ್ನು ನೀಡಿ ಭೂಮಿಯ ಫಲವತ್ತತೆ ಮತ್ತು ಇಳುವರಿ ಮಟ್ಟವನ್ನು ಹೆಚ್ಚಿಸಬಹುದು.
5. ಪರ್ಯಾಯ ನೀರಾವರಿಯ ವಿಧಾನಗಳ ಬಳಕೆಯನ್ನು ಪ್ರೋತ್ಸಾಹಿಸುವುದು. ಉದಾಹರಣೆಗೆ ಹನಿ ನೀರಾವರಿ, ತುಂತುರು ನೀರಾವರಿ, ಮಳೆಕೊಯ್ಲು, ಇತ್ಯಾದಿ, ಕೃಷಿಯಲ್ಲಿನ ನೀರಿನ ತೇವಾಂಶದ ಸಮಸ್ಯೆಯನ್ನು ಬಗೆಹರಿಸಬಹುದು.
6. ನಿಯಂತ್ರಿತ ಮಾರುಕಟ್ಟೆಗಳನ್ನು, ಉಗ್ರಾಣ, ಕಾವಲು ಸಿಬ್ಬಂದಿ, ಮತ್ತು ಇತರೆ ಉನ್ನತ ಸೌಲಭಗಳೊಂದಿಗೆ ಬಲಪಡಿಸುವುದರಿಂದ ಮಧ್ಯವರ್ತಿಗಳ ಸಮಸ್ಯೆ ನಿವಾರಿಸಿ, ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರೆಯುವಂತೆ ಮಾಡಬಹುದು.
7. ರೈತರಿಗೆ ಉತ್ತಮ ಆದಾಯವನ್ನು ನಿಶ್ಚಿತಗೊಳಿಸಲು ಕನಿಷ್ಠ ಬೆಂಬಲ ಬೆಲೆಯನ್ನು ಬಲಗೊಳಿಸಿ ಎಲ್ಲಾ ಬೆಳೆಗಳಿಗೆ ವಿಸ್ತರಿಸಬೇಕು.
8. ರೈತರಿಗೆ ಸಹಕಾರಿ ಸಾಲ ಸಂಸ್ಥೆಗಳನ್ನು ಬಲಪಡಿಸುವ ಮೂಲಕ ರೈತರಿಗೆ ರಿಯಾಯಿತಿ ಬಡ್ಡಿದರದಲ್ಲಿ ಸಾಲವು ದೊರೆಯುವಂತೆ ಮಾಡುವ ಅಗತ್ಯವಿದೆ. ಈ ಸಂಸ್ಥೆಗಳು ಮಾಹಿತಿ ಹರಡುವಿಕೆ ಮತ್ತು ರೈತರಿಗೆ ಇತರೆ ಸೇವಾ-ಸೌಲಭ್ಯ ನೀಡಲು ನೆರವಾಗುತ್ತವೆ.

9. ಬ್ಯಾಂಕಿನ ಸಾಲಗಳು ನಬಾರ್ಡ್ (NABARD) ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಂತಹ ವಿಶೇಷ ಬ್ಯಾಂಕುಗಳ ಮೂಲಕ ಅಗತ್ಯ ರೈತರಿಗೆ ದೊರೆಯುತ್ತಿದೆ. ಇವು ಭೂಮಿಯಲ್ಲಿ ಶಾಶ್ವತ ಸುಧಾರಣೆ ಕೈಗೊಳ್ಳಲು ನೆರವಾಗಿವೆ. ಉದಾಹರಣೆ: ಕೊಳವೆ ಬಾವಿ ಕೊರೆಸಲು, ಬೇಲಿ ಹಾಕಲು, ಭೂಮಿಯನ್ನು ಕೊಳ್ಳಲು ಮತ್ತು ಕೃಷಿ ಸಲಕರಣೆ, ಯಂತ್ರಗಳನ್ನು ಕೊಳ್ಳಲು ನೆರವಾಗುತ್ತವೆ. ಇಂತಹ ಯೋಜನೆಗಳ ಬಗ್ಗೆ ಮಾಹಿತಿಯನ್ನು ವಿಸ್ತೃತವಾಗಿ ಪ್ರಚಾರಗೊಳಿಸಬೇಕು.

ದ್ವಿತೀಯ ವಲಯ:

ಆಹಾರೇತರ ಸರಕು ಪದಾರ್ಥಗಳನ್ನು ಉತ್ಪಾದಿಸುವ ವಲಯವನ್ನು 'ದ್ವಿತೀಯ ವಲಯ' ಎನ್ನುವರು. ಇಲ್ಲಿ ಪ್ರಾಥಮಿಕ ಕಚ್ಚಾ ಸರಕುಗಳನ್ನು ಸಿದ್ಧಪಡಿಸಿದ ವಸ್ತುವಾಗಿ ಮಾರ್ಪಾಡು ಮಾಡಲಾಗುವುದರಿಂದ ಇದನ್ನು 'ದ್ವಿತೀಯ ವಲಯ' ಎನ್ನುವರು. ಕೈಗಾರಿಕೆಗಳು ಉತ್ಪಾದನೆಯಲ್ಲಿ ತೊಡಗಿರುವ ಕಾರಣದಿಂದ ಇದನ್ನು ಸಾಮಾನ್ಯವಾಗಿ 'ಕೈಗಾರಿಕಾ ವಲಯ' ಎಂದೂ ಕರೆಯುವರು. ಇದು ತಯಾರಿಕೆ, ವಿದ್ಯುತ್, ಗ್ಯಾಸ್, ನೀರಿನ ಪೂರೈಕೆ, ಕಟ್ಟಡ ನಿರ್ಮಾಣ ಮತ್ತು ಆಹಾರೇತರ ವಸ್ತುಗಳಾದ ಬಟ್ಟೆ, ಪುಸ್ತಕ, ಪೆನ್ನು, ಕಂಪ್ಯೂಟರ್, ಪೀಠೋಪಕರಣ, ಎಲೆಕ್ಟ್ರಾನಿಕ್ ಉಪಕರಣ, ವಸತಿ, ರಸ್ತೆ, ಸೇತುವೆ ನಿರ್ಮಾಣ ಇತ್ಯಾದಿಗಳನ್ನು ಒಳಗೊಂಡಿದೆ.

ಕೈಗಾರಿಕೆಯ ಅರ್ಥ:

ಕಚ್ಚಾವಸ್ತುಗಳನ್ನು ಸಿದ್ಧಪಡಿಸಿದ ವಸ್ತುಗಳಾಗಿ ಪರಿವರ್ತಿಸುವ ಉತ್ಪಾದನಾ ಘಟಕಗಳನ್ನು 'ಕೈಗಾರಿಕೆ' ಎನ್ನುವರು. ಇದು ಬಾಳಿಕೆ ಬರುವ ವಸ್ತುಗಳಾದ ಬಟ್ಟೆ, ಶೂ, ಪುಸ್ತಕ, ಪೆನ್ನು, ಕಂಪ್ಯೂಟರ್, ಗಾಜು, ಕಬ್ಬಿಣ ಮತ್ತು ಉಕ್ಕು, ಮೋಟಾರುಗಾಡಿ ಇತ್ಯಾದಿಗಳನ್ನು ಒದಗಿಸುತ್ತದೆ.

ವರ್ಗೀಕರಣ:

ಕೈಗಾರಿಕೆಗಳನ್ನು ಹೂಡಿಕೆ ಮತ್ತು ಮಾಲೀಕತ್ವದ ಆಧಾರದ ಮೇಲೆ ವಿಂಗಡಿಸಲಾಗಿದೆ. ಕೈಗಾರಿಕೆಗಳನ್ನು ಹೂಡಿಕೆಯ ಗಾತ್ರದ ಆಧಾರದ ಮೇಲೆ ಕೆಳಕಂಡಂತೆ ವರ್ಗೀಕರಿಸಬಹುದು. ಅವುಗಳೆಂದರೆ-

1. ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು (MSME) ಮತ್ತು 2. ಬೃಹತ್ ಗಾತ್ರದ ಕೈಗಾರಿಕೆಗಳು.

ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು (MSME):

MSME ಕಾಯ್ದೆ 2006 ಸೂಚಿಸುವಂತೆ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಸಾವರ ಮತ್ತು ಯಂತ್ರೋಪಕರಣಗಳ ಮೇಲಿನ ಹೂಡಿಕೆ ಆಧಾರದಲ್ಲಿ ವ್ಯಾಖ್ಯಾನಿಸಿದೆ. ಅವುಗಳೆಂದರೆ (೧) ತಯಾರಿಕೆ ಅಥವಾ ಉತ್ಪಾದನೆ, ಸರಕುಗಳ ಸಂಸ್ಕರಣೆ ಅಥವಾ ಸಂರಕ್ಷಣೆ ಮತ್ತು (೨) ಸೇವೆಗಳನ್ನು ಒದಗಿಸುವಿಕೆ ಅಥವಾ ಅರ್ಪಿಸುವಿಕೆ. MSME 2006 ಕಾಯ್ದೆಯಲ್ಲಿ

ಸ್ಥಾವರ ಮತ್ತು ಯಂತ್ರೋಪಕರಣಗಳ ಅಥವಾ ಉಪಕರಣಗಳಲ್ಲಿ ಹೂಡಿಕೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ವ್ಯಾಖ್ಯಾನಿಸಲಾಗಿದೆ.

ತಯಾರಿಕಾ ಉದ್ಯಮಗಳು: ತಯಾರಿಕಾ ಘಟಕಗಳನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.

೧. ಅತೀ ಸಣ್ಣ ಉದ್ಯಮಗಳು: ಈ ವಿಭಾಗದಲ್ಲಿ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ

ಹೂಡಿಕೆಯ ಮಿತಿ ರೂ. 25 ಲಕ್ಷಗಳನ್ನು ಮೀರುವಂತಿಲ್ಲ.

೨. ಸಣ್ಣ ಉದ್ಯಮಗಳು: ಈ ವಿಭಾಗದಲ್ಲಿ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ಹೂಡಿಕೆಯ ಮಿತಿಯು ರೂ. 25 ಲಕ್ಷದಿಂದ ರೂ. 5 ಕೋಟಿವರೆಗೆ.

೩. ಮಧ್ಯಮ ಉದ್ಯಮಗಳು: ಈ ವಿಭಾಗದಲ್ಲಿ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ಹೂಡಿಕೆಯ ಮಿತಿಯು ರೂ. 5 ಕೋಟಿಯಿಂದ ರೂ. 10 ಕೋಟಿ ಒಳಗೆ ಇರಬೇಕು.

ಬೃಹತ್ ಪ್ರಮಾಣದ ಕೈಗಾರಿಕೆಗಳು:

ಬೃಹತ್ ಪ್ರಮಾಣದ ಬಂಡವಾಳವನ್ನು ಹೂಡಿರುವ ಮತ್ತು ಹೆಚ್ಚಿನ ಸಂಖ್ಯೆಯ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡಿರುವ ಕೈಗಾರಿಕೆಗಳನ್ನು 'ಬೃಹತ್ ಪ್ರಮಾಣದ ಕೈಗಾರಿಕೆಗಳು' ಎನ್ನುವರು. ಉದಾಹರಣೆಗೆ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ, ಮೋಟಾರುಗಾಡಿ, ಸಿಮೆಂಟ್ ಇತ್ಯಾದಿ.

ಸಾರ್ವಜನಿಕ ಮತ್ತು ಖಾಸಗಿ ಉದ್ಯಮಗಳು:

ಮಾಲೀಕತ್ವದ ಆಧಾರದ ಮೇಲೆ ಕೈಗಾರಿಕೆಗಳನ್ನು ಖಾಸಗಿ ಮತ್ತು ಸಾರ್ವಜನಿಕ ಉದ್ಯಮಗಳು ಎಂದು ವಿಂಗಡಿಸಲಾಗಿದೆ.

1. ಸಾರ್ವಜನಿಕ ಉದ್ಯಮಗಳು: ಸರ್ಕಾರದ ಮಾಲೀಕತ್ವ ಹೊಂದಿರುವ ಮತ್ತು ನಿರ್ವಹಣೆಯಲ್ಲಿರುವ ಕೈಗಾರಿಕೆಗಳನ್ನು 'ಸಾರ್ವಜನಿಕ ಉದ್ಯಮಗಳು' ಎನ್ನುವರು. ಉದಾಹರಣೆಗೆ: ಭಾರತ್ ಹೆವಿ ಎಲೆಕ್ಟ್ರಿಕಲ್ ಲಿಮಿಟೆಡ್ (BHEL), ಕೋಲ್ ಇಂಡಿಯಾ ಲಿಮಿಟೆಡ್ (CIL), ಭಾರತೀಯ ಅನಿಲ ಪ್ರಾಧಿಕಾರ ನಿಗಮ (GAIL), ಇಂಡಿಯನ್ ಆಯಿಲ್ ಕಾರ್ಪೊರೇಶನ್ ಲಿಮಿಟೆಡ್ (IOCL), ರಾಷ್ಟ್ರೀಯ ಉಷ್ಣಶಕ್ತಿ ನಿಗಮ (NTPC) ತೈಲ ಮತ್ತು ನೈಸರ್ಗಿಕ ಅನಿಲ ನಿಗಮ ನಿಯಮಿತ (ONGC), ಭಾರತೀಯ ಉಕ್ಕು ಪ್ರಾಧಿಕಾರ ನಿಗಮ (SAIL), ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL), ಇತ್ಯಾದಿ.

2. ಖಾಸಗಿ ಉದ್ಯಮಗಳು: ಖಾಸಗಿ ವ್ಯಕ್ತಿಗಳ ಗುಂಪಿನ ಮಾಲೀಕತ್ವ ಮತ್ತು ನಿರ್ವಹಣೆಯಲ್ಲಿರುವ ಕೈಗಾರಿಕೆಗಳನ್ನು 'ಖಾಸಗಿ ಉದ್ಯಮಗಳು' ಎನ್ನುವರು.

ಆರ್ಥಿಕ ಅಭಿವೃದ್ಧಿಯಲ್ಲಿ ಕೈಗಾರಿಕಾ ವಲಯದ ಮಹತ್ವ:

ಭಾರತದಂತಹ ಅಭಿವೃದ್ಧಿಶೀಲ ಆರ್ಥಿಕತೆಗಳಿಗೆ ಕೈಗಾರಿಕಾ ವಲಯವು ನಿರ್ಣಾಯಕ ಮತ್ತು ಮಹತ್ವದ ಪಾತ್ರ ನಿರ್ವಹಿಸುತ್ತದೆ. ಇದು ಸುಸ್ಥಿರ ಉನ್ನತ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಗೆ ನೆರವಾಗುತ್ತಿದೆ. ಆರ್ಥಿಕ ಅಭಿವೃದ್ಧಿಯಲ್ಲಿ ಕೈಗಾರಿಕಾ ವಲಯದ ಪಾತ್ರ ಮತ್ತು ಮಹತ್ವವೆಂದರೆ:

i. ಕೈಗಾರಿಕಾ ವಲಯದ ಅಭಿವೃದ್ಧಿಯು ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ ಆಧುನೀಕರಣಕ್ಕೆ ಕಾರಣವಾಗುವ ಮೂಲಕ ಈ ವಲಯದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ನೆರವಾಗುತ್ತಿದೆ. ಕೈಗಾರಿಕಾ ವಲಯವು ಟ್ರ್ಯಾಕ್ಟರ್, ಟಿಲ್ಲರ್, ಪಂಪ್‌ಸೆಟ್, ಗೊಬ್ಬರ, ವಿದ್ಯುತ್ತನ್ನು ಒದಗಿಸುವ ಮೂಲಕ ಕೃಷಿಯ ಉತ್ಪಾದಕತೆ ಹೆಚ್ಚುಸುವುದು. ಅಲ್ಲದೇ ಇದು ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ಅರಣ್ಯೀಕರಣ, ಇತ್ಯಾದಿಗಳ ಅಭಿವೃದ್ಧಿಗೂ ಆಧುನಿಕ ಸಲಕರಣೆಗಳನ್ನು ಒದಗಿಸುತ್ತದೆ.

ii. ಕೈಗಾರಿಕಾ ವಲಯವು ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ 24.3 ರಷ್ಟು ಉದ್ಯೋಗಾವಕಾಶ ಒದಗಿಸುತ್ತದೆ. ಇದು ಬಡತನ ಮತ್ತು ನಿರುದ್ಯೋಗ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

iii. ರಾಷ್ಟ್ರೀಯ ಆದಾಯಕ್ಕೆ ಕೈಗಾರಿಕಾ ವಲಯದ ಪಾಲು ಶೇ. 24 ರಷ್ಟಿದೆ.

iv. ಕೈಗಾರಿಕಾ ವಲಯದಲ್ಲಿ ಆದಾಯವು ಕೃಷಿ ವಲಯಕ್ಕೆ ಹೋಲಿಸಿದರೆ ಹೆಚ್ಚಾಗಿದೆ. ಇದು ಅಧಿಕ ಉಳಿತಾಯ ಮತ್ತು ಬಂಡವಾಳ ನಿರ್ಮಾಣಕ್ಕೆ ನೆರವಾಗುವುದರ ಮೂಲಕ ಕೈಗಾರಿಕಾ ವಲಯದಲ್ಲಿ ಮರು ಹೂಡಿಕೆ ಹೆಚ್ಚಾಗಿ ಕೈಗಾರಿಕೆಗಳ ವಿಸ್ತಾರ ಮತ್ತು ಅಭಿವೃದ್ಧಿಗೆ ಕಾರಣವಾಗಿದೆ.

v. ಪೂರಕ ಘಟಕಗಳು ಸಣ್ಣ ಉತ್ಪಾದನಾ ಘಟಕಗಳಾಗಿದ್ದು, ಇವು ದೊಡ್ಡ ಕೈಗಾರಿಕೆಗಳಿಗೆ ಅಗತ್ಯವಿರುವ ಬಿಡಿ ಭಾಗಗಳನ್ನು ಉತ್ಪಾದಿಸಿ ಪೂರೈಕೆ ಮಾಡುತ್ತಿವೆ. ಕೈಗಾರಿಕೆಗಳ ಬೆಳವಣಿಗೆಯು ಈ ಪೂರಕ ಕೈಗಾರಿಕೆಗಳ ಅಭಿವೃದ್ಧಿಗೆ ನೆರವಾಗಿ ಆ ಮೂಲಕ ಉದ್ಯೋಗಾವಕಾಶಗಳ ಸೃಷ್ಟಿಗೆ ನೆರವಾಗುತ್ತವೆ.

vi. ಕೈಗಾರಿಕೆಗಳ ಸ್ಥಾಪನೆಯು ನಗರ ಪ್ರದೇಶದ ಅಭಿವೃದ್ಧಿಗೆ ಹಾಗೂ ನಗರ ಮತ್ತು ಪಟ್ಟಣಗಳ ಬೆಳವಣಿಗೆಗೆ ಕಾರಣವಾಗುತ್ತದೆ.

vii. ಕೈಗಾರಿಕೆಗಳ ಬೆಳವಣಿಗೆಯು ಸಾರಿಗೆ ಮತ್ತು ಸಂಪರ್ಕ, ಶಾಲೆ, ಆಸ್ಪತ್ರೆ, ಬ್ಯಾಂಕ್ ಮತ್ತು ಇತರೆ ಅಗತ್ಯ ಮೂಲಭೂತ ಸೇವೆಗಳ ಅಭಿವೃದ್ಧಿಗೆ ನೆರವಾಗುತ್ತದೆ.

viii. ಕೈಗಾರಿಕಾ ವಲಯವು ಬಾಳಿಕೆ ಬರುವ ಐಷರಾಮಿ ಸರಕುಗಳನ್ನು ಉತ್ಪಾದಿಸಿ ಇತರೆ ದೇಶಗಳಿಗೆ ರಫ್ತು ಮಾಡುವುದರಿಂದ ಅತಮೂಲ್ಯ ವಿದೇಶಿ ವಿನಿಮಯ ಗಳಿಸಲು ನೆರವಾಗುತ್ತದೆ. ಭಾರತವು ಬಟ್ಟೆ, ಆಭರಣ- ಹರಳು, ಇಂಜಿನಿಯರಿಂಗ್ ಸರಕು, ರಾಸಾಯನಿಕ, ಚರ್ಮದ ಉತ್ಪನ್ನ ಮತ್ತು ಕರಕುಶಲ ವಸ್ತುಗಳನ್ನು ರಫ್ತು ಮಾಡುತ್ತದೆ. ಭಾರತದ ರಫ್ತಿನಲ್ಲಿ ಕೈಗಾರಿಕಾ ವಲಯದ ಪಾಲು ಶೇ.64 ರಷ್ಟಿದೆ.

ix. ಕೈಗಾರಿಕೆಗಳ ಬೆಳವಣಿಗೆ ಸದಾ ಸಂಶೋಧನೆ ಮತ್ತು ಅಭಿವೃದ್ಧಿಗೆ ಪ್ರೋತ್ಸಾಹಿಸುವುದು. ಇದು ಹೊಸ ಸರಕುಗಳ ಉತ್ಪಾದನೆಗೆ ಮತ್ತು ಉತ್ಪಾದನೆಯ ವಿಧಾನಗಳ ಆವಿಷ್ಕಾರಕ್ಕೆ ಸಹಾಯ ಮಾಡುತ್ತದೆ. ಸಂಶೋಧನೆಗಳು, ಅನ್ವೇಷಣೆ ಮತ್ತು ಆವಿಷ್ಕಾರಕರಗಳ ಅಭಿವೃದ್ಧಿಯು ರಾಷ್ಟ್ರವು ಪ್ರಗತಿ ಹೊಂದಲು ಮತ್ತು ಸ್ಪರ್ಧಾತ್ಮಕವಾಗಲು ನೆರವಾಗುತ್ತದೆ.

x. ಕೈಗಾರಿಕಾ ವಲಯವು ಆಧುನಿಕ ದೃಷ್ಟಿಕೋನ, ಉತ್ತಮ ಮನೋಧರ್ಮ, ಸಾಮಾಜಿಕ ಸಂಸ್ಕೃತಿವುಳ್ಳ ಸಾಮಾಜಿಕ ಸಂಬಂಧಗಳನ್ನು ಅದರಲ್ಲಿ ಪಾಲ್ಗೊಳ್ಳುವವರಲ್ಲಿ ಬೆಳಸುತ್ತದೆ.

ಭಾರತದ ಕೈಗಾರಿಕಾ ವಲಯದ ಸಮಸ್ಯೆಗಳು:

ಕೈಗಾರಿಕಾ ವಲಯವು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಕೆಲವು ಪ್ರಾರಂಭದಿಂದಲೂ ಇವೆ ಮತ್ತು ಕೆಲವು ಇತ್ತೀಚಿನದವುಗಳಾಗಿವೆ. ಭಾರತದ ಕೈಗಾರಿಕಾ ವಲಯದ ಪ್ರಮುಖ ಸಮಸ್ಯೆಗಳೆಂದರೆ:

1. ಮೂಲಭೂತ ಸೌಕರ್ಯಗಳ ಅಡೆತಡೆಗಳು ಕೈಗಾರಿಕಾ ವಲಯದ ಪ್ರಗತಿಯನ್ನು ಕುಂಠಿತಗೊಳಿಸುತ್ತಿವೆ.
2. ಭಾರತದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯು ಕೆಲವೇ ರಾಜ್ಯ ಮತ್ತು ನಗರಗಳಿಗೆ ಮಾತ್ರ ಸೀಮಿತವಾಗಿವೆ. ಇದು ಪ್ರಾದೇಶಿಕ ಅಸಮತೋಲನಕ್ಕೆ ಕಾರಣವಾಗಿದೆ.
3. ಕಚ್ಚಾ ವಸ್ತುಗಳ ಕೊರತೆ, ಕಾರ್ಮಿಕರ ಸಮಸ್ಯೆ, ವಿದ್ಯುತ್ ಬಿಕ್ಕಟ್ಟು, ನುರಿತ ಕೆಲಸಗಾರರ ಕೊರತೆ, ಬಂಡವಾಳದ ಕೊರತೆ ಇವುಗಳಿಂದಾಗಿ ಕೈಗಾರಿಕೆಗಳು ತಮ್ಮ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.
4. ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಹಣಕಾಸು ಮತ್ತು ಆಡಳಿತಾತ್ಮಕ ಸ್ವಾಯತ್ತತೆ ಕೊರತೆಯಿಂದಾಗಿ ಅವುಗಳ ಪ್ರಗತಿಗೆ ತೊಂದರೆಯನ್ನುಂಟು ಮಾಡಿದೆ.
5. ಹೆಚ್ಚುತ್ತಿರುವ ರೋಗಗ್ರಸ್ಥ ಕೈಗಾರಿಕೆಗಳ ಸಂಖ್ಯೆಯು ಕೈಗಾರಿಕೆಗಳ ಬೆಳವಣಿಗೆಗೆ ಅಡ್ಡಿಯಾಗಿದೆ ಮತ್ತು ನಿರುದ್ಯೋಗದ ಸಮಸ್ಯೆ ಹೆಚ್ಚಾಗುವಂತೆ ಮಾಡಿದೆ.

ಪರಿಹಾರೋಪಾಯಗಳು:

ಭಾರತದಲ್ಲಿ ಕೈಗಾರಿಕಾ ವಲಯದ ಸಮಸ್ಯೆಗಳನ್ನು ಪರಿಹರಿಸಲು ಇರುವ ಪ್ರಮುಖ ಪರಿಹಾರೋಪಾಯಗಳೆಂದರೆ:

i. ಸರ್ಕಾರವು ಸಂವಹನ, ವಿದ್ಯುತ್, ಬಂದರು, ರಸ್ತೆ ಸಂಪರ್ಕ ಮತ್ತು ರೈಲಿನ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದು ಹಣವನ್ನು ಹಂಚಿಕೆ ಮಾಡಿದೆ. ಅಲ್ಲದೆ ಇದು ಖಾಸಗಿ ವಲಯದ ನೆರವಿನೊಂದಿಗೆ ಮೂಲಸೌಕರ್ಯವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುತ್ತಿದೆ. ಇದ್ದರಿಂದಾಗಿ ಹಲವು ವಲಯಗಳ ಸಹಕಾರಕ್ಕೆ ನೆರವಾಗಿದೆ.

ii. ಸರ್ಕಾರವು ಕೈಗಾರಿಕಾ ನೀತಿಯನ್ನು ಉದಾರೀಕರಣಗೊಳಿಸಿದ್ದು, ಹಿಂದುಳಿದ ಪ್ರದೇಶದಲ್ಲಿ ಕೈಗಾರಿಕೆಯನ್ನು ಸ್ಥಾಪಿಸಿದರೆ ಹಲವು ಉತ್ತೇಜನಗಳನ್ನು ನೀಡುತ್ತಿದೆ. ಮತ್ತು ಪರವಾನಿಗೆ ನೀತಿಯನ್ನು ಉದಾರೀಕರಿಸಿದೆ.

iii. ಯೋಜನಾ ಆಯೋಗವು ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೈಗೊಂಡ ಕ್ರಮಗಳೆಂದರೆ: (1) ಹಿಂದುಳಿದ ರಾಜ್ಯಗಳಿಗೆ ಹೆಚ್ಚಿನ ಹಣಕಾಸಿನ ಸಂಪನ್ಮೂಲದ ವರ್ಗಾವಣೆ (2) ಹಿಂದುಳಿದ ದೇಶಗಳಿಗೆ ವಿಶೇಷ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿಗೆ (3) ಹಿಂದುಳಿದ ಪ್ರದೇಶಗಳಲ್ಲಿ ಖಾಸಗಿ ವಲಯಕ್ಕೆ ಉತ್ತೇಜನ ಕೊಡುವುದು.

iv. ಸಾರ್ವಜನಿಕ ಉದ್ಯಮಗಳಿಗೆ ಹಣಕಾಸು ಸ್ವಾಯತ್ತತೆಯನ್ನು ನೀಡಲು ಮಹಾರತ್ನ, ನವರತ್ನ ಮತ್ತು ಮಿನಿರತ್ನಗಳೆಂಬ ಸ್ಥಾನಗಳನ್ನು ಸರ್ಕಾರ ಕೆಲವು ಆಯ್ದು ಉದ್ಯಮಗಳಿಗೆ ನೀಡಿದೆ.

1991 ರ ಹೊಸ ಕೈಗಾರಿಕಾ ನೀತಿಯಲ್ಲಿ ಸಾರ್ವಜನಿಕ ಉದ್ಯಮ ಘಟಕಗಳಿಗೆ ಸಂಬಂಧಿಸಿದಂತೆ ಹಲವು ಸುಧಾರಣೆಗಳನ್ನು ಪರಿಚಯಿಸಿದೆ. ಅವುಗಳಲ್ಲಿ ಪ್ರಮುಖವಾಗಿ:

(ಅ) ಕೈಗಾರಿಕೆಗಳ ಸಂಖ್ಯೆಯನ್ನು ಕಡಿತಗೊಳಿಸಿದೆ ಮತ್ತು ಯೋಗ್ಯ ಪುನಃ ಚೇತನಗೊಳಿಸಬಲ್ಲ ಘಟಕಗಳಿಗೆ ಸಹಾಯ.

(ಆ) ಸಾರ್ವಜನಿಕರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು ಸಾರ್ವಜನಿಕ ಉದ್ಯಮಗಳ ಸರ್ಕಾರಿ ಹೂಡಿಕೆಗಳ ಮೇಲಿನ ಪಾಲನ್ನು ಕಡಿಮೆ ಮಾಡುವುದು.

(ಇ) ಪುನರುಜ್ಜೀವನಗೊಳಿಸಲು ಸಾಧ್ಯವಿಲ್ಲದಂತಹ ಘಟಕಗಳನ್ನುಮುಚ್ಚುವುದು.

(ಈ) ಕಾರ್ಯದಕ್ಷತೆಯನ್ನು ಸುಧಾರಿಸುವ ಮೂಲಕ ಸರ್ಕಾರದ ಹಸ್ತಕ್ಷೇಪವನ್ನು ಕಡಿಮೆ ಮಾಡಿ ಮತ್ತು ಉದ್ಯೋಗಿಗಳ ಉತ್ತರದಾಯಿತ್ವವನ್ನು ಹೆಚ್ಚಿಸುವುದು.

(ಉ) ಸರ್ಕಾರವು ಕೈಗಾರಿಕೆ ಮತ್ತು ಹಣಕಾಸಿನ ಪುನರ್ ನಿರ್ಮಾಣ ಮಂಡಳಿ ಮತ್ತು ಭಾರತೀಯ ಕೈಗಾರಿಕಾ ಪುನಃಚ್ಚೇತನ ಬ್ಯಾಂಕನ್ನು ಸ್ಥಾಪಿಸಿದ್ದು, ಇದು ರೋಗಗ್ರಸ್ಥ ಘಟಕಗಳಿಗೆ ತಾಂತ್ರಿಕ ನೆರವು, ವೃತ್ತಿಪರ ಸಲಹೆ ಮತ್ತು ನಿರ್ವಹಣೆಯನ್ನು ಉತ್ತಮಗೊಳಿಸಲು ನೆರವಾಗುತ್ತಿದೆ.

ತೃತೀಯ ವಲಯ:

ತೀವ್ರ ಮತ್ತು ಸುಸ್ಥಿರ ಆರ್ಥಿಕ ಅಭಿವೃದ್ಧಿಗೆ ವಿವಿಧ ಬಗೆಯ ಸೇವೆಗಳ ಅಗತ್ಯವಿದ್ದು ಇದನ್ನು ತೃತೀಯ ವಲಯವು ಒದಗಿಸುತ್ತಿದೆ. ಇದನ್ನು 'ಸೇವಾ ವಲಯ' ಎಂದು ಕರೆಯುವರು.

ಸೇವಾ ವಲಯದ ಅರ್ಥ:

ಹಲವು ಅಗತ್ಯ ಸೇವೆಗಳನ್ನು ಒದಗಿಸುತ್ತಿರುವ ವಲಯವನ್ನು ತೃತೀಯ ವಲಯ ಎನ್ನುವರು. ಸೇವಾ ವಲಯವು ವ್ಯಾಪಾರ, ರಿಪೇರಿ, ಹೋಟಲ್ ಮತ್ತು ರೆಸ್ಟೋರೆಂಟ್, ಸಾರಿಗೆ, ಉಗ್ರಾಣ, ಸಂಪರ್ಕ, ಪ್ರಸಾರ, ಹಣಕಾಸು, ರಿಯಲ್ ಎಸ್ಟೇಟ್ ಮತ್ತು ವ್ಯಾಪಾರ ಸೇವೆಗಳು, ಸಾರ್ವಜನಿಕ ಆಡಳಿತ, ರಕ್ಷಣೆ ಮತ್ತು ಇತರೆ ಸೇವೆಗಳನ್ನು ಒಳಗೊಳ್ಳುವುದು. ಹಾಗಾಗಿ ಸೇವಾ ವಲಯವು ವಿಸ್ತಾರವಾದ ಸೇವೆಗಳ ರಚನೆಯನ್ನು ಒಳಗೊಂಡಿದ್ದು, ಇದು ಸರಳ ಸೇವೆಗಳಾದ ಕ್ಷೌರಿಕ, ಮರಗೆಲಸ ಮತ್ತು ಕೊಳಾಯಿ ಕೆಲಸದಿಂದ ಉನ್ನತ ಸೇವೆಗಳಾದ ದೂರಸಂಪರ್ಕ, ಉಪಗ್ರಹ ನಕ್ಷೆ ನಿರ್ಮಾಣ ಮತ್ತು ಗಣಕಯಂತ್ರ ತಂತ್ರಾಂಶವನ್ನು ಒಳಗೊಂಡಿದೆ.

MSME ಕಾಯ್ದೆ, 2006 ಸೂಚಿಸುವಂತೆ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಸೇವಾ ಉದ್ದಿಮೆಗಳನ್ನು ಹೂಡಿಕೆಯ ಆಧಾರದಲ್ಲಿ ವ್ಯಾಖ್ಯಾನಿಸಿದೆ.

ಅ. ಅತೀ ಸಣ್ಣ ಉದ್ಯಮಗಳು: ಯಂತ್ರೋಪಕರಣಗಳ ಮೇಲಿನ ಹೂಡಿಕೆಯ ಮಿತಿ ರೂ. 10 ಲಕ್ಷಗಳನ್ನು ಮೀರುವಂತಿಲ್ಲ.

ಆ. ಸಣ್ಣ ಉದ್ಯಮಗಳು: ಯಂತ್ರೋಪಕರಣಗಳ ಮೇಲಿನ ಹೂಡಿಕೆಯ ಮಿತಿಯು ರೂ. 10 ಲಕ್ಷದಿಂದ ರೂ. 2 ಕೋಟಿಗಳವರೆಗೆ.

ಇ. ಮಧ್ಯಮ ಉದ್ಯಮಗಳು: ಯಂತ್ರೋಪಕರಣಗಳ ಮೇಲಿನ ಹೂಡಿಕೆಯ ಮಿತಿಯು ರೂ. 2 ಕೋಟಿಯಿಂದ ರೂ. 5 ಕೋಟಿವರೆಗೆ.

ಆರ್ಥಿಕ ಅಭಿವೃದ್ಧಿಯಲ್ಲಿ ಸೇವಾ ವಲಯದ ಪಾತ್ರ ಮತ್ತು ಮಹತ್ವ:

i. ಭಾರತದ ಒಟ್ಟು ದೇಶೀಯ ಉತ್ಪನ್ನಕ್ಕೆ 2013-14 ರಲ್ಲಿ ಸೇವಾ ವಲಯದ ಕೊಡುಗೆಯು ಶೇ 59.93 ರಷ್ಟಿದ್ದು, ಇದು ಪ್ರಾಥಮಿಕ ಮತ್ತು ದ್ವಿತೀಯ ವಲಯಗಳ ಕೊಡುಗೆಗೆ ಹೋಲಿಸಿದರೆ ಸಾಪೇಕ್ಷವಾಗಿ ದೊಡ್ಡ ಕೊಡುಗೆಯಾಗಿದೆ. ಈ ವಲಯದ ಆದಾಯದ ಬೆಳವಣಿಗೆಯ ದರವು ಅತೀ ಹೆಚ್ಚಿನದಾಗಿದೆ.

ii. ದೇಶದ ಒಟ್ಟು ದುಡಿಯುವ ಜನಸಂಖ್ಯೆಯಲ್ಲಿ ಸುಮಾರು ಶೇ. 25.3 ರಷ್ಟು ಜನರಿಗೆ ಸೇವಾವಲಯವು ಉದ್ಯೋಗಾವಕಾಶ ಒದಗಿಸಿದೆ. ಕೃಷಿ ಮತ್ತು ಕೈಗಾರಿಕಾ ಕಾರ್ಮಿಕರಿಗಿಂತ ಹೆಚ್ಚಿನ ಆದಾಯ ಮತ್ತು ಸೌಲಭ್ಯಗಳನ್ನು ಈ ಕಾರ್ಮಿಕರು ಪಡೆಯುತ್ತಿದ್ದಾರೆ.

iii. ಸೇವಾ ವಲಯವು ಬಡತನ ಮತ್ತು ನಿರುದ್ಯೋಗದ ನಿವಾರಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.

iv. ಸೇವಾ ವಲಯವು ರಫ್ತಿನಲ್ಲೂ ಉತ್ತಮ ಕೊಡುಗೆಯನ್ನು ನೀಡುತ್ತಿದೆ. ತಂತ್ರಾಂಶದ ವಸ್ತುಗಳು, ವೈಯಕ್ತಿಕ ಸೇವೆ, ಪ್ರವಾಸೋದ್ಯಮ ಭಾರತದ ವ್ಯಾಪಾರದಲ್ಲಿ ಪ್ರಧಾನ ಪಾತ್ರ ಪಡೆದಿದೆ ಹಾಗೂ ದೇಶಕ್ಕೆ ವಿದೇಶಿ ವಿನಿಮಯವನ್ನು ಗಳಿಸಿಕೊಡುತ್ತಿವೆ.

v. ಪ್ರಪಂಚದ ವಿವಿಧ ದೇಶಗಳಿಗೆ ಭಾರತದ ಸೇವಾ ವಲಯವು ಹೂಡಿಕೆಯ ನೆಚ್ಚಿನ ತಾಣವಾಗಿದೆ. 2014-15 ರಲ್ಲಿ ಭಾರತವು ಒಟ್ಟು 16.4 ಬಿಲಿಯನ್ ಯು. ಎಸ್. ಡಾಲರ್ ನಷ್ಟು ವಿದೇಶಿ ನೇರ ಬಂಡವಾಳ ಆಕರ್ಷಿಸಿತ್ತು, ಅದರಲ್ಲಿ ಶೇ. 53 ರಷ್ಟನ್ನು ಸೇವಾ ವಲಯವು ಆಕರ್ಷಿಸಿದೆ. ಮಾಹಿತಿ, ತಂತ್ರಜ್ಞಾನ, ಬ್ಯಾಂಕಿಂಗ್, ವಿಮೆ, ಪ್ರವಾಸ, ಮತ್ತು ದೂರ ಸಂಪರ್ಕ ಕ್ಷೇತ್ರಗಳು ವಿದೇಶಿ ಹೂಡಿಕೆದಾರರ ನೆಚ್ಚಿನ ವಲಯವಾಗಿದೆ.

vi. ತೃತೀಯ ವಲಯವು ಸದಾ ಬದಲಾವಣೆ ಮತ್ತು ಹೆಚ್ಚಿನ ಪೈಪೋಟಿ ಇರುವ ವಲಯವಾಗಿದೆ. ಹಾಗಾಗಿ ಉತ್ಪಾದಕತೆ ಮತ್ತು ಲಾಭವನ್ನು ಕಾಯ್ದುಕೊಳ್ಳಲು ಉದ್ಯಮಗಳು ಸಂಶೋಧನೆಗೆ ಮತ್ತು ಆವಿಷ್ಕಾರಕರಕ್ಕೆ ಮಹತ್ವ ನೀಡುತ್ತಿವೆ.

ಭಾರತದಲ್ಲಿ ಸೇವಾ ವಲಯದ ಸಮಸ್ಯೆಗಳು:

ಸೇವಾ ವಲಯವು ಕೆಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇವುಗಳಲ್ಲಿ ಕೆಲವು ದೀರ್ಘಕಾಲದಿಂದ ಇದ್ದರೆ ಮತ್ತೆ ಕೆಲವು ಇತ್ತೀಚೆಗೆ ಉದಯಿಸಿವೆ. ಭಾರತದ ಸೇವಾ ವಲಯದ ಪ್ರಮುಖ ಸಮಸ್ಯೆಗಳೆಂದರೆ.

i. ಉತ್ತಮವಲ್ಲದ ಮೂಲಭೂತ ಸೌಕರ್ಯವು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಸೇವಾ ವಲಯದ ಅಭಿವೃದ್ಧಿಗೆ ತೊಡಕಾಗಿದೆ. ಉದಾಹರಣೆಗೆ ವಿದ್ಯುತ್ ಕೊರತೆ, ಕಳಪೆ ಗುಣಮಟ್ಟದ ರಸ್ತೆ, ಟ್ರಾಫಿಕ್ ಸಮಸ್ಯೆ, ದುರ್ಬಲ ದೂರಸಂಪರ್ಕ ವ್ಯವಸ್ಥೆ ಇತ್ಯಾದಿ.

ii. ಭಾರತವು ಪ್ರವಾಸೋದ್ಯಮದಲ್ಲಿ ಹೆಚ್ಚಿನ ಸಾಮರ್ಥವನ್ನು ಹೊಂದಿದೆ. ಆದರೆ ಪ್ರವಾಸಿ ತಾಣಗಳಲ್ಲಿ ಸೌಲಭ್ಯಗಳ ಅಲಭ್ಯತೆ ಹಾಗೂ ಕಳಪೆ ನಿರ್ವಹಣೆಯಿಂದಾಗಿ ಪ್ರವಾಸೋದ್ಯಮದ ಬೆಳವಣಿಗೆ ಕುಂಠಿತಗೊಂಡಿದೆ.

iii. ವ್ಯವಹಾರ ಪ್ರಕ್ರಿಯೆ ಹೊರಗುತ್ತಿಗೆ (BPO) ಮತ್ತು ಮಾಹಿತಿ ತಂತ್ರಜ್ಞಾನ (IT) ಸೇವಾವಲಯದಲ್ಲಿ ಫಿಲಿಫೈನ್ಸ್, ರೊಮಾನಿಯಾ ಹಾಗೂ ಇತರೆ ಕಡಿಮೆ ವೆಚ್ಚದ ದೇಶಗಳಿಂದ ತೀವ್ರ ಪೈಪೋಟಿ ಇರುವುದರಿಂದ ಭಾರತದ ಭವಿಷ್ಯದ ರಫ್ತು ಗಳಿಕೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

iv. ಕುಶಲ ಕಾರ್ಮಿಕರ ಕೊರತೆಯಿಂದಾಗಿ ಈ ವಲಯದ ಬೆಳವಣಿಗೆ ಮತ್ತು ದಕ್ಷತೆಯ ಮೇಲೆ ಪರಿಣಾಮ ಬೀರುತ್ತಿದೆ.

ಪರಿಹಾರೋಪಾಯಗಳು

ಭಾರತದ ಸೇವಾ ವಲಯದ ಸಮಸ್ಯೆಗಳ ಪರಿಹಾರೋಪಾಯಗಳೆಂದರೆ:

1. ಇತ್ತೀಚೆಗೆ ಭಾರತ ಸರ್ಕಾರವು ಸಾರಿಗೆ, ಸಂಪರ್ಕ, ಬ್ಯಾಂಕಿಂಗ್, ಮತ್ತು ವಿಮಾ ಕ್ಷೇತ್ರಗಳ ಅಭಿವೃದ್ಧಿಯಲ್ಲಿ ಖಾಸಗಿ ಸಹಭಾಗಿತ್ವಕ್ಕೆ ಅವಕಾಶ ನೀಡಿ ಕ್ರಮ ಕೈಗೊಂಡಿದೆ. ಇದು ಸೇವಾ ವಲಯದ ಬೆಳವಣಿಗೆಯನ್ನು ತೀವ್ರಗೊಳಿಸಿದೆ.

2. ಬೆಳೆಯುತ್ತಿರುವ ಸೇವಾ ವಲಯಕ್ಕೆ ಅಗತ್ಯ ನುರಿತ ಕುಶಲ ಕಾರ್ಮಿಕರನ್ನು ಒದಗಿಸಲು ಉನ್ನತ ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಯತ್ನಗಳು ಪ್ರಾರಂಭವಾಗಿವೆ.

3. ಪ್ರವಾಸೋದ್ಯಮದ ಅಭಿವೃದ್ಧಿಗೆ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ. ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು 'ರಾಷ್ಟ್ರೀಯ ಪ್ರವಾಸೋದ್ಯಮ ನೀತಿ'ಯನ್ನು ರೂಪಿಸಿದೆ. ಈ ನೀತಿಯು ಪ್ರವಾಸೋದ್ಯಮದ ಅಭಿವೃದ್ಧಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಖಾಸಗಿ ವಲಯಗಳ ಪಾತ್ರವನ್ನು ಗುರ್ತಿಸಿದೆ. ಅಲ್ಲದೆ ಪ್ರವಾಸೋದ್ಯಮದ ಸ್ಥಳಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಪಂಚಾಯತ್ ರಾಜ್ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಸ್ಥಳೀಯ ಯುವಕರನ್ನು ತೊಡಗಿಸಿಕೊಳ್ಳುವಿಕೆಯನ್ನು ಗುರುತಿಸಿದೆ.

4. ಭಾರತ ಸರ್ಕಾರವು ಬಿ. ಪಿ. ಒ. ಗಳ ಮಹತ್ವವನ್ನು ಗುರುತಿಸಿದ್ದು, ಮಾಹಿತಿ ತಂತ್ರಜ್ಞಾನ (ಐಟಿ) ಪ್ರೇರಿತ ಹೊರಗುತ್ತಿಗೆ ಮಾರುಕಟ್ಟೆಯ ಬೆಳವಣಿಗೆಗಾಗಿ ಹಲವು ರಿಯಾಯಿತಿ ಮತ್ತು ಉತ್ತೇಜನವನ್ನು ನೀಡಲು ಆರಂಭಿಸಿದೆ. ಐ. ಟಿ. ಪಾರ್ಕ್‌ಗಳ ನಿರ್ಮಾಣ ಈ ನಿಟ್ಟಿನಲ್ಲಿ ಗಮನಾರ್ಹವಾದ ಕ್ರಮವಾಗಿದೆ. ಸರ್ಕಾರವು ನಾಸ್ಕಾಂ (NASSCOM) ನ ಶಿಫಾರಸ್ಸುಗಳನ್ನು ಒಪ್ಪಿಕೊಂಡು ಭಾರತೀಯ ಕಾಲ್ ಸೆಂಟರ್ ಉದ್ಯಮದ ಬೆಳವಣಿಗೆಗೆ ಅಡ್ಡಿಪಡಿಸುವ ಕೆಲವು ಕಾರ್ಯವಿಧಾನದ ಪ್ರತಿಬಂಧಕಗಳನ್ನು ತೆಗೆದುಹಾಕಿದೆ. ಭಾರತ ಸರ್ಕಾರವು ಐ. ಟಿ. ಯ ರಫ್ತನ್ನು ಮಾಡುವ ಹೊರಗುತ್ತಿಗೆ ಸೇವೆಗಳಿಗೆ ಸಂಪೂರ್ಣ ಆದಾಯ ತೆರಿಗೆ ವಿನಾಯಿತಿ ನೀಡಿದೆ. ಅಲ್ಲದೆ ಉತ್ತಮ ದೂರ ಸಂಪರ್ಕ ಸೌಲಭ್ಯ, ಉದ್ಯೋಗಗಳಿಗೆ ಅಗತ್ಯ ಕುಶಲತೆಯ ತರಬೇತಿ, ನೂತನ ಸೇವಾ ಮಾರ್ಗಗಳ ನಿರ್ಮಾಣ, ನಿರ್ವಹಣಾ ಕಾರ್ಯವಿಧಾನದಲ್ಲಿ ಸುಧಾರಣೆಗೆ ಕ್ರಮ ಕೈಗೊಂಡಿದೆ. ಸರ್ಕಾರವು ಆರ್ಥಿಕತೆಯ ಸೇವಾ ಆಧಾರಿತ ಬೆಳವಣಿಗೆಗೆ ಹೆಚ್ಚು ಒತ್ತು ನೀಡಿದ್ದು ಇದು ಪರಸ್ಪರಾವಲಂಬನೆ ಮೂಲಕ ಎಲ್ಲಾ ವಲಯದ ಬೆಳವಣಿಗೆಗೆ ನೆರವಾಗುವುದು.

ಅಭ್ಯಾಸ

I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಭಾರತದ ಒಟ್ಟು ಆಹಾರ ಉತ್ಪಾದನೆಯು 2015-16 ರಲ್ಲಿ _______ ಮಿಲಿಯನ್ ಟನ್‌ಗಳಾಗಿದೆ.

   ಅ. 150
   ಆ. 230.2
   ಇ. 250.2
   ಈ. 253.2

2. ಬ್ಯಾಂಕಿನ ಸಾಲಗಳು _______ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಂತಹ ವಿಶೇಷ ಬ್ಯಾಂಕುಗಳ ಮೂಲಕ ಅಗತ್ಯ ರೈತರಿಗೆ ದೊರೆಯುತ್ತಿದೆ.

   ಅ. ಎಸ್. ಬಿ. ಐ.
   ಆ. ಐ. ಬಿ. ಅರ್. ಡಿ.
   ಇ. ನಬಾರ್ಡ್
   ಈ. ಮೇಲಿನ ಯಾವುದೂ ಅಲ್ಲ

3. ಕೈಗಾರಿಕೆಗಳನ್ನು ಬಂಡವಾಳ ಹೂಡಿಕೆ ಮತ್ತು _______ ಗಳ ಆಧಾರದಲ್ಲಿ ವರ್ಗೀಕರಿಸಲಾಗಿದೆ.

   ಅ. ಮಾಲೀಕತ್ವ
   ಆ. ಉದ್ಯೋಗಿಗಳು
   ಇ. ಸ್ಥಳ
   ಈ. ಮೇಲಿನ ಯಾವುದೂ ಅಲ್ಲ

4. ಯಂತ್ರೋಪಕರಣದ ಮೇಲಿನ ಹೂಡಿಕೆಯ ಮಿತಿಯು ಅತೀ ಸಣ್ಣ ಸೇವಾ ಉದ್ಯಮಗಳಲ್ಲಿ _______ ರಷ್ಟು ಮೀರುವಂತಿಲ್ಲ.

   ಅ. ರೂ. 10 ಲಕ್ಷ
   ಆ. ರೂ. 20 ಲಕ್ಷ
   ಇ. ರೂ. 30 ಲಕ್ಷ
   ಈ. ರೂ. 40 ಲಕ್ಷ

5. ಸೇವಾ ವಲಯವು ರಾಷ್ಟ್ರೀಯ ಆದಾಯಕ್ಕೆ ಸುಮಾರು _______ ಪಾಲು ಕೊಡುಗೆಯನ್ನು ನೀಡುತ್ತಿದೆ.

   ಅ. 60%
   ಆ.50%
   ಇ. 45%
   ಈ. 20%

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಕೃಷಿ ಎಂದರೆ ಉಳುಮೆ ಮಾಡುವ ಅಭ್ಯಾಸ, ಬೆಳೆಗಳನ್ನು ಉತ್ಪಾದಿಸುವುದು ಮತ್ತು _______ ಆಗಿದೆ.
2. ಕೃಷಿ ಒಂದು _______ ಆಧಾರಿತವಾದ ವೃತ್ತಿಯಾಗಿದೆ.
3. ಬಂಡವಾಳ ಹೂಡಿಕೆಯ ಆಧಾರದ ಮೇಲೆ ಕೈಗಾರಿಕೆಗಳನ್ನು ಮುಖ್ಯವಾಗಿ ______ ಗುಂಪುಗಳಾಗಿ ವರ್ಗೀಕರಿಸಬಹುದು.
4. ಸೇವಾ ವಲಯದಲ್ಲಿ ಮಧ್ಯಮ ಉದ್ಯಮಗಳಲ್ಲಿ ಯಂತ್ರೋಪಕರಣಗಳ ಮೇಲೆ ಹೂಡುವ ಬಂಡವಾಳದ ಮಿತಿಯು ರೂ. 2 ಕೋಟಿಯಿಂದ _______ ವರೆಗೆ ಮೀರುವಂತಿಲ್ಲ.

5. ವಿವಿಧ ಅಗತ್ಯ ಸೇವೆಗಳನ್ನು ಒದಗಿಸುವ ವಲಯವನ್ನು ________ ಎಂದು ಕರೆಯಲಾಗುತ್ತದೆ.

III. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಆರ್ಥಿಕತೆಯ ಮೂರು ವಲಯಗಳನ್ನು ಹೆಸರಿಸಿ.
2. ಪ್ರಾಥಮಿಕ ವಲಯ ಎಂದರೇನು?
3. ದ್ವಿತೀಯ ವಲಯ ಎಂದರೇನು?
4. ತೃತೀಯ ವಲಯ ಎಂದರೇನು?
5. ಖಾಸಗಿ ಉದ್ಯಮ ಎಂದರೇನು?

IV. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಪ್ರಾಥಮಿಕ ವಲಯದಲ್ಲಿ ಬರುವ ಚಟುವಟಿಕೆಗಳನ್ನು ಪಟ್ಟಿ ಮಾಡಿರಿ.
2. ಕೃಷಿಯಲ್ಲಿ ಉತ್ಪಾದನೆಯಾದ ಬೇಳೆಕಾಳುಗಳು ಮತ್ತು ಧಾನ್ಯಗಳನ್ನು ಪಟ್ಟಿಮಾಡಿರಿ.
3. ಕೈಗಾರಿಕೆ ಎಂದರೇನು?
4. ಸೇವಾ ವಲಯವು ಒದಗಿಸುತ್ತಿರುವ ಕೆಲವು ಸೇವೆಗಳನ್ನು ಪಟ್ಟಿಮಾಡಿರಿ.
5. MSME ಕಾಯಿದೆ-2006 ಎಂದರೇನು?

V. ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯದಲ್ಲಿ ಉತ್ತರಿಸಿ.

1. ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಾಥಮಿಕ ವಲಯದ ಪಾತ್ರ ಮತ್ತು ಕೊಡುಗೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.
2. ಭಾರತದ ಕೃಷಿವಲಯದ ನಾಲ್ಕು ಸಮಸ್ಯೆಗಳನ್ನು ಚರ್ಚಿಸಿರಿ.
3. ದ್ವಿತೀಯ ವಲಯದ ಹಲವು ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
4. ಸಾರ್ವಜನಿಕ ವಲಯದ ಘಟಕಗಳ ಬಗ್ಗೆ ಟಿಪ್ಪಣಿ ಬರೆಯಿರಿ.
5 ಆರ್ಥಿಕ ಅಭಿವೃದ್ಧಿಯಲ್ಲಿ ಸೇವಾವಲಯದ ಪಾತ್ರ ಮತ್ತು ಕೊಡುಗೆಯ ಮೇಲೆ ಟಿಪ್ಪಣಿ ಬರೆಯಿರಿ.

ಯೋಜನಾ ಕಾರ್ಯ:

1. ನಿಮ್ಮ ಹಳ್ಳಿ/ ಜಿಲ್ಲೆಯಲ್ಲಿರುವ ವಿವಿಧ ಕೃಷಿ ಉತ್ಪನ್ನಗಳನ್ನು ಪಟ್ಟಿ ಮಾಡಿರಿ.
2. ಭಾರತದ ಸಾರ್ವಜನಿಕ ಉದ್ಯಮ ಘಟಕಗಳನ್ನು ಪಟ್ಟಿಮಾಡಿರಿ.
3. ಕೊಳಾಯಿ ಕೆಲಸಗಾರ, ಕ್ಷೌರಿಕ ಮತ್ತು ವೈದ್ಯರು ನೀಡುವ ವಿವಿಧ ಸೇವೆಗಳನ್ನು ಪಟ್ಟಿಮಾಡಿರಿ.

ಅಧ್ಯಾಯ–5 ಅನುಭೋಗ

‘‘ಎಲ್ಲಾ ಉತ್ಪಾದನೆಯ ಏಕೈಕ ಅಂತಿಮ ಉದ್ದೇಶವು ಅನುಭೋಗವಾಗಿದೆ. ಇಲ್ಲಿ ಉತ್ಪಾದಕನ ಹಿತಾಸಕ್ತಿಗಳನ್ನು ಕಾಪಾಡುವುದು ಎಂದರೆ ಅದು ಅಗತ್ಯವಾಗಿ ಅನುಭೋಗಿಯನ್ನು ಉತ್ತೇಜಿಸುವುದೇ ಆಗಿದೆ.’’ ಆಡಂಸ್ಮಿತ್

ಪೀಠಿಕೆ:

ಪ್ರಾಥಮಿಕ ವಲಯವು ಆಹಾರ ಧಾನ್ಯಗಳನ್ನು ಒದಗಿಸುತ್ತದೆ. ದ್ವಿತೀಯ ವಲಯವು ಪುಸ್ತಕ, ಪೆನ್ನು, ಗಣಕಯಂತ್ರ, ಟಿವಿ, ಪೀಠೋಪಕರಣಗಳು ಇತ್ಯಾದಿ ದಿನಬಳಕೆಯ ವಸ್ತುಗಳನ್ನು ಉತ್ಪಾದಿಸುತ್ತದೆ. ತೃತೀಯ ವಲಯವು ನಮಗೆ ಅಗತ್ಯ ಸೇವೆಗಳಾದ ಆರೋಗ್ಯ, ಶಿಕ್ಷಣ, ಬ್ಯಾಂಕಿಂಗ್, ಹೋಟೆಲ್ ಸೇವೆ, ದೂರಸಂಪರ್ಕ ಮುಂತಾದ ಸೇವೆಗಳನ್ನು ಒದಗಿಸುತ್ತವೆ. ಈ ಎಲ್ಲಾ ಸರಕು ಸೇವೆಗಳು ಉತ್ತಮ ಜೀವನಮಟ್ಟವನ್ನು ಕಾಯ್ದುಕೊಳ್ಳಲು ಅನುಕೂಲ ಮಾಡುವುದರ ಜೊತೆಗೆ ಮಾನವನ ಬಯಕೆಗಳನ್ನು ಈಡೇರಿಸಲು ಸಹಕಾರಿಯಾಗುತ್ತವೆ. ಹಾಗಾದರೆ, ಬಯಕೆಗಳೆಂದರೇನು? ಬಯಕೆಗಳ ಲಕ್ಷಣಗಳಾವುವು? ಬಯಕೆಗಳ ವಿಧಗಳಾವುವು? ಅನುಭೋಗ ಎಂದರೇನು? ಅನುಭೋಗದ ವಿಧಗಳಾವುವು? ಈ ಅಧ್ಯಾಯವು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವ ಜೊತೆಗೆ ಬಯಕೆ ಹಾಗೂ ಅನುಭೋಗದ ವಿವಿಧ ಪರಿಕಲ್ಪನೆಗಳನ್ನು ಪರಿಚಯಿಸುತ್ತದೆ.

ಬಯಕೆಯ ಅರ್ಥ:

ಸಾಮಾನ್ಯವಾಗಿ ‘ಬಯಕೆ’ ಎಂದರೆ ಆಸೆ ಎಂದರ್ಥ. ಅವು ವ್ಯಕ್ತಿಯ ಹುಟ್ಟಿನಿಂದ ಪ್ರಾರಂಭಿಸಿ ಸಾವಿನವರೆಗೂ ಜೊತೆಯಲ್ಲಿರುತ್ತವೆ. ವ್ಯಕ್ತಿಯ ಜೀವಿತಾವಧಿಯಲ್ಲಿ ಒಂದು ಬಯಕೆಯು ಈಡೇರಿದರೆ ಮತ್ತೊಂದು ಬಯಕೆಯು ಹುಟ್ಟುವುದು ಮತ್ತು ಇದು ಹೀಗೆಯೇ ಮುಂದುವರೆಯುವುದು. ಆದುದರಿಂದ ಮಾನವನ ಬಯಕೆಗಳಿಗೆ ಕೊನೆಯಿಲ್ಲ ಮತ್ತು ಅವು ಅಪರಿಮಿತ ಎಂದು ಹೇಳಬಹುದು. ನೀವು ಮೊದಲ ಅಧ್ಯಾಯದಲ್ಲಿ ತಿಳಿದುಕೊಂಡಂತೆ ಬಯಕೆಗಳನ್ನು ಈಡೇರಿಸಲು ಇರುವ ಸಂಪನ್ಮೂಲಗಳು ಮಿತವಾಗಿರುವುದರಿಂದ, ಕೊರತೆಯ ಸಮಸ್ಯೆಯನ್ನು ಉಂಟುಮಾಡುತ್ತದೆ. ಹಾಗಾಗಿ ಆಯ್ಕೆಯ ಸಮಸ್ಯೆಯು ಉದ್ಭವಿಸುತ್ತದೆ. ಇದು ಅರ್ಥಶಾಸ್ತ್ರದ ಅಧ್ಯಯನದ ಕೇಂದ್ರ ಬಿಂದುವಾಗಿದೆ. ಪ್ರೊ. ಸೆಲಿಂಗ್ ಮನ್‌ರವರ ಪ್ರಕಾರ: “ಮಾನವನ ಬಯಕೆಯು ಎಲ್ಲಾ ಆರ್ಥಿಕ ಚಟುವಟಿಕೆಗಳ ಕೇಂದ್ರವಾಗಿದೆ. ಇದರ ಅರ್ಥ ಮಾನವನ ಅಸಂಖ್ಯಾತ ಬಯಕೆಗಳು ಆರ್ಥಿಕ ಚಟುವಟಿಕೆಗಳಾದ ಅನುಭೋಗ, ಉತ್ಪಾದನೆ, ವಿತರಣೆ ಮತ್ತು ವಿನಿಮಯದ ಮೂಲಗಳಾಗಿವೆ.”

ಮಾನವನ ಬಯಕೆಗಳ ಲಕ್ಷಣಗಳು:

ಮಾನವನ ಬಯಕೆಗಳು ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿವೆ. ಅವುಗಳಲ್ಲಿ ಪ್ರಮುಖವಾದವು ಈ ಕೆಳಕಂಡಂತಿದೆ.

1. ಬಯಕೆಗಳು ಕೊನೆಗೊಳ್ಳುವುದಿಲ್ಲ: ಪ್ರಕೃತಿಯಲ್ಲಿ ಮಾನವನ ಬಯಕೆಗಳು ಅಪರಿಮಿತ. ಒಂದು ಬಯಕೆ ಈಡೇರಿದರೆ ಮತ್ತೊಂದು ಬಯಕೆ ಹುಟ್ಟಿಕೊಳ್ಳುತ್ತದೆ. ಬಯಕೆಗಳು ಮಾನವನ ಹುಟ್ಟಿನಿಂದ ಪ್ರಾರಂಭವಾಗುತ್ತವೆ ಮತ್ತು ಅವನ ಸಾವಿನ ಜೊತೆಗೆ ಬಯಕೆಗಳು ಕೊನೆಗೊಳ್ಳುತ್ತವೆ.

2. ಒಮ್ಮೆಗೆ ಒಂದು ಬಯಕೆಯ ತೃಪ್ತಿ ಸಾಧ್ಯ: ಜನರು ಅಸಂಖ್ಯಾತ ಬಯಕೆಗಳನ್ನು ಹೊಂದಿದ್ದರೂ, ಒಮ್ಮೆಗೆ ಒಂದು ಬಯಕೆಯ ತೃಪ್ತಿ ಸುಲಭ ಸಾಧ್ಯವಾದುದು. ಆಹಾರ ಸೇವಿಸುವುದು ಹಾಗೂ ನಿದ್ರೆ ಮಾಡುವ ಬಯಕೆಗಳನ್ನು ಒಮ್ಮೆಗೆ ತೃಪ್ತಿಪಡಿಸಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿ ಒಂದು ಸಮಯದಲ್ಲಿ ಆಹಾರ ಸೇವಿಸಬಲ್ಲ ಅಥವಾ ನಿದ್ರಿಸಬಲ್ಲ. ಆದ್ದರಿಂದ ಒಮ್ಮೆಗೆ ಒಂದು ಬಯಕೆ ಮಾತ್ರ ತೃಪ್ತಿಪಡಿಸಲು ಸಾಧ್ಯ.

3. ಬಯಕೆಗಳು ಪುನರಾವರ್ತನೆಗೊಳ್ಳುತ್ತವೆ: ಮಾನವನ ಕೆಲವು ಬಯಕೆಗಳು ಪುನರಾವರ್ತಿತವಾದವು. ಬೆಳಿಗ್ಗೆ ಆಹಾರ ಸೇವಿಸಿದ್ದರೂ ಸಹ ಮತ್ತೆ ಮಧ್ಯಾಹ್ನದ ಹಸಿವು ಪುನರಾವರ್ತಿತಗೊಳ್ಳುತ್ತದೆ. ಸಾಮಾನ್ಯವಾಗಿ ಮಾನವನ ಅಗತ್ಯಗಳಾದ ಆಹಾರ, ಬಟ್ಟೆ ಮೊದಲಾದವುಗಳು ಪುನರಾವರ್ತನೆಗೊಳ್ಳುತ್ತವೆ.

4. ಬಯಕೆಗಳು ಸಾಪೇಕ್ಷವಾದವು: ಮೂಲಭೂತ ಬಯಕೆಗಳನ್ನು ಹೊರತುಪಡಿಸಿ ಇತರೆ ಬಯಕೆಗಳು ವ್ಯಕ್ತಿಯಿಂದ ವ್ಯಕ್ತಿಗೆ, ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತವೆ. ಕೆಲವರು ಮರದ ಪೀಠೋಪಕರಣಗಳನ್ನು ಹೊಂದಲು ಬಯಸಿದರೆ, ಇನ್ನು ಕೆಲವರು ಚರ್ಮದ ಪೀಠೋಪಕರಣಗಳನ್ನು ಹೊಂದಲು ಬಯಸುವರು. ಶೀತಲವಲಯದಲ್ಲಿರುವವರು ಉಣ್ಣೆಯ ಬಟ್ಟೆಗಳನ್ನು ಬಳಸಿದರೆ, ಉಷ್ಣ ಪ್ರದೇಶದಲ್ಲಿನ ಜನರು ಹತ್ತಿಯ ಬಟ್ಟೆಗಳನ್ನು ಬಳಸುತ್ತಾರೆ.

5. ಬಯಕೆಗಳು ಸ್ಪರ್ಧಾತ್ಮಕವಾದವು: ಮಾನವನ ಅಪರಿಮಿತ ಬಯಕೆಗಳನ್ನು ಈಡೇರಿಸಲು ಸಂಪನ್ಮೂಲಗಳು ಮಿತವಾಗಿರುವುದರಿಂದ ಎಲ್ಲಾ ಬಯಕೆಗಳನ್ನು ತೃಪ್ತಿಪಡಿಸಲು ಸಾಧ್ಯವಿಲ್ಲ. ಆದ್ದರಿಂದ, ಬಯಕೆಗಳನ್ನು ಈಡೇರಿಸುವಲ್ಲಿ ಸ್ಪರ್ಧೆ ಉಂಟಾಗುತ್ತದೆ. ಹೀಗಾಗಿ ಒಬ್ಬ ವ್ಯಕ್ತಿ ತನ್ನ ಬಯಕೆಗಳಲ್ಲಿ ಅತ್ಯಂತ ಪ್ರಮುಖವಾದ ಬಯಕೆಯನ್ನು ಮೊದಲು ಈಡೇರಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ವಿದ್ಯಾರ್ಥಿಯೊಬ್ಬನಲ್ಲಿ ಖರ್ಚು ಮಾಡಲು 10 ರೂಪಾಯಿ ಇದ್ದು, ತನ್ನಲ್ಲಿರುವ ಹಣದಲ್ಲಿ ಒಂದು ಪೆನ್ನು ಅಥವಾ ಐಸ್‌ಕ್ರೀಂನ್ನು ಕೊಂಡುಕೊಳ್ಳಬೇಕಾದಲ್ಲಿ ಮತ್ತು ಎರಡು ವಸ್ತುಗಳಲ್ಲಿ, ಪ್ರತಿ ವಸ್ತುವು 10 ರೂಪಾಯಿ ಆಗಿದ್ದಲ್ಲಿ, ಆ ವಿದ್ಯಾರ್ಥಿ ತನಗೆ ಪ್ರಮುಖವಾಗಿರುವ ವಸ್ತುವನ್ನು ಆಯ್ಕೆಮಾಡಿಕೊಳ್ಳಬೇಕಾಗುತ್ತದೆ.

6. ಬಯಕೆಗಳು ಪೂರಕವಾದವು: ಕೆಲವು ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಒಂದಕ್ಕಿಂತ ಹೆಚ್ಚು ಸರಕುಗಳನ್ನು ಒಟ್ಟಿಗೆ ಬಳಸಿಕೊಳ್ಳಬೇಕಾಗುತ್ತದೆ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಸರಕುಗಳನ್ನು ಬಳಸಿ ಬಯಕೆಗಳನ್ನು ಈಡೇರಿಸಿಕೊಂಡಾಗ ಬಯಕೆಗಳು ಪೂರಕವಾದವು ಎನ್ನಲಾಗುತ್ತದೆ. ಉದಾಹರಣೆಗೆ ಒಬ್ಬ ವ್ಯಕ್ತಿಯ ವಾಹನವನ್ನು ಕೊಳ್ಳುವ ಬಯಕೆಯು

ಪೆಟ್ರೋಲ್ ಅಥವಾ ಡೀಸೆಲ್ ಕೊಂಡುಕೊಳ್ಳುವ ಬಯಕೆಯೊಂದಿಗೆ ಪೂರಕವಾಗಿರುತ್ತದೆ.

7. ಬಯಕೆಗಳು ಹವ್ಯಾಸವಾಗುತ್ತವೆ: ನಿರಂತರವಾಗಿ ಈಡೇರಿಸಿಕೊಳ್ಳುವ ಬಯಕೆಗಳು ಹವ್ಯಾಸಗಳಾಗಿ ಬದಲಾಗುತ್ತವೆ. ಒಬ್ಬ ವ್ಯಕ್ತಿಯು ನಿರಂತರವಾಗಿ ರೇಖಾಚಿತ್ರ ಬಿಡಿಸುವ ಅಥವಾ ಕಲಾತ್ಮಕ ಚಿತ್ರ ರಚಿಸುವ ಬಯಕೆ ಕ್ರಮೇಣ ಹವ್ಯಾಸವಾಗಿ ಬದಲಾಗುತ್ತದೆ.

8. ಬಯಕೆಗಳನ್ನು ಪರ್ಯಾಯ ಮಾರ್ಗದಲ್ಲೂ ಈಡೇರಿಸಿಕೊಳ್ಳಬಹುದು: ಒಂದು ಬಯಕೆಯನ್ನು ಪರ್ಯಾಯ ವಿಧದಲ್ಲೂ ಈಡೇರಿಸಿಕೊಳ್ಳಬಹುದಾಗಿದೆ. ಉದಾಹರಣೆಗೆ ದೂರದ ಊರಿಗೆ ಪ್ರಯಾಣಿಸಲು ಒಬ್ಬ ವ್ಯಕ್ತಿ ಸಾರ್ವಜನಿಕ ಸಾರಿಗೆಯಾದ ರೈಲನ್ನು ಬಳಸಬಹುದು ಅಥವಾ ಪರ್ಯಾಯವಾಗಿ ಖಾಸಗಿ ಕಾರನ್ನು ಬಳಸಬಹುದು.

9. ಬಯಕೆಗಳ ತೀವ್ರತೆ ಭಿನ್ನವಾಗಿರುತ್ತದೆ: ಎಲ್ಲಾ ಬಯಕೆಗಳು ಸಮಾನವಾದ ಪ್ರಾಮುಖ್ಯತೆಯನ್ನು ಹೊಂದಿರುವುದಿಲ್ಲ. ಕೆಲವು ಬಯಕೆಗಳು ಅತ್ಯಂತ ಪ್ರಮುಖವಾದರೆ, ಕೆಲವು ಹೆಚ್ಚು ಪ್ರಮುಖವಾದುದಲ್ಲ. ಹಾಗಾಗಿ ಪ್ರತಿಯೊಂದು ಬಯಕೆಯು ತನ್ನದೇ ಆದ ತೀವ್ರತೆಯನ್ನು ಹೊಂದಿರುತ್ತದೆ. ಮೂಲಭೂತ ಅಗತ್ಯತೆಗಳಾದ ಆಹಾರ, ನೀರು, ಬಟ್ಟೆ, ವಸತಿಗಳ ಬಯಕೆ ಹೆಚ್ಚು ತೀವ್ರತೆಯನ್ನು ಹೊಂದಿರುತ್ತದೆ. ಐಷರಾಮಿ ಬಯಕೆಗಳಾದ ಒಡವೆ, ವಾಹನ, ಮುಂತಾದವು ಕಡಿಮೆ ತೀವ್ರತೆ ಪಡೆದಿರುತ್ತವೆ.

10. ಬಯಕೆಗಳು ಆದಾಯದಿಂದ ನಿರ್ಧರಿಸಲ್ಪಡುತ್ತದೆ: ಮಾನವನ ಬಯಕೆಗಳ ಸ್ವಭಾವ ವ್ಯಕ್ತಿಗಳ ಆದಾಯದಿಂದ ನಿರ್ಧರಿಸಲ್ಪಡುತ್ತದೆ. ಸಾಮಾನ್ಯವಾಗಿ, ಶ್ರೀಮಂತರಿಗೆ ಐಷರಾಮಿ ಬಯಕೆಗಳಿದ್ದರೆ, ಬಡವರಿಗೆ ಮೂಲಭೂತ ಅಗತ್ಯತೆಗಳ ಬಯಕೆ ಇರುತ್ತದೆ. ಉದಾಹರಣೆಗೆ ಶ್ರೀಮಂತರು ಬೃಹತ್ ಐಷರಾಮಿ ಬಂಗಲೆಗಳಲ್ಲಿ ವಾಸಿಸಲು ಬಯಸಿದರೆ, ಬಡವರಾದವರು ಸಣ್ಣ ಗುಡಿಸಲುಗಳಲ್ಲಿ ವಾಸಿಸಲು ಬಯಸುತ್ತಾರೆ.

11. ಬಯಕೆಗಳು ಜಾಹೀರಾತುಗಳಿಂದ ಪ್ರಭಾವಿಸಲ್ಪಡುತ್ತವೆ: ಜಾಹೀರಾತುಗಳು ಅನುಭೋಗಿಗಳನ್ನು ಆಕರ್ಷಿಸಿ ಬಯಕೆಗಳನ್ನು ಪ್ರಭಾವಿಸುತ್ತವೆ. ಆದ್ದರಿಂದ ಜಾಹೀರಾತುಗಳು ಸರಕು ಮತ್ತು ಸೇವೆಗಳ ಆಯ್ಕೆಯನ್ನು ನಿರ್ಧರಿಸುತ್ತದೆ. ಅನುಭೋಗಿಗಳು ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಲು ಜಾಹೀರಾತಿನಲ್ಲಿ ತೋರಿಸಿದ ಹಲವಾರು ಸರಕು, ಸೇವೆಗಳನ್ನು ಬಳಸಲು ಮುಂದಾಗುತ್ತಾರೆ. ಉದಾಹರಣೆಗೆ ಜಾಹೀರಾತಿನಲ್ಲಿ ಪ್ರದರ್ಶಿಸಿದ ಹಲವು ಬಗೆಯ ಮಾರ್ಜಕಗಳು ಹಾಗೂ ಸೋಪುಗಳನ್ನು ಉಪಯೋಗಿಸಲು ಆಶಿಸುತ್ತಾರೆ ಹಾಗೂ ಅವುಗಳನ್ನು ಪ್ರಯೋಗಿಸಿ ಉತ್ತಮವಾದುದನ್ನು ಕಂಡು ಹಿಡಿಯಲು ಬಯಸುತ್ತಾರೆ.

12. ಬಯಕೆಗಳು ಸಂಪ್ರದಾಯ ಮತ್ತು ಆಚಾರಗಳಿಂದ ಪ್ರಭಾವಿತವಾಗುತ್ತವೆ: ಬಯಕೆಗಳು ವ್ಯಕ್ತಿಗಳ ಸಂಪ್ರದಾಯ ಹಾಗೂ ಆಚಾರಗಳಿಂದ

ಪ್ರಭಾವಿತಗೊಂಡಿರುತ್ತವೆ. ಉದಾಹರಣೆಗೆ ಆಹಾರ ಪದಾರ್ಥ, ಒಡವೆಗಳು, ಉಡುಗೆಯ ಶೈಲಿ, ಇವುಗಳು ಒಬ್ಬ ವ್ಯಕ್ತಿಯ ಅಥವಾ ಸಮಾಜದ ಸಂಪ್ರದಾಯ ಹಾಗೂ ಆಚಾರಗಳಿಗೆ ಅನುಗುಣವಾಗಿರುತ್ತವೆ.

ಮಾನವನ ಬಯಕೆಗಳ ವರ್ಗೀಕರಣ:

ಮಾನವನ ಬಯಕೆಗಳು ವೈವಿಧಮಯ ಸ್ವರೂಪವನ್ನು ಹೊಂದಿವೆ. ಅಪರಿಮಿತ ವೈವಿಧಮಯ ಬಯಕೆಗಳನ್ನು ವಿಶಾಲವಾಗಿ ಮೂರು ರೀತಿಯಲ್ಲಿ ವರ್ಗೀಕರಿಸಬಹುದು, ಅವುಗಳೆಂದರೆ

1. ಅವಶ್ಯಕ ಬಯಕೆಗಳು
2. ಆರಾಮದಾಯಕ ಬಯಕೆಗಳು
3. ಐಷರಾಮಿ ಬಯಕೆಗಳು

1. **ಅವಶ್ಯಕ ಬಯಕೆಗಳು:**

ಜೀವನಕ್ಕೆ ಅಗತ್ಯವಾಗಿ ಬೇಕಾಗುವ ಸರಕು ಸೇವೆಗಳನ್ನೊಳಗೊಂಡ ಬಯಕೆಗಳನ್ನು 'ಅವಶ್ಯಕ ಬಯಕೆ' ಗಳೆನ್ನುತ್ತಾರೆ. ಇವುಗಳಿಲ್ಲದೆ ಜೀವನ ನಡೆಸಲು ಸಾಧ್ಯವಿಲ್ಲ. ಜೀವನಾವಶ್ಯಕ್ಕಾಗಿ ಹಾಗೂ ವ್ಯಕ್ತಿಗಳ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಇವುಗಳು ಅತ್ಯಾವಶ್ಯಕ. ಇವುಗಳನ್ನು ಪುನಃ 1. ಜೀವನಾವಶ್ಯಕಗಳು 2. ದಕ್ಷತಾವಶ್ಯಕಗಳು ಎಂದು ವರ್ಗೀಕರಿಸಬಹುದು.

ಅ. ಜೀವನಾವಶ್ಯಕಗಳು: ವ್ಯಕ್ತಿಯು ಜೀವನ ನಡೆಸಲು ಬೇಕಾದ ಅಗತ್ಯ ಸರಕು ಸೇವೆಗಳ ಬಯಕೆಯನ್ನು ಜೀವನಾವಶ್ಯಕಗಳು ಎನ್ನಲಾಗುತ್ತದೆ. ಆಹಾರ, ಬಟ್ಟೆ ವಸತಿ ಇವುಗಳನ್ನು ಈ ಗುಂಪಿಗೆ ಸೇರಿಸಬಹುದು.

ಆ. ದಕ್ಷತಾವಶ್ಯಕತೆಗಳು: ವ್ಯಕ್ತಿಯ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಬೇಕಾದ ಸರಕು ಸೇವೆಗಳ ಬಯಕೆಯನ್ನು ದಕ್ಷತಾವಶ್ಯಕತೆಗಳು ಎನ್ನಲಾಗುತ್ತದೆ. ಉದಾಹರಣೆಗೆ ಪುಸ್ತಕ, ಪೆನ್ನು, ಮೇಜು, ಕುರ್ಚಿ, ಕಂಪ್ಯೂಟರ್, ಸ್ಮಾರ್ಟ್‌ಬೋರ್ಡ್ ಮುಂತಾದವುಗಳು ವಿದ್ಯಾರ್ಥಿಗಳ ದಕ್ಷತೆಯನ್ನು ಹೆಚ್ಚಿಸುತ್ತದೆ.

2. **ಆರಾಮದಾಯಕ ಬಯಕೆಗಳು:** ಜೀವನವನ್ನು, ಸರಳ ಹಾಗೂ ಸುಲಭದಾಯಕವಾಗಿಸುವ ಸರಕುಗಳ ಬಯಕೆಗಳನ್ನು 'ಆರಾಮದಾಯಕ ಬಯಕೆಗಳು' ಎನ್ನಲಾಗುತ್ತದೆ. ಉದಾಹರಣೆಗೆ, ಪೀಠೋಪಕರಣಗಳು, ಮಿಕ್ಸಿ, ಫ್ಯಾನ್, ಹವಾನಿಯಂತ್ರಿತ ಯಂತ್ರ, ವಾಷಿಂಗ್ ಮಿಷಿನ್, ರೆಫ್ರಿಜರೇಟರ್ ಮುಂತಾದ ಸರಕುಗಳ ಬಯಕೆಯನ್ನು ಆರಾಮದಾಯಕಗಳು ಎನ್ನಬಹುದು.

3. **ಐಷರಾಮಿ ಬಯಕೆಗಳು:** ವ್ಯಕ್ತಿಯ ಜೀವನಕ್ಕೆ ಅತ್ಯಗತ್ಯವಲ್ಲದ ಆದರೆ ಅಂತಸ್ತನ್ನು ಹೆಚ್ಚಿಸುವ ಸರಕುಗಳ ಬಯಕೆಗಳನ್ನು 'ಐಷರಾಮಿ ಬಯಕೆಗಳು' ಎನ್ನಲಾಗುತ್ತದೆ. ಈ ಸರಕುಗಳು ವಿಲಾಸಿ ಜೀವನಕ್ಕೆ ಕಾರಣವಾಗುತ್ತದೆ.

ಐಷರಾಮಿ ಬಯಕೆಗಳು ಜೀವನಮಟ್ಟವನ್ನು ಹೆಚ್ಚಿಸುತ್ತವೆ. ಐಷರಾಮಿ ಬಯಕೆಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು: ಅ. ರಕ್ಷಣಾ ಐಷರಾಮಿ ಬಯಕೆಗಳು ಆ. ಅಹಿತಕಾರಿ ಐಷರಾಮಿ ಬಯಕೆಗಳು ಇ. ಹಿತಕಾರಿ ಐಷರಾಮಿ ಬಯಕೆಗಳು.

ಅನುಭೋಗ:

ನಾವು ನಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಲು ಹಲವಾರು ಸರಕು ಮತ್ತು ಸೇವೆಗಳನ್ನು ಬಳಸುತ್ತೇವೆ. ಸಾಮಾನ್ಯವಾಗಿ ನಮ್ಮ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಸರಕು ಮತ್ತು ಸೇವೆಗಳನ್ನು ಬಳಸುವುದನ್ನು 'ಅನುಭೋಗ' ಎನ್ನಲಾಗುತ್ತದೆ. ಅನುಭೋಗವು ಎಲ್ಲ ಆರ್ಥಿಕ ಚಟುವಟಿಕೆಗಳಿಗೆ ಆಧಾರವಾಗಿದೆ. ಅನುಭೋಗದ ಪ್ರಕ್ರಿಯೆಯು ಒಂದು ಆರ್ಥಿಕತೆಯಲ್ಲಿನ ಬೇಡಿಕೆ, ಉತ್ಪಾದನೆ, ಮಾರುಕಟ್ಟೆಯ ಗಾತ್ರ, ಉದ್ಯೋಗದ ಮಟ್ಟ, ಆದಾಯ, ಜೀವನ ಮಟ್ಟ ಇತ್ಯಾದಿ ಆರ್ಥಿಕ ಚಲಕಗಳನ್ನು ನಿರ್ಧರಿಸುತ್ತದೆ. ಆದ್ದರಿಂದ, ಅನುಭೋಗ ಮತ್ತು ಅನುಭೋಗಿಯ ಆರ್ಥಿಕ ಚಟುವಟಿಕೆಗಳ ದಿಕ್ಕನ್ನು ನಿರ್ಧರಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ.

ಅನುಭೋಗದ ಅರ್ಥ:

ನಾವು ಪ್ರತಿನಿತ್ಯ ಬಳಸುವ ಸರಕು ಇಲ್ಲವೇ ಸೇವೆಗಳು ನಮ್ಮ ಬಯಕೆಯನ್ನು ಈಡೇರಿಸುವ ಶಕ್ತಿಯನ್ನು ಹೊಂದಿರುತ್ತವೆ. ಸರಕು ಮತ್ತು ಸೇವೆಗಳಲ್ಲಿನ ಮಾನವನ ಬಯಕೆಯನ್ನು ತೃಪ್ತಿಪಡಿಸುವ ಶಕ್ತಿಯನ್ನು 'ತುಷ್ಟಿಗುಣ' ಎನ್ನಲಾಗುತ್ತದೆ. ಒಬ್ಬ ವ್ಯಕ್ತಿ ಕೆಲವು ನಿರ್ದಿಷ್ಟ ಸರಕು ಅಥವಾ ಸೇವೆಯನ್ನು ಬಳಸಿದಾಗ ಅದರಲ್ಲಿನ ತುಷ್ಟಿಗುಣ ನಾಶವಾಗುತ್ತದೆ. ಮಾನವನ ಬಯಕೆಯನ್ನು ಈಡೇರಿಸಲು ಸರಕು ಮತ್ತು ಸೇವೆಗಳಲ್ಲಿನ ತುಷ್ಟಿಗುಣ ನಾಶವಾಗುವ ಪ್ರಕ್ರಿಯೆಯನ್ನು 'ಅನುಭೋಗ' ಎನ್ನಲಾಗುತ್ತದೆ.

ಪ್ರೊ. ಎ. ಎಲ್. ಮೇಯರ್ ರವರ ಪ್ರಕಾರ "ಮನುಷ್ಯರು ತಮ್ಮ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ನೇರ ಮತ್ತು ಅಂತಿಮವಾಗಿ ಸರಕು ಮತ್ತು ಸೇವೆಗಳನ್ನು ಬಳಸಿದ್ದಲ್ಲಿ ಅದನ್ನು ಅನುಭೋಗ" ಎನ್ನುವರು. ಜನರು ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಲು ಹಲವು ಸರಕು ಮತ್ತು ಸೇವೆಗಳನ್ನು ಅನುಭೋಗಿಸುವರು. ಆದ್ದರಿಂದ ಅಂತಿಮ ಸರಕು ಮತ್ತು ಸೇವೆಗಳನ್ನು ಬಳಸಿ ಬಯಕೆಯನ್ನು ಈಡೇರಿಸಿಕೊಳ್ಳುವ ಪ್ರಕ್ರಿಯೆಯನ್ನು ಅನುಭೋಗ ಎನ್ನಲಾಗುತ್ತದೆ.

ಕೇವಲ ತುಷ್ಟಿಗುಣದ ನಾಶ ಅನುಭೋಗವಲ್ಲ ಎಂಬುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ತುಷ್ಟಿಗುಣ ನಾಶದೊಂದಿಗೆ ಬಯಕೆಗಳು ತೃಪ್ತಿಗೊಳ್ಳಬೇಕು. ಆಗ ಮಾತ್ರ ಅದನ್ನು ಅನುಭೋಗ ಎನ್ನಲಾಗುತದೆ. ಉದಾಹರಣೆಗೆ- ಶಿಕ್ಷಕರು ಪಾಠ ಮಾಡುತ್ತ ಬಳಪದಿಂದ ಕಪ್ಪುಹಲಗೆಯ ಮೇಲೆ ಬರೆದಾಗ ಬಳಪದ ತುಷ್ಟಿಗುಣ ನಾಶವಾಗುತ್ತದೆ. ಹಾಗೂ ಶಿಕ್ಷಕರ ಬೋಧಿಸುವ ಬಯಕೆ ಈಡೇರುತ್ತದೆ. ಇದನ್ನು ಅನುಭೋಗ ಎನ್ನುತ್ತಾರೆ. ಅದರ ಬದಲು ಬಳಪವನ್ನು ಕೇವಲ ಪುಡಿ ಮಾಡಿದಾಗ ಕೂಡ ಬಳಪದ ತುಷ್ಟಿಗುಣ ನಾಶವಾಗುತ್ತದೆ. ಇದನ್ನು ಅನುಭೋಗ ಎನ್ನಲಾಗುವುದಿಲ್ಲ.

ಅನುಭೋಗದ ವರ್ಗೀಕರಣ:

ವ್ಯಕ್ತಿಯು ಸರಕುಗಳನ್ನು ಅನುಭೋಗಿಸುವ ಆಧಾರದ ಮೇಲೆ ಅನುಭೋಗವನ್ನು ಎರಡು ಗುಂಪುಗಳಾಗಿ ವರ್ಗೀಕರಿಸಬಹುದು. ಅವುಗಳೆಂದರೆ

1. ಪ್ರತ್ಯಕ್ಷ ಅನುಭೋಗ
2. ಪರೋಕ್ಷ ಅನುಭೋಗ

1. **ಪ್ರತ್ಯಕ್ಷ ಅನುಭೋಗ:** ವ್ಯಕ್ತಿಯು ಸಿದ್ಧವಾದ ಸರಕು ಮತ್ತು ಸೇವೆಗಳನ್ನು ಅನುಭೋಗಿಸುವ ಕ್ರಿಯೆಯೇ 'ಪ್ರತ್ಯಕ್ಷ ಅನುಭೋಗ' ಎನ್ನಲಾಗುತ್ತದೆ. ಇದರ ಅರ್ಥ ಬಳಸಲು ಸಿದ್ಧವಿರುವ ಸರಕುಗಳ ಬಯಕೆಗಳನ್ನು ತಕ್ಷಣ ತೃಪ್ತಿಪಡಿಸುತ್ತವೆ. ಉದಾಹರಣೆಗೆ- ಹಾಲು, ಹಣ್ಣು, ತರಕಾರಿ, ಸಿದ್ಧ ಉಡುಪು, ಟಿವಿ, ಕುರ್ಚಿ, ಮೇಜು ಇವುಗಳ ಬಳಕೆಯನ್ನು ಪ್ರತ್ಯಕ್ಷ ಅನುಭೋಗ ಎನ್ನಲಾಗುತ್ತದೆ. ಪ್ರತ್ಯಕ್ಷ ಅನುಭೋಗದಲ್ಲಿ ಸರಕುಗಳು ಬಳಕೆಗೆ ಸಿದ್ಧವಿರುತ್ತದೆ.
2. **ಪರೋಕ್ಷ ಅನುಭೋಗ:** ಇದು ಮಧ್ಯವರ್ತಿ ಸರಕುಗಳ ಬಳಕೆಯ ಪ್ರಕ್ರಿಯೆಯಾಗಿದೆ. ಅಂತಿಮ ಸರಕುಗಳನ್ನು ಉತ್ಪಾದಿಸಲು ಮಧ್ಯವರ್ತಿ ಸರಕುಗಳನ್ನು ಕಚ್ಚಾ ಸರಕುಗಳನ್ನಾಗಿ ಉಪಯೋಗಿಸಲಾಗುತ್ತದೆ. ಉದಾಹರಣೆಗೆ- ಭೂಮಿ, ನೀರು, ರಸಗೊಬ್ಬರಗಳು, ಬೀಜ, ಟ್ರ್ಯಾಕ್ಟರ್ ಇತ್ಯಾದಿಗಳು ಆಹಾರ ಬೆಳೆಗಳನ್ನು ಬೆಳೆಯಲು ಕೃಷಿಯಲ್ಲಿ ತೊಡಗಿಸಲಾಗುತ್ತದೆ. ಇಂತಹ ಸರಕುಗಳನ್ನು ಮಧ್ಯವರ್ತಿ ಸರಕುಗಳು ಎನ್ನುತ್ತಾರೆ. ಈ ಸರಕುಗಳನ್ನು ನೇರವಾಗಿ ಬಳಸಲು ಸಾಧ್ಯವಿಲ್ಲ. ಬದಲಾಗಿ ನಾವು ಬಳಸುವ ಅಂತಿಮ ಸರಕುಗಳ ಉತ್ಪಾದನೆಯಲ್ಲಿ ಇವುಗಳನ್ನು ಬಳಸಲಾಗುತ್ತದೆ. ಆದ್ದರಿಂದ ಇಂತಹ ಮಧ್ಯಂತರ ಸರಕುಗಳ ಬಳಕೆಯನ್ನು ಪರೋಕ್ಷ ಅನುಭೋಗ ಎನ್ನಲಾಗುತ್ತದೆ.

ಅಭ್ಯಾಸ

I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಮಾನವನ ಬಯಕೆಗಳು ________ ಆಗಿವೆ

ಅ. ಪರಿಮಿತ
ಆ. ಅಪರಿಮಿತ
ಇ. ಎಣಿಸಬಹುದು
ಈ. ಕೆಲವೇ ಕೆಲವು

2. ಅಪರಿಮಿತ ಬಯಕೆಗಳು ಹಾಗು ಮಿತವಾದ ಸಂಪನ್ಮೂಲಗಳಿಂದ ಕೊರತೆಯ ಮತ್ತು ________ ಸಮಸ್ಯೆ ಉಂಟಾಗುತ್ತದೆ.

ಅ. ಆಯ್ಕೆಯ
ಆ. ಸಂಪನ್ಮೂಲಗಳ

ಇ. ಮಾರುಕಟ್ಟೆಯ
ಈ. ಅನುಭೋಗದ

3. _______ ರವರ ಪ್ರಕಾರ ಮಾನವನ ಬಯಕೆಗಳು ಎಲ್ಲಾ ಆರ್ಥಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿದೆ.

ಅ. ಆಡಂಸ್ಮಿತ್
ಆ. ಜೆ. ಎಂ. ಕೇನ್
ಇ. ಪ್ರೊ.ಸೆಲಿಂಗ್ ಮನ್
ಈ. ಜೆ. ಬಿ. ಸೇ

4. ನಿರಂತರವಾಗಿ ತೃಪ್ತಿಪಡಿಸಿದ ಬಯಕೆಗಳು _______ ಆಗಿ ಪರಿಣಮಿಸುತ್ತವೆ.

ಅ. ಜಾಹೀರಾತು
ಆ. ಆದಾಯ
ಇ. ಅಭ್ಯಾಸ
ಈ. ಅಭಿರುಚಿ

5. ಮಾನವನ ಬಯಕೆಯನ್ನು ಈಡೇರಿಸಲು ಸರಕು ಮತ್ತು ಸೇವೆಗಳಲ್ಲಿನ ತೃಷ್ಟಿಗುಣ ನಾಶವಾಗುವ ಪ್ರಕ್ರಿಯೆಯನ್ನು _______ ಎನ್ನಲಾಗುತ್ತದೆ.

ಅ. ಅಗತ್ಯಗಳು
ಆ. ತೃಷ್ಟಿಗುಣ
ಇ. ಅನುಭೋಗ
ಈ. ಯಾವುದು ಇಲ್ಲ

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ವ್ಯಕ್ತಿಯ ಜೀವನ ನಡೆಸಲು ಬೇಕಾದ ಅಗತ್ಯ ಸರಕು ಸೇವೆಗಳ ಬಯಕೆಯನ್ನು _______ ಎನ್ನಲಾಗುತ್ತದೆ.
2. _______ ಜೀವನವನ್ನು ಸರಳ ಹಾಗೂ ಸುಲಭಗೊಳಿಸುತ್ತದೆ.
3. ಮಾನವನ ಬಯಕೆಗಳನ್ನು ಈಡೇರಿಸಲು ಸರಕು ಸೇವೆಗಳಲ್ಲಿನ ತುಷ್ಟಿಗುಣ ನಾಶವಾಗುವ _______ ಪ್ರಕ್ರಿಯೆಯನ್ನು ಎನ್ನಲಾಗುತ್ತದೆ.
4. ಅಂತಿಮ ಸರಕುಗಳನ್ನು ಉತ್ಪಾದಿಸಲು ಬಳಸುವ ಸರಕುಗಳನ್ನು _______ ಎನ್ನಲಾಗುತ್ತದೆ.
5. ಆಹಾರದ ಅಗತ್ಯವನ್ನು _______ ಬಯಕೆ ಎಂದು ಕರೆಯುತ್ತೇವೆ.

III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಮಾನವನ ಬಯಕೆಗಳು ಎಂದರೇನು?
2. ಜೀವನಾವಶ್ಯಕಗಳಿಗೆ ಎರಡು ಉದಾಹರಣೆ ಕೊಡಿ.
3. ಅನುಭೋಗ ಎಂದರೇನು?

4. ನಾಲ್ಕು ಆರ್ಥಿಕ ಚಟುವಟಿಕೆಗಳನ್ನು ಹೆಸರಿಸಿ.
5. ಬಯಕೆಗಳು ಪೂರಕವಾದವು ಎನ್ನಲು ಕೆಲವು ಉದಾಹರಣೆ ಕೊಡಿ.

IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯದಲ್ಲಿ ಉತ್ತರಿಸಿ.

1. ಆಯ್ಕೆಯ ಸಮಸ್ಯೆಯು ಏಕೆ ಉದ್ಭವಿಸುತ್ತದೆ?
2. ಸುಖಾಭೋಗಗಳು ಯಾವುವು?
3. ವಿವಿಧ ಬಗೆಯ ಐಷರಾಮಿಗಳನ್ನು ತಿಳಿಸಿ.
4. ಬಯಕೆಯು ತೀವ್ರತೆಗಿಂತ ಹೇಗೆ ಭಿನ್ನವಾಗಿದೆ?
5. ಪರೋಕ್ಷ ಅನುಭೋಗ ಎಂದರೇನು?

V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯದಲ್ಲಿ ಉತ್ತರಿಸಿ.

1. ಮಾನವನ ಬಯಕೆಗಳ ಲಕ್ಷಣಗಳನ್ನು ವಿವರಿಸಿ.
2. ಮಾನವನ ಬಯಕೆಗಳ ವರ್ಗೀಕರಣವನ್ನು ಚರ್ಚಿಸಿ.
3. ವಿವಿಧ ರೀತಿಯ ಅನುಭೋಗಗಳನ್ನು ವಿವರಿಸಿ.
4. ಅನುಭೋಗದ ಮೇಲೆ ಒಂದು ಟಿಪ್ಪಣಿ ಬರೆಯಿರಿ.
5. ಬಯಕೆಗಳ ಮೇಲೆ ಒಂದು ಚಿಕ್ಕ ಟಿಪ್ಪಣಿ ಬರೆಯಿರಿ.

ಯೋಜನಾ ಕಾರ್ಯ:

1. ನಿಮ್ಮ ಕುಟುಂಬದ ಸದಸ್ಯರ ಬಯಕೆಗಳನ್ನು ಪಟ್ಟಿಮಾಡಿ, ಸಂಪನ್ಮೂಲಗಳ ಲಭ್ಯತೆಯ ಅನುಸಾರ ಆದ್ಯತಾ ಪಟ್ಟಿಯನ್ನು ತಯಾರಿಸಿರಿ.
2. ನಿಮ್ಮ ಮನೆಯಲ್ಲಿನ ವಿವಿಧ ರೀತಿಯ ಸರಕುಗಳನ್ನು ಪಟ್ಟಿಮಾಡಿ ಅವುಗಳನ್ನು
    1. ಅವಶ್ಯಕಗಳು
    2. ಆರಾಮದಾಯಕಗಳು
    3. ಐಷರಾಮಿ ಸರಕುಗಳೆಂದು ಪಟ್ಟಿಮಾಡಿರಿ.

ಅಧ್ಯಾಯ-6 ತುಷ್ಟಿಗುಣ

‘‘ನನ್ನ ಪ್ರಮುಖ ಕೆಲಸವು ತುಷ್ಟಿಗುಣದ ನಿಖರವಾದ ಸ್ವರೂಪ ಮತ್ತು ಪರಿಸ್ಥಿತಿಯ ಜಾಡನ್ನು ಹುಡುಕುವುದಾಗಿದೆ. ಅರ್ಥಶಾಸ್ತ್ರದ ಸಮಸ್ಯೆಗಳಿಗೆ ಪರಿಹಾರದ ಕೀಲಿಯಾಗಿರುವ ತುಷ್ಟಿಗುಣದ ವಿಷಯಕ್ಕೆ ಅರ್ಥಶಾಸ್ತ್ರಜ್ಞರು ನಿಮಿಷಕ್ಕಿಂತ ಹೆಚ್ಚಿನ ಗಮನವನ್ನು ಕೊಡದೆ ಇರುವುದು ನನಗೆ ವಿಚಿತ್ರವಾಗಿ ತೋರುತ್ತಿದೆ.’’ ವಿಲಿಯಂ ಸ್ಟ್ಯಾನ್ಲಿಜೀವನ್ಸ್

ಪೀಠಿಕೆ:

ಬಯಕೆಗಳು ಅಪೇಕ್ಷೆಗಳಾಗಿದ್ದು, ಅವು ಸ್ವಾಭಾವಿಕವಾಗಿ ಬರುವಂತಹವು ಮತ್ತು ವ್ಯಕ್ತಿಗಳು ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಲು ವಿವಿಧ ಸರಕುಗಳನ್ನು ಅನುಭೋಗಿಸುತ್ತಾರೆ. ಆದರೆ ಎಲ್ಲಾ ಸರಕುಗಳು ಮಾನವನ ಬಯಕೆಗಳನ್ನು ಈಡೇರಿಸಲು ಸಾಧ್ಯವಿಲ್ಲ. ಅಂದರೆ ಜನರು ತಮ್ಮ ಬಯಕೆಗಳನ್ನು ಈಡೇರಿಸುವ ಸರಕು ಸೇವೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ತಮಗೆ ಗರಿಷ್ಠ ತುಷ್ಟಿಗುಣ ನೀಡುವ ಸರಕು ಸೇವೆಗಳನ್ನು ಮಾತ್ರ ಕೊಂಡುಕೊಳ್ಳಲು ಇಚ್ಛಿಸುವರು. ಸರಕಿಗೆ ಬಯಕೆಯನ್ನು ಈಡೇರಿಸುವ ಸಾಮರ್ಥ್ಯ ಇರುವುದು ಇಲ್ಲಿ ಪ್ರಮುಖ ವಿಷಯ. ಹಾಗಾದರೆ ಸರಕಿಗೆ ಬಯಕೆಯನ್ನು ತೃಪ್ತಿ ಪಡಿಸಲು ಇರುವ ಸಾಮರ್ಥ್ಯಕ್ಕೆ ಅರ್ಥಶಾಸ್ತ್ರದಲ್ಲಿ ಏನೆಂದು ಕರೆಯುತ್ತಾರೆ? ತುಷ್ಟಿಗುಣದ ಲಕ್ಷಣಗಳೇನು? ತುಷ್ಟಿಗುಣದ ವಿವಿಧ ಪ್ರಕಾರಗಳಾವುವು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುತ್ತಾ ಅವುಗಳಿಗೆ ಸಂಬಂಧಿಸಿದ ಇತರೆ ವಿಚಾರವನ್ನು ತಿಳಿಯುವುದು ಈ ಅಧ್ಯಾಯದ ಧ್ಯೇಯವಾಗಿದೆ.

ತುಷ್ಟಿಗುಣದ ಅರ್ಥ:

‘ತುಷ್ಟಿಗುಣ’ ಎಂಬ ಪದವನ್ನು ಮೊದಲ ಬಾರಿಗೆ ಬಳಸಿದವರು ಪ್ರೊ. ಕೆ. ಇ. ಬೌಲ್ಡಿಂಗ್‌ರವರು. 19 ನೇ ಶತಮಾನದಲ್ಲಿ ಖ್ಯಾತ ಅರ್ಥಶಾಸ್ತ್ರಜ್ಞರಾದ ಡಬ್ಲೂ. ಎಸ್. ಜೆವಾನ್ಸ್, ಲಿಯಾನ್ ವಾಲ್ರಾಸ್, ಮತ್ತು ಕಾರ್ಲ್ ಮೆಂಜ್ರ ರವರು ತುಷ್ಟಿಗುಣದ ವಿಶ್ಲೇಷಣೆಯ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ತದ ನಂತರ ಅರ್ಥಶಾಸ್ತ್ರಜ್ಞರಾದ ಆಲ್‌ಫ್ರೆಡ್ ಮಾರ್ಷಲ್, ಆರ್. ಜೆ. ಡಿ. ಅಲೆನ್, ಜೆ. ಆರ್. ಹಿಕ್ಸ್, ಪಾಲ್. ಎ. ಸ್ಯಾಮುಯಲ್‌ಸನ್ ಮುಂತಾದವರು ಮಾರುಕಟ್ಟೆಯಲ್ಲಿನ ಅನುಭೋಗಿಯ ವರ್ತನೆಯನ್ನು ವಿವರಿಸಲು ತುಷ್ಟಗುಣ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಿದ್ದಾರೆ.

ತುಷ್ಟಿಗುಣ ಎಂಬ ಪದವು ಉಪಯೋಗ ಎಂಬ ಅರ್ಥವನ್ನು ನೀಡುತ್ತದೆ. ಸರಕು ಮತ್ತು ಸೇವೆಯಲ್ಲಿ ಮಾನವನ ಬಯಕೆಗಳನ್ನು ತೃಪ್ತಿಪಡಿಸುವ ಸಾಮರ್ಥ್ಯವನ್ನು ತುಷ್ಟಿಗುಣ ಎನ್ನುತ್ತಾರೆ. ಇದಕ್ಕೆ ಬಯಕೆ ತೃಪ್ತಿಪಡಿಸುವ ಶಕ್ತಿ ಇರುವುದರಿಂದ ಇದನ್ನು ‘ಬಳಕೆಯಲ್ಲಿನ ಮೌಲ್ಯ’ ಎಂಬುದಾಗಿ ಕರೆಯುತ್ತಾರೆ. ಹೀಗಾಗಿ, ತುಷ್ಟಿಗುಣವು ಜನರ ಅನುಭೋಗದ ಆಯ್ಕೆಗೆ ಮೂಲಾಧಾರವಾಗಿದೆ. ಅನುಭೋಗಿಯು ತಾನು ಕೊಳ್ಳುವ ಸರಕು ಸೇವೆಗಳಲ್ಲಿ ತುಷ್ಟಿಗುಣ ಕಂಡುಬಂದರೆ ಮಾತ್ರ ಸರಕು ಸೇವೆಗಳನ್ನು ಕೊಂಡುಕೊಳ್ಳುತ್ತಾನೆ. ವಿವಿಧ ಸರಕಿನ

ಅನುಭೋಗದಿಂದ ಗಳಿಸುವ ತುಷ್ಟಿಗುಣವನ್ನು ಕಾಲ್ಪನಿಕ ಲೆಕ್ಕಾಚಾರದ ಯುಟಿಲ್ (util) ನಿಂದ ಮಾಪನ ಮಾಡಲಾಗುತ್ತದೆ. ಇದನ್ನು ಬಯಕೆಯನ್ನು ತೃಪ್ತಿ ಪಡಿಸುವ ಶಕ್ತಿಯ ಆಧಾರದ ಮೇಲೆ ಶ್ರೇಣಿಯನ್ನು (Rank) ಕೊಡುವುದರ ಮೂಲಕ ಅಳತೆ ಮಾಡಲಾಗುತ್ತದೆ.

ತುಷ್ಟಿಗುಣದ ಲಕ್ಷಣಗಳು

ತುಷ್ಟಿಗುಣವು ತನ್ನದೇ ಆದ ಗುಣಲಕ್ಷಣಗಳನ್ನು ಹೊಂದಿದೆ ಅವು ಕೆಳಕಂಡಂತಿವೆ:

i. ತುಷ್ಟಿಗುಣ ಬಯಕೆಗಳಿಗೆ ಸಂಬಂಧಿಸಿದೆ: ಈ ಮೊದಲೇ ತಿಳಿಸಿದಂತೆ, ಸರಕು ಇಲ್ಲವೆ ಸೇವೆಗಳಲ್ಲಿ ಮಾನವನ ಬಯಕೆಗಳನ್ನು ತೃಪ್ತಿಪಡಿಸುವ ಗುಣವನ್ನು 'ತುಷ್ಟಿಗುಣ' ಎನ್ನಲಾಗುತ್ತದೆ. ಸರಕು ಸೇವೆಗಳಲ್ಲಿನ ತುಷ್ಟಿಗುಣವನ್ನು ನಾಶಮಾಡಿ ಮಾನವನು ತನ್ನ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳುತ್ತಾನೆ. ಸರಕು ಸೇವೆಗಳಲ್ಲಿನ ತುಷ್ಟಿಗುಣದ ನಾಶದ ಹೊರತು ಮಾನವನ ಬಯಕೆಗಳ ತೃಪ್ತಿ ಸಾಧ್ಯವಿಲ್ಲ. ಹಾಗಾಗಿ ತುಷ್ಟಿಗುಣ ಮಾನವನ ಬಯಕೆಗಳಿಗೆ ಸಂಬಂಧಿಸಿದುದಾಗಿದೆ.

ii. ತುಷ್ಟಿಗುಣ ಉಪಯುಕ್ತತೆಗಿಂತ ಭಿನ್ನವಾಗಿದೆ: ಆಂಗ್ಲ ಭಾಷೆ ಯುಟಿಲಿಟಿ ಎಂಬುದರ ಅರ್ಥ 'ಉಪಯುಕ್ತತೆ' ಎಂದಾಗುತ್ತದೆ. ಅರ್ಥಶಾಸ್ತ್ರದಲ್ಲಿ ತುಷ್ಟಿಗುಣ ಹಾಗೂ ಉಪಯುಕ್ತತೆ ಎಂಬ ಪದಗಳ ಅರ್ಥ ಭಿನ್ನವಾಗಿದೆ. ಎಲ್ಲಾ ಸರಕು ಮತ್ತು ಸೇವೆಗಳು ತುಷ್ಟಿಗುಣ ಹೊಂದಿರುತ್ತದೆ. ಆದರೆ ಎಲ್ಲಾ ಸರಕು ಮತ್ತು ಸೇವೆಗಳು ಎಲ್ಲರಿಗೂ ಉಪಯುಕ್ತವಾಗುವುದಿಲ್ಲ. ಉದಾಹರಣೆಗೆ ಪಿಯಾನೊ ತುಷ್ಟಿಗುಣ ಹೊಂದಿರುತ್ತದೆ. ಆದರೆ ಕೇವಲ ಪಿಯಾನೊ ನುಡಿಸುವವರಿಗೆ ಮಾತ್ರ ಅದು ಉಪಯುಕ್ತವಾಗಿರುತ್ತದೆ. ಇತರರಿಗೆ ಅಲ್ಲ.

iii. ತುಷ್ಟಿಗುಣ ತೃಪ್ತಿಗಿಂತ ಭಿನ್ನ: ತುಷ್ಟಿಗುಣ ಮತ್ತು ತೃಪ್ತಿ ಅನುಭೋಗದ ಎರಡು ಪ್ರಮುಖವಾದ ಅಂಶಗಳು. ತುಷ್ಟಿಗುಣ ಅನುಭೋಗದ ಪ್ರಾರಂಭಿಕ ಹಂತವಾಗಿದೆ. ಅದು ಎಲ್ಲ ಸರಕಿನ ಆಂತರಿಕ ಗುಣವಾಗಿದೆ. ತೃಪ್ತಿ ಅನುಭೋಗದ ಕೊನೆಯ ಹಂತವಾಗಿದ್ದು ಅದು ಸರಕು ಮತ್ತು ಸೇವೆಗಳನ್ನು ಅನುಭೋಗಿಸಿದ ಮಾನಸಿಕ ಭಾವನೆಯಾಗಿದೆ. ಉದಾಹರಣೆಗೆ, ಆಹಾರ ಪದಾರ್ಥಗಳಿಗೆ ತುಷ್ಟಿಗುಣವಿದ್ದು, ಅದರ ಅನುಭೋಗದಿಂದ ತೃಪ್ತಿ ಸಿಕ್ಕಿದೆಯೊ, ಸಿಕ್ಕಿದರೆ ಎಷ್ಟು ಸಿಕ್ಕಿದೆ ಎಂಬುದನ್ನು ತಿಂದವರು ಮಾತ್ರ ಅನುಭವಿಸಿ ಹೇಳಲು ಸಾಧ್ಯ.

iv. ತೃಪ್ತಿ ಹಿತಕರ ಇಲ್ಲವೆ ಹಿತಕರವಾಗಿಲ್ಲದಿರಬಹುದು: ಸರಕು ಮತ್ತು ಸೇವೆಗಳಲ್ಲಿ ತುಷ್ಟಿಗುಣವಿರುತ್ತದೆ ಅದರಿಂದ ದೊರೆಯುವ ತುಷ್ಟಿಗುಣ ಹಿತಕರ ಅಥವಾ ಅಹಿತಕರವು ಆಗಿರಬಹುದು. ಉದಾಹರಣೆಗೆ, ಔಷಧಿಗಳು ತುಷ್ಟಿಗುಣ ಹೊಂದಿರುತ್ತವೆ ಆದರೆ ಅನೇಕ ಬಾರಿ ಅನಿವಾರ್ಯವಾಗಿ ಇಲ್ಲವೆ ಬಲವಂತದಿಂದ ಔಷಧಿಗಳನ್ನು ಸೇವಿಸುವುದು ಹಿತಕರವಾದ ಅನುಭವವಲ್ಲ.

v. ತುಷ್ಟಿಗುಣ ಸಾಪೇಕ್ಷವಾದುದು: ಬೇಡಿಕೆಗಳಂತೆ ತುಷ್ಟಿಗುಣವು ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ, ಪ್ರದೇಶದಿಂದ ಪ್ರದೇಶಕ್ಕೆ, ಸಮಯದಿಂದ ಸಮಯಕ್ಕೆ

ಭಿನ್ನವಾಗಿರುತ್ತದೆ. ಉದಾಹರಣೆಗೆ, ಕೆಲವರಿಗೆ ಟೀಯಲ್ಲಿ ತುಷ್ಟಿಗುಣವಿದ್ದರೆ ಇನ್ನು ಕೆಲವರಿಗೆ ಹಾಲಿನಲ್ಲಿ ತುಷ್ಟಿಗುಣ ಕಂಡುಬರುತ್ತದೆ. ಉಷ್ಣವಲಯದ ಪ್ರದೇಶದಲ್ಲಿನ ಜನರಿಗೆ ಹತ್ತಿ ಬಟ್ಟೆಯಲ್ಲಿ ತುಷ್ಟಿಗುಣ ಕಂಡುಬಂದರೆ, ಶೀತಲ ಪ್ರದೇಶದಲ್ಲಿನ ಜನರಿಗೆ ಉಣ್ಣೆಯ ಬಟ್ಟೆಗಳಲ್ಲಿ ಹೆಚ್ಚಿನ ತುಷ್ಟಿಗುಣ ಕಂಡುಬರುತ್ತದೆ. ಹಾಗೆಯೆ ಹವಾನಿಯಂತ್ರಕವು ಚಳಿಗಾಲಕ್ಕಿಂತ ಬೇಸಿಗೆಯಲ್ಲಿ ಹೆಚ್ಚಿನ ತುಷ್ಟಿಗುಣವನ್ನು ಹೊಂದಿರುತ್ತದೆ.

vi. ತುಷ್ಟಿಗುಣವು ಮಾನಸಿಕವಾದುದು: ತುಷ್ಟಿಗುಣವು ಒಂದು ಮಾನಸಿಕ ಅನುಭವ. ಅದು ವ್ಯಕ್ತಿಯ ಮನಸಿಗೆ ಸಂಬಂಧಿಸಿದ್ದು. ಅದು ವ್ಯಕ್ತಿಯ ಅಂತರಾವಲೋಕನ ಮತ್ತು ಅಭಿಪ್ರಾಯದ ಮೇಲೆ ಅವಲಂಬಿತವಾಗಿರುತ್ತದೆ. ಉದಾಹರಣೆಗೆ, ಒಬ್ಬ ಚಿತ್ರಕಾರನಿಗೆ ಚಿತ್ರ ಮತ್ತು ಬಣ್ಣಗಳಲ್ಲಿ ತುಷ್ಟಿಗುಣವಿರುತ್ತದೆ, ಆದರೆ ಚಿತ್ರಕಾರನಲ್ಲದವನಿಗೆ ಚಿತ್ರ ಮತ್ತು ಬಣ್ಣಗಳಲ್ಲಿ ತುಷ್ಟಿಗುಣ ಕಂಡುಬರುವುದಿಲ್ಲ.

vii. ತುಷ್ಟಿಗುಣವು ಸಾರ್ವತ್ರಿಕವಾದುದು: ತುಷ್ಟಿಗುಣವು ಎಲ್ಲಾ ರೀತಿಯ ಸರಕು ಮತ್ತು ಸೇವೆಗಳಲ್ಲಿ ಇರುತ್ತದೆ. ಅದು ಹಾನಿಕಾರಕ ಅಥವಾ ಹಾನಿಕಾರಕವಲ್ಲದ ಸರಕಿನಲ್ಲೂ ಇರುತ್ತದೆ. ಆಹಾರ, ಬಟ್ಟೆ ಪುಸ್ತಕ ಇವು ಹಾನಿಕಾರಕವಲ್ಲದ ಸರಕುಗಳು. ಸಿಗರೇಟ್, ಮಾದಕ ದ್ರವ್ಯಗಳು ಇವು ಹಾನಿಕಾರಕ ಸರಕುಗಳು. ಆದರೆ ಈ ಎಲ್ಲಾ ಸರಕುಗಳಲ್ಲಿಯೂ ತುಷ್ಟಿಗುಣ ಇರುತ್ತದೆ.

viii. ತುಷ್ಟಿಗುಣಕ್ಕೆ ನೈತಿಕ ತೊಡಕು ಇರುವುದಿಲ್ಲ: ತುಷ್ಟಿಗುಣಕ್ಕೆ ನೈತಿಕತೆ ಮತ್ತು ಮೌಲ್ಯ ಅನ್ವಯವಾಗುವುದಿಲ್ಲ. ಒಂದು ಸರಕು ಉತ್ಕೃಷ್ಟ ಅಥವಾ ನಿಕೃಷ್ಟವಾಗಿರಬಹುದು, ಒಳ್ಳೆಯದು ಅಥವಾ ಕೆಟ್ಟದ್ದಾಗಿರಬಹುದು. ಇದನ್ನು ಒಬ್ಬ ವ್ಯಕ್ತಿಯು ಬಳಸುವ ಸರಕಿನ ಸ್ವರೂಪದ ಆಧಾರದ ಮೇಲೆ ನಿರ್ಧರಿಸಲು ಸಾಧ್ಯವಿಲ್ಲ. ಯಾವುದೇ ಸರಕು ಇಲ್ಲವೆ ಸೇವೆ ವ್ಯಕ್ತಿಯ ಬೇಡಿಕೆಗಳನ್ನು ಪೂರೈಸಿದರೆ ಅದರಲ್ಲಿ ತುಷ್ಟಿಗುಣವಿದೆ ಎಂದರ್ಥ.

ix. ತುಷ್ಟಿಗುಣವು ಬೇಡಿಕೆಯ ಸಾಂದ್ರತೆಯನ್ನು ಅವಲಂಬಿಸಿದೆ: ಮಾನವನ ಬೇಡಿಕೆಗಳಿಗೆ ಬಳಕೆಯ ಆಧಾರದ ಮೇಲೆ ವಿವಿಧ ಸಾಂದ್ರತೆಯನ್ನು ಹೊಂದಿರುತ್ತದೆ. ತುಷ್ಟಿಗುಣವು ಬೇಡಿಕೆಗಳ ಸಾಂದ್ರತೆಯೊಂದಿಗೆ ಬದಲಾಗುತ್ತದೆ. ಹಸಿವಿದ್ದಾಗ ಆಹಾರ ಸೇವನೆಯ ಬೇಡಿಕೆಯಲ್ಲಿನ ಸಾಂದ್ರತೆ ಹೆಚ್ಚಿರುತ್ತದೆ. ಹಾಗಾಗಿ ಇತರೆ ಸಮಯಕ್ಕೆ ಹೋಲಿಸಿದಾಗ ಹಸಿದಾಗಿನ ಆಹಾರ ಸೇವನೆಯಲ್ಲಿನ ತುಷ್ಟಿಗುಣವೂ ಹೆಚ್ಚಿರುತ್ತದೆ.

x. ತುಷ್ಟಿಗುಣ ಮತ್ತು ಮಾಪನ: ಆಲ್‌ಫ್ರೆಡ್ ಮಾರ್ಷಲ್‌ರವರನ್ನು ಒಳಗೊಂಡಂತೆ ಕೆಲವು ಅರ್ಥಶಾಸ್ತ್ರಜ್ಞರು ಎರಡು ಸರಕುಗಳಿಂದ ಪಡೆಯುವ ತುಷ್ಟಿಗುಣವನ್ನು ಸಂಖ್ಯೆಗಳ ರೂಪದಲ್ಲಿ ಅಳತೆ ಮಾಡಬಹುದೆಂದು ತೋರ್ಪಡಿಸಿದರು. ಅರ್ಥಶಾಸ್ತ್ರಜ್ಞರಾದ ಆರ್. ಜಿ. ಡಿ. ಅಲೆನ್ ಮತ್ತು ಜೆ. ಆರ್. ಹಿಕ್ಸ್ ರವರುಗಳು ತುಷ್ಟಿಗುಣವನ್ನು ಸಂಖ್ಯೆಗಳ ರೂಪದಲ್ಲಿ ಅಳೆಯಲು ಸಾಧ್ಯವಿಲ್ಲ ಬದಲಾಗಿ ಅನುಭೋಗಿಗಳು ಸರಕುಗಳ ಕಡೆಗೆ ತೋರುವ ಒಲವಿನ ಆಧಾರದ ಮೇಲೆ ಹೋಲಿಸಿ ಅಳತೆ ಮಾಡಬಹುದು ಎಂದು ಪ್ರತಿಪಾದಿಸಿದ್ದಾರೆ.

ತುಷ್ಟಿಗುಣದ ವಿಧಗಳು

ತುಷ್ಟಿಗುಣದಲ್ಲಿ ಐದು ವಿಧಗಳಿವೆ. ಅವುಗಳು ಈ ಕೆಳಕಂಡಂತಿವೆ:

1. ಸ್ವರೂಪ ತುಷ್ಟಿಗುಣ: ಸರಕುಗಳ ಗಾತ್ರ, ವಿಧ ಸ್ವರೂಪಗಳನ್ನು ಬದಲಿಸಿದಾಗ ಸೃಷ್ಟಿಯಾಗುವ ತುಷ್ಟಿಗುಣವನ್ನು 'ಸ್ವರೂಪ ತುಷ್ಟಿಗುಣ' ಎನ್ನಲಾಗುವುದು. ಉದಾಹರಣೆಗೆ, ಕಬ್ಬನ್ನು ಅರೆದು ಸಂಸ್ಕರಿಸಿದಾಗ ಸಕ್ಕರೆಯಾಗಿ ಮಾರ್ಪಾಟಾಗುತ್ತದೆ. ಈ ಪ್ರಕ್ರಿಯೆಯಿಂದಾಗಿ ಕಬ್ಬಿನ ಸ್ವರೂಪವು ಬದಲಾಗಿ ತುಷ್ಟಿಗುಣ ಸೃಷ್ಟಿಯಾಗುತ್ತದೆ.
2. ಸ್ಥಳ ತುಷ್ಟಿಗುಣ: ವಿವಿಧ ಸರಕು ಮತ್ತು ಸೇವೆಗಳಿಗೆ ವಿವಿಧ ಪ್ರದೇಶದಲ್ಲಿ ವಿವಿಧ ರೀತಿಯ ತುಷ್ಟಿಗುಣವಿರುತ್ತದೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸರಕುಗಳನ್ನು ಬದಲಿಸುವುದರಿಂದ ಉಂಟಾಗುವ ತುಷ್ಟಿಗುಣವನ್ನು 'ಸ್ಥಳ ತುಷ್ಟಿಗುಣ' ಎನ್ನಲಾಗುತ್ತದೆ. ಕಡಿಮೆ ಉಪಯೋಗವಿರುವ ಸ್ಥಳದಿಂದ ಹೆಚ್ಚು ಉಪಯೋಗವಿರುವ ಸ್ಥಳಕ್ಕೆ ಸರಕನ್ನು ವರ್ಗಾಯಿಸುವುದರಿಂದ ತುಷ್ಟಿಗುಣವು ಹೆಚ್ಚಾಗುತ್ತದೆ. ಉದಾಹರಣೆಗೆ, ಹತ್ತಿಯನ್ನು ಹೊಲದಿಂದ ಬಟ್ಟೆ ನೇಯುವ ಗಿರಣಿಗೆ ವರ್ಗಾಯಿಸಿದಾಗ ತುಷ್ಟಿಗುಣ ಹೆಚ್ಚಾಗುತ್ತದೆ.
3. ಸಮಯ ತುಷ್ಟಿಗುಣ: ಅನುಭೋಗಕ್ಕೆ ಬೇಕಾಗುವ ಸಮಯಕ್ಕೆ ಸರಕು ಮತ್ತು ಸೇವೆಗಳನ್ನು ಒದಗಿಸಿದಾಗ ಸೃಷ್ಟಿಯಾಗುವ ತುಷ್ಟಿಗುಣಕ್ಕೆ 'ಸಮಯ ತುಷ್ಟಿಗುಣ' ಎನ್ನಲಾಗುತ್ತದೆ. ಸಮಯಕ್ಕೆ ಸರಿಯಾಗಿ ಸರಕು ಮತ್ತು ಸೇವೆಗಳು ಸಿಕ್ಕಾಗ ತುಷ್ಟಿಗುಣ ಹೆಚ್ಚಾಗುತ್ತದೆ. ಉದಾಹರಣೆಗೆ, ಹಣ್ಣುಗಳನ್ನು ಸಂಗ್ರಹಿಸಿ ಅಕಾಲಿಕವಾಗಿ ಒದಗಿಸಿದಾಗ ಆ ಹಣ್ಣುಗಳಲ್ಲಿನ ತುಷ್ಟಿಗುಣವು ಹೆಚ್ಚುತ್ತದೆ.
4. ಮಾಲೀಕತ್ವ ತುಷ್ಟಿಗುಣ: ಸರಕಿನ ಒಡೆತನವನ್ನು ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಬದಲಿಸುವುದರಿಂದ ಸೃಷ್ಟಿಯಾಗುವ ತುಷ್ಟಿಗುಣವನ್ನು 'ಮಾಲೀಕತ್ವ ತುಷ್ಟಿಗುಣ' ಎನ್ನಲಾಗುತ್ತದೆ. ಉದಾಹರಣೆಗೆ, ಕಂಪ್ಯೂಟರ್ ಒಡೆತನವು ಕಂಪ್ಯೂಟರ್ ಬಳಸಲು ಬಾರದ ವ್ಯಕ್ತಿಯಿಂದ ಒಬ್ಬ ಕಂಪ್ಯೂಟರ್ ವೃತ್ತಿಪರನಿಗೆ ಬದಲಿಸುವುದರಿಂದ ಕಂಪ್ಯೂಟರಲ್ಲಿನ ತುಷ್ಟಿಗುಣ ಹೆಚ್ಚಾಗುತ್ತದೆ.
5. ಸೇವಾ ತುಷ್ಟಿಗುಣ: ಮಾನವನ ಬಯಕೆಗಳನ್ನು ಈಡೇರಿಸಲು ಬಳಸುವ ವಿವಿಧ ಸೇವೆಗಳು ಒದಗಿಸುವ ತುಷ್ಟಿಗುಣವನ್ನು 'ಸೇವಾ ತುಷ್ಟಿಗುಣ' ಎನ್ನಲಾಗುತ್ತದೆ. ಉದಾಹರಣೆಗೆ, ರೈತರು, ಶಿಕ್ಷಕರು, ವಕೀಲರು, ವೈದ್ಯರು, ಲೆಕ್ಕಿಗರು, ಬಡಗಿಗಳು ಒದಗಿಸುವ ಸೇವೆಗಳಿಂದ ತುಷ್ಟಿಗುಣ ಉಂಟಾಗುತ್ತದೆ.

ಅಭ್ಯಾಸ

I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

   1. ತುಷ್ಟಿಗುಣ ದ ಪ್ರಾರಂಭಿಕ _______ ದ ಬಿಂದು.

      ಅ. ವಿತರಣೆ
      ಆ. ಉತ್ಪಾದನೆ

ಇ. ವಿನಿಮಯ
ಈ. ಅನುಭೋಗ

2. ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾದುದರಿಂದ ತುಷ್ಟಿಗುಣವನ್ನು _______ ಎನ್ನಲಾಗುತ್ತದೆ,

ಅ. ಸಾಂದ್ರತೆಯನ್ನು ಹೊಂದಿದೆ
ಆ. ಸಾಪೇಕ್ಷವಾದುದು
ಇ. ನಿರ್ನಾಮವಾದುದು
ಈ. ನಿರ್ಮಾಣವಾದುದು

3. ತುಷ್ಟಿಗುಣವು _______ ಗಳನ್ನು ತೃಪ್ತಿಪಡಿಸಲು ಸರಕಿನಲ್ಲಿರುವ ಶಕ್ತಿ.

ಅ. ಶಕ್ತಿ
ಆ. ಸಾಮರ್ಥ
ಇ. ಮಾನವನ ಬಯಕೆ
ಈ. ಕೊಳ್ಳುವವನನ್ನು.

4. _______ ಮತ್ತು _______ ತುಷ್ಟಿಗುಣಕ್ಕೆ ಅನ್ವಯಿಸುವುದಿಲ್ಲ.

ಅ. ನೈತಿಕತೆ ಮತ್ತು ಮೌಲ್ಯ
ಆ. ಮಾನಸಿಕ ಮತ್ತು ದೈಹಿಕ
ಇ. ಇಚ್ಛೆ ಮತ್ತು ಸಾಮರ್ಥ
ಈ. ಬೇಡಿಕೆ ಮತ್ತು ಪೂರೈಕೆ

5. ಶಿಕ್ಷಕರು ಮತ್ತು ವಕೀಲರಿಂದ ಪಡೆದ ತುಷ್ಟಿಗುಣವು _______ ಆಗಿದೆ.

ಅ. ಮಾಲೀಕತ್ವ
ಆ. ಸೇವೆ
ಇ. ನಮೂನೆ
ಈ. ಯಾವುದು ಅಲ್ಲ.

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ತುಷ್ಟಿಗುಣ ಪದವನ್ನು ಮೊದಲು ಬಳಸಿದವರು. _______
2. ತುಷ್ಟಿಗುಣವನ್ನು _______ ಮೂಲಕ ಅಳತೆ ಮಾಡಲಾಗುತ್ತದೆ.
3. ಮಾರುಕಟ್ಟೆಯಲ್ಲಿನ ಅನುಭೋಗಿ ವರ್ತನೆಯನ್ನು ನಿರ್ಧರಿಸುವಲ್ಲಿ _______ ಪ್ರಮುಖ ಪಾತ್ರ ವಹಿಸುತ್ತದೆ.
4. ತುಷ್ಟಿಗುಣವು _______ ನ ಪದಶಃ ಅರ್ಥವಾಗಿದೆ.
5. ತುಷ್ಟಿಗುಣ ಮತ್ತು ತೃಪ್ತಿ _______ ದ ಎರಡು ಪ್ರಮುಖವಾದ ಅಂಶಗಳು.

III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ತುಷ್ಟಿಗುಣ ಎಂದರೇನು?
2. ತುಷ್ಟಿಗುಣವನ್ನು ಹೇಗೆ ಅಳತೆ ಮಾಡಲಾಗುತ್ತದೆ?
3. ಸ್ವರೂಪ ತುಷ್ಟಿಗುಣಕ್ಕೆ ಎರಡು ಉದಾಹರಣೆ ಕೊಡಿ.
4. ತುಷ್ಟಿಗುಣ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಿದ ಕೆಲವು ಅರ್ಥಶಾಸ್ತ್ರಜ್ಞರನ್ನು ಹೆಸರಿಸಿ.
5. ಬಳಕೆಯಲ್ಲಿನ ಮೌಲ್ಯ ಎಂದರೇನು?

IV. ಈ. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ತುಷ್ಟಿಗುಣವು ಉಪಯೋಗಕ್ಕಿಂತ ಹೇಗೆ ಭಿನ್ನವಾಗಿದೆ?
2. ಸಮಯ ತುಷ್ಟಿಗುಣ ಎಂದರೇನು?
3. ಮಾಲೀಕತ್ವ ತುಷ್ಟಿಗುಣ ಎಂದರೇನು? ಉದಾಹರಣೆ ಕೊಡಿ.
4. ತುಷ್ಟಿಗುಣವು ಸಾಪೇಕ್ಷವಾದುದ್ದು, ಕೆಲವು ಉದಾಹರಣೆಗಳೊಂದಿಗೆ ವಿವರಿಸಿ.
5. ತುಷ್ಟಿಗುಣದ ಐದು ಪ್ರಕಾರಗಳನ್ನು ಪಟ್ಟಿಮಾಡಿ.

V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯದಲ್ಲಿ ಉತ್ತರಿಸಿ.

1. ತುಷ್ಟಿಗುಣದ ಲಕ್ಷಣಗಳನ್ನು ವಿವರಿಸಿ.
2. ತುಷ್ಟಿಗುಣದ ವಿವಿಧ ಪ್ರಕಾರಗಳನ್ನು ವಿವರಿಸಿ.
3. ತುಷ್ಟಿಗುಣದ ಅರ್ಥವನ್ನು ಚರ್ಚಿಸಿರಿ.
4. ಸಮಯ ಮತ್ತು ಸ್ಥಳ ತುಷ್ಟಿಗುಣದ ವ್ಯತ್ಯಾಸವನ್ನು ತಿಳಿಸಿ.
5. ತುಷ್ಟಿಗುಣವು ಬಯಕೆಗಳಿಗೆ ಸಂಬಂಧಿಸಿದ್ದರೂ ತೃಪ್ತಿಗಿಂತ ವಿಭಿನ್ನವಾಗಿದೆ ಹೇಗೆ.

ಯೋಜನಾಕಾರ್ಯ:

1. ವಿವಿಧ ತುಷ್ಟಿಗುಣದ ಪ್ರಕಾರಗಳಿಗೆ ಉದಾಹರಿಸಬಹುದಾದ ವಿವಿಧ ಸರಕುಗಳನ್ನು ಪಟ್ಟಿ ಮಾಡಿರಿ.
2. ಮೇಲಿನ ಪ್ರಶ್ನೆಗಳಲ್ಲಿ ತುಷ್ಟಿಗುಣದ ಲಕ್ಷಣಗಳನ್ನು ಗುರ್ತಿಸಿರಿ.

ಅಧ್ಯಾಯ–7 ಬೇಡಿಕೆ

‘‘ಬೇಡಿಕೆ ಮತ್ತು ಪೂರೈಕೆಗಳು ಒಂದು ಅಡ್ಡತೊಲೆಯ ವಿರುದ್ಧ ದಿಕ್ಕಿನಲ್ಲಿರುವ ಅತೀರೇಕಗಳಾಗಿದ್ದು, ಮೂಲವು ದುಬಾರಿ ಮತ್ತು ಅಗ್ಗದ ಪ್ರಮಾಣವನ್ನು ಅವಲಂಬಿಸಿದ್ದು, ಬೆಲೆಯು ಸಮತೋಲನದ ಬಿಂದುವಾಗಿದ್ದು, ಎಲ್ಲಿ ಒಂದರ ವೇಗವು ನಿಲ್ಲುವುದೋ ಮತ್ತು ಅಲ್ಲಿ ಮತ್ತೊಂದರ ವೇಗ ಪ್ರಾರಂಭವಾಗುವುದು.’’ ಜೆ. ಬಿ. ಸೇ.

ಪೀಠಿಕೆ:

ಬೇಡಿಕೆಯು ಅರ್ಥಶಾಸ್ತ್ರದ ಮೂಲ ಪರಿಕಲ್ಪನೆಗಳಲ್ಲಿ ಒಂದಾಗಿದೆ. ಬಹುತೇಕ ಆರ್ಥಿಕ ಚಟುವಟಿಕೆಗಳು ಬೇಡಿಕೆಯನ್ನು ಅವಲಂಬಿಸಿದೆ. ಇದು ಹೂಡಿಕೆ, ಉದ್ಯೋಗ, ಉತ್ಪನ್ನ, ಬೆಲೆ ಮಟ್ಟ, ಆದಾಯ ಮಟ್ಟ ಇತ್ಯಾದಿಗಳನ್ನು ಉತ್ತೇಜಿಸುತ್ತದೆ. ಪರಿಣಾಮಕಾರಿ ಬೇಡಿಕೆಯು ಆರ್ಥಿಕತೆಯ ಬೆಳವಣಿಗೆ ಮತ್ತು ಅಭಿವೃದ್ದಿಯನ್ನು ಉತ್ತೇಜಿಸುತ್ತದೆ. ಹಾಗಾದರೆ ಬೇಡಿಕೆ ಎಂದರೇನು? ಬೇಡಿಕೆಯ ನಿಯಮವನ್ನು ಹೇಗೆ ಪಡೆಯಲಾಗಿದೆ? ಬೇಡಿಕೆಯ ನಿರ್ಧಾರಕಗಳಾವುವು? ಈ ಅಧ್ಯಾಯದ ಅಧಯನದ ನಂತರ ನೀವು ಈ ಪ್ರಶ್ನೆಗಳಿಗೆ ಉತ್ತರಿಸಲು ಸಾಧವಾಗುವುದರ ಜೊತೆಗೆ ಬೇಡಿಕೆಯ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಬೇಡಿಕೆಯ ಅರ್ಥ:

ಸಾಮಾನ್ಯ ಭಾಷೆಯಲ್ಲಿ ಬೇಡಿಕೆಯನ್ನು ಆಸೆಗೆ ಸಮನಾಗಿ ಪರಿಗಣಿಸಲಾಗುತ್ತದೆ. ಏನನ್ನಾದರೂ ಹೊಂದುವ ಇಚ್ಛೆಯನ್ನು ವ್ಯಕ್ತಪಡಿಸಿದರೆ ಅದನ್ನು ‘ಆಸೆ’ ಎಂದು ಉಲ್ಲೇಖಿಸಬಹುದಾಗಿದೆ. ಕೇವಲ ಇಚ್ಛೆಯೊಂದೇ ಬೇಡಿಕೆಯಾಗುವುದಿಲ್ಲ. ಉದಾಹರಣೆಗೆ ನಿಮಗೆ ಒಂದು ಚಾಕೊಲೇಟ್‍ನ್ನು ತಿನ್ನಲು ಆಸೆ ಇರಬಹುದು. ಆದರೆ ಒಂದು ವೇಳೆ ನೀವು ಚಾಕೊಲೇಟ್‍ನ್ನು ಖರೀದಿಸುವ ಸಾಮರ್ಥ್ಯವನ್ನು ಹೊಂದಿಲ್ಲವಾದರೆ, ಆಸೆಯು ಬೇಡಿಕೆಯಾಗಿ ಪರಿವರ್ತನೆಯಾಗುವುದಿಲ್ಲ. ಆದ್ದರಿಂದ ಅರ್ಥಶಾಸ್ತ್ರದಲ್ಲಿ ಬೇಡಿಕೆಯು ಕೊಂಡುಕೊಳ್ಳುವ ಸಾಮರ್ಥ ಮತ್ತು ಇಚ್ಛೆಯನ್ನು ಹೊಂದಿರುವ ಬಯಕೆಯಾಗಿದೆ. ಆದ್ದರಿಂದ ಅರ್ಥಶಾಸ್ತ್ರದಲ್ಲಿ ಬೇಡಿಕೆ ಎಂದರೆ ಏಕಕಾಲದಲ್ಲಿ ಈ ಮೂರು ಷರತ್ತುಗಳನ್ನು ಈಡೇರಿಸಬೇಕಾಗುತ್ತದೆ. ಅವುಗಳೆಂದರೆ 1) ಒಂದು ಸರಕನ್ನು ಪಡೆಯುವ ಆಸೆ 2) ಸರಕನ್ನು ಕೊಂಡುಕೊಳ್ಳುವ ಸಾಮರ್ಥ್ಯ 3) ಸರಕನ್ನು ಕೊಂಡುಕೊಳ್ಳುವ ಮನಸ್ಸು .

ಸರಕು ಮತ್ತು ಸೇವೆಗಳಲ್ಲಿ ತುಷ್ಟಿಗುಣ ಇರುವುದರಿಂದ ಅವುಗಳಿಗೆ ಬೇಡಿಕೆಯಿರುತ್ತದೆ. ತುಷ್ಟಿಗುಣ ಮತ್ತು ಬೇಡಿಕೆಯ ನಡುವೆ ನೇರ ಸಂಬಂಧವಿದೆ. ಅಂದರೆ ತುಷ್ಟಿಗುಣವು ಹೆಚ್ಚಾಗಿದ್ದರೆ ಬೇಡಿಕೆಯು ಹೆಚ್ಚಾಗಿರುತ್ತದೆ. ಹಾಗೂ ತುಷ್ಟಿಗುಣವು ಕಡಿಮೆಯಿದ್ದರೆ ಬೇಡಿಕೆಯು ಕಡಿಮೆಯಿರುತ್ತದೆ. ಒಂದು ವೇಳೆ ಸರಕಿಗೆ ತುಷ್ಟಿಗುಣ ಇಲ್ಲ ಎಂದಾದರೆ ಆ ಸರಕಿಗೆ ಬೇಡಿಕೆಯು ಇರುವುದಿಲ್ಲ. ಆದುದರಿಂದ ತುಷ್ಟಿಗುಣವು ಬೇಡಿಕೆಯನ್ನು ಆಧರಿಸಿದೆ. ಮುಂದುವರೆದು ಬೇಡಿಕೆಯನ್ನು ಒಂದು ನಿರ್ದಿಷ್ಟ ಬೆಲೆ ಮತ್ತು ಒಂದು ನಿರ್ದಿಷ್ಟ ಸಮಯಕ್ಕೆ ಸಂಬಂಧಿಸಿದಂತೆ ವ್ಯಾಖ್ಯಾನಿಸಲಾಗುತ್ತದೆ. ಏಕೆಂದರೆ ಬೇಡಿಕೆಯು ಬೆಲೆ ಮತ್ತು

ಸಮಯದೊಂದಿಗೆ ಭಿನ್ನವಾಗಿರುತ್ತದೆ. ಆದ್ದರಿಂದ ಬೇಡಿಕೆಯನ್ನು ಒಂದು ನಿರ್ದಿಷ್ಟ ಸಮಯದಲ್ಲಿ, ಒಂದು ನಿರ್ದಿಷ್ಟ ಬೆಲೆಗೆ ಮಾರುಕಟ್ಟೆಯಲ್ಲಿ ಗ್ರಾಹಕರು ಖರೀದಿಸಬಹುದಾದ ಒಂದು ಸರಕಿನ ಪ್ರಮಾಣವೆಂದು ವ್ಯಾಖ್ಯಾನಿಸಲಾಗಿದೆ. ಉದಾಹರಣೆಗೆ ಒಬ್ಬ ವ್ಯಕ್ತಿಯು ಒಂದು ವಾರಕ್ಕೆ ಮೂರು ಕೆ.ಜಿ ಸೇಬುಗಳನ್ನು 100 ರೂಗಳ ಬೆಲೆಯಲ್ಲಿ ಕೊಂಡುಕೊಳ್ಳುತ್ತಾನೆ. ಹಾಗಾಗಿ ಕೊಟ್ಟಂತ ಬೆಲೆಗಳಲ್ಲಿ, ಒಂದು ವಾರಕ್ಕೆ ಆ ವ್ಯಕ್ತಿಯ ಸೇಬಿನ ಬೇಡಿಕೆಯು ಮೂರು ಕೆ. ಜಿ. ಗಳು ಎಂದು ನಾವು ಹೇಳಬಹುದು.

ಬೇಡಿಕೆ ಬಿಂಬಕ:

ಒಂದು ಸರಕಿನ ಬೇಡಿಕೆಯ ಪ್ರಮಾಣವು ಸರಕಿನ ಬೆಲೆ, ಅನುಭೋಗಿಯ ಆದಾಯ, ಸಾಪೇಕ್ಷ ಸರಕುಗಳ ಬೆಲೆಗಳು, ಅನುಭೋಗಿಯ ಅಭಿರುಚಿ ಮತ್ತು ಆದ್ಯತೆಗಳು ಇತ್ಯಾದಿಗಳ ಮೇಲೆ ಅವಲಂಬಿಸಿರುತ್ತದೆ. ಈ ಅಂಶಗಳನ್ನು ಬೇಡಿಕೆಯ ನಿರ್ಧಾರಕಾಂಶಗಳು ಎಂದು ಕರೆಯಲಾಗುತ್ತದೆ. ಒಂದು ವೇಳೆ ಇವುಗಳಲ್ಲಿನ ಯಾವುದೇ ಒಂದು ಅಂಶದಲ್ಲಿ ಬದಲಾವಣೆ ಉಂಟಾದರೆ ಬೇಡಿಕೆಯ ಪ್ರಮಾಣವು ಸಹ ಬದಲಾಗುತ್ತದೆ. ಆದುದರಿಂದ ಬೇಡಿಕೆ ಪ್ರಮಾಣ ಮತ್ತು ಅದರ ನಿರ್ಧಾರಕಾಂಶಗಳ ನಡುವಿನ ಕ್ರಿಯಾವಲಂಬಿ ಸಂಬಂಧವನ್ನು 'ಬೇಡಿಕೆ ಬಿಂಬಕ' ಎಂದು ಕರೆಯಲಾಗುತ್ತದೆ. ಅಂದರೆ ಬೇಡಿಕೆಯ ಪ್ರಮಾಣವು ಬೇಡಿಕೆಯ ನಿರ್ಧಾರಕಾಂಶಗಳನ್ನು ಅವಲಂಬಿಸಿದೆ.

ಬೇಡಿಕೆ ಬಿಂಬಕ: ಬಿಂಬಕವು ಒಂದು ಗಣಿತೀಯ ಪರಿಕಲ್ಪನೆಯಾಗಿದೆ. ಇದು ಅವಲಂಬಿತ ಚಲಕ ಮತ್ತು ಸ್ವತಂತ್ರ ಚಲಕಗಳ ನಡುವಿನ ಕ್ರಿಯಾವಲಂಬಿ ಸಂಬಂಧದ ಒಂದು ಸಾಂಕೇತಿಕ ಹೇಳಿಕೆಯಾಗಿದೆ. ಸ್ವತಂತ್ರ ಚಲಕವು ಸ್ವತಂತ್ರವಾಗಿ ಬದಲಾವಣೆ ಹೊಂದುತ್ತದೆ. ಒಂದು ಚಲಕದಲ್ಲಿನ ಬದಲಾವಣೆಯು ಸ್ವತಂತ್ರ ಚಲಕದ ಬದಲಾವಣೆಯ ಮೇಲೆ ಅವಲಂಬಿಸಿದ್ದರೆ ಅದನ್ನು ಅವಲಂಬಿತ ಚಲಕ ಎಂದು ಕರೆಯಲಾಗುತ್ತದೆ.

ಬೇಡಿಕೆಯ ಬಿಂಬಕದಲ್ಲಿ ಒಂದು ಸರಕಿನ ಬೇಡಿಕೆಯ ಪ್ರಮಾಣವು ಅವಲಂಬಿತ ಚಲಕವಾಗಿರುತ್ತದೆ. ಬೇಡಿಕೆಯ ನಿರ್ಧಾರಕಗಳು ಸ್ವತಂತ್ರ ಚಲಕಗಳಾಗಿವೆ. ಆದ್ದರಿಂದ ಬೇಡಿಕೆಯ ಬಿಂಬಕವನ್ನು ಸಾಂಕೇತಿಕವಾಗಿ ಹೀಗೆ ವ್ಯಕ್ತಪಡಿಸಬಹುದು. ಇಲ್ಲಿ $Qd = f(P, Pr, Y, T \ldots)$. Qd = ಬೇಡಿಕೆಯ ಪ್ರಮಾಣ, P = ಸರಕಿನ ಬೆಲೆ, Pr = ಸಾಪೇಕ್ಷ ಸರಕುಗಳ ಬೆಲೆ, Y = ಅನುಭೋಗಿಯ ಆದಾಯ, T = ಅನುಭೋಗಿಯ ಅಭಿರುಚಿ ಮತ್ತು ಆದ್ಯತೆ.

ಇಲ್ಲಿ ಒಂದು ಸರಕಿನ ಬೆಲೆಯು ಬೇಡಿಕೆಯ ಪ್ರಮುಖ ನಿರ್ಧಾರಕ ಅಂಶವಾಗಿದೆ. ಆದ್ದರಿಂದ ಬೇಡಿಕೆ ಬಿಂಬಕವನ್ನು ಸರಳವಾಗಿ $Qd = f(P)$ ಎಂದು ರಚಿಸಲಾಗಿದೆ.

ಇದನ್ನು Qd ಯು P ಯ ಕ್ರಿಯಾವಲಂಬಿ ಸಂಬಂಧ ಎಂದು ಓದಲಾಗುತ್ತದೆ. ಇಲ್ಲಿ Qd ಮತ್ತು P ಗಳು ಚಲಕಗಳಾಗಿವೆ. ಬೇಡಿಕೆಯ ಪ್ರಮಾಣವು ಸರಕಿನ ಬೆಲೆಯನ್ನು ಅವಲಂಬಿಸಿದೆ. ಆದ್ದರಿಂದ P ಯು ಸ್ವತಂತ್ರ ಚಲಕ ಮತ್ತು Qd ಯು ಅವಲಂಬಿತ ಚಲಕವಾಗಿದೆ.

ಬೇಡಿಕೆಯ ಅನುಸೂಚಿ:

ಬೇಡಿಕೆಯ ಅನುಸೂಚಿಯು ಬೆಲೆ ಮತ್ತು ಬೇಡಿಕೆ ಪ್ರಮಾಣಗಳಲ್ಲಿನ ಏರಿಳಿತಗಳ ನಡುವಿನ ಕ್ರಿಯಾವಲಂಬಿ ಸಂಬಂಧವನ್ನು ವಿವರಿಸುತ್ತದೆ. ಇದು ಒಂದು ನಿರ್ದಿಷ್ಟ

ಸಮಯದಲ್ಲಿ, ವಿವಿಧ ಬೆಲೆಗಳಲ್ಲಿ ಅನುಭೋಗಿಯು ಕೊಂಡುಕೊಳ್ಳುವ ಒಂದು ಸರಕಿನ ಪ್ರಮಾಣವನ್ನು ಒಂದು ಕೋಷ್ಟಕದಲ್ಲಿ ಪ್ರತಿನಿಧಿಸುತ್ತದೆ. ಒಬ್ಬ ಅನುಭೋಗಿಯು ಮಾರುಕಟ್ಟೆಯಲ್ಲಿ ಈರುಳ್ಳಿ ಖರೀದಿಸಲು ಬಯಸುತ್ತಾನೆಂದು ಭಾವಿಸೋಣ. ಈ ಕೆಳಗಿನ ಕೋಷ್ಟಕವು ಅನುಭೋಗಿಯು ವಿವಿಧ ಬೆಲೆಗಳಲ್ಲಿ ಈರುಳ್ಳಿಯನ್ನು ಕೊಂಡುಕೊಳ್ಳುವ ಈರುಳ್ಳಿಯ ಬೇಡಿಕೆ ಅನುಸೂಚಿಯನ್ನು ತೋರಿಸುತ್ತದೆ.

ವೈಯಕ್ತಿಕ ಬೇಡಿಕೆ ಅನುಸೂಚಿ	
ಈರುಳ್ಳಿಯ ಬೆಲೆ (ಪ್ರತಿ ಕೆ. ಜಿ. ಗೆ ರೂ.)	ಈರುಳ್ಳಿಯ ಬೇಡಿಕೆ (ಕೆ. ಜಿ. ಗಳಲ್ಲಿ)
4	12
6	10
8	8
10	6
12	4

ಈ ಮೇಲಿನ ವೈಯಕ್ತಿಕ ಬೇಡಿಕೆ ಅನುಸೂಚಿಯು ವೈಯಕ್ತಿಕ ಅನುಭೋಗಿಯು ಈರುಳ್ಳಿಗಾಗಿ ಸಲ್ಲಿಸುವ ಬೇಡಿಕೆ ಪ್ರಮಾಣವನ್ನು ಮತ್ತು ಬೆಲೆಯನ್ನು ತೋರಿಸುತ್ತದೆ. ಪ್ರತಿ ಕೆ. ಜಿ. ಯ ಈರುಳ್ಳಿಯ ಬೆಲೆಯು 4 ರೂಪಾಯಿಗಳು ಇದ್ದಾಗ ಬೇಡಿಕೆಯ ಪ್ರಮಾಣವು 12 ಕೆ. ಜಿ. ಗಳಾಗಿವೆ. ಒಂದು ವೇಳೆ ಬೆಲೆಯು 6 ರೂಪಾಯಿಗಳಿಗೆ ಹೆಚ್ಚಳಗೊಂಡರೆ, ಬೇಡಿಕೆಯ ಪ್ರಮಾಣವು 10 ಕೆ. ಜಿ. ಗಳಿಗೆ ಕಡಿಮೆಗೊಳ್ಳುತ್ತದೆ. ಈರುಳ್ಳಿಯ ಬೆಲೆಯು ಕ್ರಮವಾಗಿ 8, 10 ಮತ್ತು 12 ರೂಪಾಯಿಗಳಿಗೆ ಹೆಚ್ಚಳಗೊಂಡಾಗ ಬೇಡಿಕೆಯ ಪ್ರಮಾಣವು 8, 6 ಮತ್ತು 4 ಕೆ. ಜಿ. ಗಳಿಗೆ ಕಡಿಮೆಗೊಳ್ಳುತ್ತದೆ. ಇದು ಅನುಭೋಗಿಯು ಕಡಿಮೆ ಬೆಲೆಗಳಲ್ಲಿ ಅಧಿಕ ಸರಕುಗಳನ್ನು ಮತ್ತು ಅಧಿಕ ಬೆಲೆಗಳಲ್ಲಿ ಕಡಿಮೆ ಸರಕುಗಳನ್ನು ಕೊಂಡುಕೊಳ್ಳುತ್ತಾನೆ ಎಂಬುದನ್ನು ತೋರಿಸುತ್ತದೆ. ಅಂದರೆ ಸರಕುಗಳ ಬೆಲೆಗಳು ಹೆಚ್ಚಳಗೊಂಡರೆ ಸರಕುಗಳ ಬೇಡಿಕೆಯು ಕಡಿಮೆಗೊಳ್ಳುತ್ತದೆ. ಹಾಗೆಯೇ ಸರಕುಗಳ ಬೆಲೆಗಳು ಕಡಿಮೆಗೊಂಡರೆ ಸರಕುಗಳ ಬೇಡಿಕೆಯು ಅಧಿಕಗೊಳ್ಳುತ್ತದೆ. ಆದ್ದರಿಂದ ಬೆಲೆ ಮತ್ತು ಬೇಡಿಕೆ ಪ್ರಮಾಣಗಳ ನಡುವೆ ವಿರುದ್ಧ ಸಂಬಂಧವಿರುತ್ತದೆ. ಇಲ್ಲಿ ಅನುಭೋಗಿಯು ಕೊಂಡುಕೊಳ್ಳುವುದರ ಮೇಲಿನ ಎಲ್ಲಾ ಇತರೆ ಬೇಡಿಕೆ ನಿರ್ಧಾರಕಗಳ ಪ್ರಭಾವನ್ನು ನಾವು ನಿರ್ಲಕ್ಷಿಸಬೇಕು.


ಬೇಡಿಕೆಯ ನಿಯಮ:

ಬೇಡಿಕೆಯ ನಿಯಮವು ಒಂದು ಸರಕಿನ ಬೆಲೆ ಮತ್ತು ಇದರ ಬೇಡಿಕೆ ಪ್ರಮಾಣದ ನಡುವಿನ ಸಂಬಂಧವನ್ನು ವಿವರಿಸುತ್ತದೆ. ಇದು ಬೇಡಿಕೆಯು ಬೆಲೆಯೊಂದಿಗೆ ವಿರುದ್ಧವಾಗಿ ಬದಲಾಗುತ್ತದೆ ಎಂದು ಹೇಳುತ್ತದೆ. ಒಂದು ವೇಳೆ ಈರುಳ್ಳಿಯ ಬೆಲೆಯು ಕಡಿಮೆಗೊಂಡರೆ ಅದರ ಬೇಡಿಕೆಯು ಹೆಚ್ಚಾಗುತ್ತದೆ ಮತ್ತು ಈರುಳ್ಳಿಯ ಬೆಲೆಯು ಹೆಚ್ಚಳವಾದರೆ ಅದರ ಬೇಡಿಕೆಯು ಕಡಿಮೆಯಾಗುತ್ತದೆ. ಬೇಡಿಕೆಯ ನಿಯಮವು ಬೆಲೆ ಮತ್ತು ಬೇಡಿಕೆ ಪ್ರಮಾಣಗಳ ನಡುವಿನ ವಿರುದ್ಧ ಸಂಬಂಧವನ್ನು ಸೂಚಿಸುತ್ತದೆ. ಆದ್ದರಿಂದ ಬೇಡಿಕೆಯ ನಿಯಮವು "ಇತರೆ ಅಂಶಗಳನ್ನು ಸ್ಥಿರವಾಗಿರಿಸಿದಾಗ ಸರಕಿನ ಬೆಲೆಗಳು ಕಡಿಮೆಯಾದಂತೆ ಅದರ ಬೇಡಿಕೆಯು ಹೆಚ್ಚಾಗುತ್ತದೆ ಮತ್ತು ಬೆಲೆಗಳು ಹೆಚ್ಚಾದಂತೆ ಸರಕುಗಳ ಬೇಡಿಕೆಯು ಕಡಿಮೆಗೊಳ್ಳುತ್ತದೆ" ಎಂಬುದನ್ನು ತಿಳಿಸುತ್ತದೆ. ಅಂದರೆ ಕಡಿಮೆ ಬೆಲೆ ಇದ್ದಾಗ, ಸರಕುಗಳಿಗೆ

ಹೆಚ್ಚಿನ ಬೇಡಿಕೆ ಇರುತ್ತದೆ. ಹಾಗೆಯೇ ಹೆಚ್ಚಿನ ಬೆಲೆ ಇದ್ದಾಗ ಸರಕುಗಳಿಗೆ ಕಡಿಮೆ ಬೆಲೆ ಇರುತ್ತದೆ.

ಬೇಡಿಕೆಯ ನಿಯಮವು 'ಇತರೆ ಸಂಗತಿಗಳು ಸ್ಥಿರವಾಗಿರುವಾಗ' ಎಂಬ ಸ್ಥಿತಿಯ ಮೇಲೆ ಆಧಾರಿತವಾಗಿದೆ. ಇಲ್ಲಿ ನಾವು ಅನುಭೋಗಿಯ ಆದಾಯ, ಸಾಪೇಕ್ಷ ಸರಕುಗಳ ಬೆಲೆಗಳು, ಅನುಭೋಗಿಯ ಅಭಿರುಚಿ ಮತ್ತು ಆದ್ಯತೆ ಇತ್ಯಾದಿಗಳು ಸ್ಥಿರವಾಗಿರುತ್ತವೆ ಎಂದು ಕಲ್ಪಿಸಿಕೊಳ್ಳಲಾಗಿದೆ.

ಬೇಡಿಕೆಯ ನಿಯಮವನ್ನು ಒಂದು ಬೇಡಿಕೆಯ ರೇಖೆಯ ಸಹಾಯದಿಂದ ವಿವರಿಸಬಹುದು. ಬೇಡಿಕೆಯ ಅನುಸೂಚಿಯ ರೇಖಾಚಿತ್ರ ನಿರೂಪಣೆಗೆ 'ಬೇಡಿಕೆ ರೇಖೆ' ಎಂದು ಕರೆಯಲಾಗುತ್ತದೆ.



ಬೇಡಿಕೆ ರೇಖಾ ಚಿತ್ರ: ಇಲ್ಲಿ ಈರುಳ್ಳಿಯ ಬೇಡಿಕೆ ಪ್ರಮಾಣ ಮತ್ತು ಈರುಳ್ಳಿಯ ಬೆಲೆಯನ್ನು ರೇಖಾಚಿತ್ರದ ಮೂಲಕ ತೋರಿಸಿದ್ದಾರೆ. ಈ ಮೇಲಿನ ರೇಖಾಚಿತ್ರದಲ್ಲಿ, ನಾವು oy ಅಕ್ಷದಲ್ಲಿ ಈರುಳ್ಳಿಯ ಬೆಲೆಯನ್ನು ಮತ್ತು ox ಅಕ್ಷದಲ್ಲಿ ಈರುಳ್ಳಿಯ ಬೇಡಿಕೆಯ ಪ್ರಮಾಣವನ್ನು ಮಾಪನ ಮಾಡಲಾಗಿದೆ. DD ರೇಖೆಯು ಬೇಡಿಕೆಯ ರೇಖೆಯಾಗಿದೆ. ಬೆಲೆ ಮತ್ತು ಬೇಡಿಕೆ ಪ್ರಮಾಣದ ನಡುವಿನ ವಿರುದ್ಧ ಸಂಬಂಧದ ಕಾರಣ ಬೇಡಿಕೆ ರೇಖೆಯು ಎಡದಿಂದ ಬಲಗಡೆಗೆ ಕೆಳಮುಖ ಇಳಿಜಾರನ್ನು ಹೊಂದಿದೆ.

ಬೇಡಿಕೆಯನ್ನು ನಿರ್ಧರಿಸುವ ಅಂಶಗಳು:

ಬೇಡಿಕೆಯ ಪ್ರಮಾಣವು ಹಲವಾರು ಅಂಶಗಳಿಂದ ನಿರ್ಧಾರವಾಗುತ್ತದೆ. ಇಂತಹ ಅಂಶಗಳನ್ನು ಬೇಡಿಕೆಯ ನಿರ್ಧಾರಕಾಂಶಗಳು ಎಂದು ಕರೆಯಲಾಗುತ್ತದೆ. ಅವುಗಳೆಂದರೆ

1. ಸರಕಿನ ಬೆಲೆ: ಬೆಲೆಯು ಬೇಡಿಕೆಯನ್ನು ನಿರ್ಧರಿಸುವ ಅತ್ಯಂತ ಪ್ರಮುಖ ನಿರ್ಧಾರಕಾಂಶವಾಗಿದೆ. ಒಂದು ಸರಕಿನ ಬೆಲೆಯು ಹೆಚ್ಚಾದರೆ ಆ ಸರಕಿನ ಬೇಡಿಕೆಯು ಕಡಿಮೆಯಾಗುತ್ತದೆ ಮತ್ತು ಬೆಲೆಗಳು ಇಳಿಕೆಯಾದರೆ ಬೇಡಿಕೆಯು ಹೆಚ್ಚಾಗುತ್ತದೆ.

2. ಅನುಭೋಗಿಯ ಆದಾಯ: ಅನುಭೋಗಿಯ ಆದಾಯವು ಬೇಡಿಕೆಯನ್ನು ನಿರ್ಧರಿಸುವ ಮತ್ತೊಂದು ಪ್ರಮುಖ ಅಂಶವಾಗಿದೆ. ಒಂದು ಸರಕಿನ ಬೇಡಿಕೆಯು ಅನುಭೋಗಿಯ ಆದಾಯವನ್ನು ಅವಲಂಬಿಸಿದೆ. ಸಾಮಾನ್ಯವಾಗಿ, ಆದಾಯದ ಹೆಚ್ಚಳದೊಂದಿಗೆ ಬೇಡಿಕೆಯು ಹೆಚ್ಚಾಗುತ್ತದೆ ಮತ್ತು ಆದಾಯದ ಕಡಿತದೊಂದಿಗೆ ಬೇಡಿಕೆಯು ಕಡಿಮೆಯಾಗುತ್ತದೆ.

3. ಸಾಪೇಕ್ಷ ಸರಕುಗಳ ಬೆಲೆಗಳು: ಬದಲಿ ಸರಕುಗಳು ಮತ್ತು ಪೂರಕ ಸರಕುಗಳ ಬೆಲೆಗಳಲ್ಲಿನ ಬದಲಾವಣೆಯ ಕಾರಣದಿಂದಾಗಿ ಬೇಡಿಕೆಯು ಬದಲಾವಣೆಗೊಳ್ಳುತ್ತದೆ. ಉದಾಹರಣೆಗೆ ಕಾಫಿಯ ಬೆಲೆಯಲ್ಲಿನ ಹೆಚ್ಚಳದ ಕಾರಣದಿಂದಾಗಿ ಟೀ ನ ಬೇಡಿಕೆಯಲ್ಲಿ ಹೆಚ್ಚಳವಾಗುತ್ತದೆ. ಹಾಗೆಯೇ ಪೆಟ್ರೋಲ್ ಬೆಲೆಯಲ್ಲಿನ ಇಳಿಕೆಯ ಕಾರಣದಿಂದ ಬೈಕ್‌ಗಳ ಬೇಡಿಕೆಯು ಹೆಚ್ಚಾಗುತ್ತದೆ.

4. ಅಭಿರುಚಿ ಮತ್ತು ಆದ್ಯತೆ: ಅನುಭೋಗಿಗಳ ಅಭಿರುಚಿ, ಆದ್ಯತೆ, ಪದ್ಧತಿಗಳು, ಹವ್ಯಾಸ, ಫ್ಯಾಷನ್ ಇತ್ಯಾದಿಗಳು ಮಾರುಕಟ್ಟೆಯ ಬೇಡಿಕೆಯನ್ನು ಪ್ರಭಾವಿಸುತ್ತವೆ. ಉದಾಹರಣೆಗೆ, ಒಂದು ವೇಳೆ ಜನರು ಒಂದು ನಿರ್ದಿಷ್ಟ ಬ್ರಾಂಡ್‌ನ ಟೂಥ್‌ಪೇಸ್ಟ್‌ಗೆ ಆದ್ಯತೆ ನೀಡಿದರೆ ಅದರ ಬೇಡಿಕೆಯು ಹೆಚ್ಚಾಗುತ್ತದೆ.

5. ಜನಸಂಖ್ಯೆ: ಜನಸಂಖ್ಯೆಯ ಗಾತ್ರವು ಹೆಚ್ಚಳವಾದಂತೆ ಸರಕು ಮತ್ತು ಸೇವೆಗಳ ಬೇಡಿಕೆಯು ಸಹ ಹೆಚ್ಚಾಗುತ್ತದೆ ಮತ್ತು ಪ್ರತಿಕ್ರಮವಾಗಿರುತ್ತದೆ.

6. ಆದಾಯದಲ್ಲಿನ ವಿತರಣೆ: ಜನರ ನಡುವೆ ಆದಾಯ ಮತ್ತು ಸಂಪತ್ತಿನ ಸಮಾನ ವಿತರಣೆಯಾಗಿದ್ದರೆ ಸರಕುಗಳು ಮತ್ತು ಸೇವೆಗಳ ಬೇಡಿಕೆಯ ಹೆಚ್ಚಳಕ್ಕೆ ಕಾರಣವಾಗುತ್ತದೆ. ಏಕೆಂದರೆ, ಒಟ್ಟಾರೆ ಜನರ ಕೊಂಡುಕೊಳ್ಳುವ ಶಕ್ತಿಯು ಹೆಚ್ಚಾಗುವುದು ಮತ್ತು ಇದರಿಂದಾಗಿ ಸರಕುಗಳ ಬೇಡಿಕೆಯಲ್ಲೂ ಸಹ ಹೆಚ್ಚಳವಾಗುತ್ತದೆ.

7. ಜಾಹೀರಾತು: ಪ್ರಸ್ತುತ, ಜಾಹೀರಾತು ಬೇಡಿಕೆಯ ಮೇಲೆ ಪ್ರಭಾವ ಬೀರುವ ಒಂದು ಪ್ರಮುಖ ಅಂಶವಾಗಿದೆ. ಇದು ಅನುಭೋಗಿಯ ಬೇಡಿಕೆಯನ್ನು ಪರಿವರ್ತಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ.

8. ತೆರಿಗೆ ನೀತಿ: ಸರ್ಕಾರದ ತೆರಿಗೆ ನೀತಿಯು ಕೆಲವು ಸರಕುಗಳಿಗೆ ಬೇಡಿಕೆಯನ್ನು ಉತ್ತೇಜಿಸುತ್ತದೆ ಅಥವಾ ಬೇಡಿಕೆಯನ್ನು ನಿಗ್ರಹಿಸುತ್ತದೆ. ಅಧಿಕ ದರದ ತೆರಿಗೆಗಳಿದ್ದರೆ ಬೇಡಿಕೆಯು ಕಡಿಮೆಯಿರುವುದು ಮತ್ತು ಕಡಿಮೆ ತೆರಿಗೆ ದರವಿದ್ದರೆ ಬೇಡಿಕೆಯು ಹೆಚ್ಚಾಗುವುದು.

9. ಹವಾಮಾನ ಸ್ಥಿತಿ: ಹವಾಮಾನ ಸ್ಥಿತಿಯು ಸಹ ಕೆಲವು ಸರಕುಗಳಿಗೆ ಬೇಡಿಕೆಯನ್ನು ಉತ್ತೇಜಿಸುತ್ತದೆ. ಬೇಸಿಗೆಯ ಅವಧಿಯಲ್ಲಿ ಎಳನೀರು, ರಾಗಿ ಮಾಲ್ಟ್, ಮಜ್ಜಿಗೆ ಇತ್ಯಾದಿ ಸರಕುಗಳಿಗೆ ಹೆಚ್ಚಿನ ಬೇಡಿಕೆಯಿರುತ್ತದೆ. ಹಾಗೆಯೇ, ಚಳಿಗಾಲದಲ್ಲಿ ಕಾಫಿ, ಟೀನಂತಹ ಪಾನೀಯ, ಇತ್ಯಾದಿಗಳಿಗೆ ಹೆಚ್ಚಿನ ಬೇಡಿಕೆಯಿರುತ್ತದೆ.

10. ಸಾಲ ಸೌಲಭ್ಯ: ಬ್ಯಾಂಕುಗಳು ಅನುಭೋಗಿಗಳಿಗೆ ಸುಲಭವಾಗಿ ಸಾಲ ಸೌಲಭ್ಯಗಳನ್ನು ಒದಗಿಸಿದರೆ, ಅನುಭೋಗಿಗಳು ಹೆಚ್ಚಿನ ಸರಕುಗಳು ಮತ್ತು ಸೇವೆಗಳನ್ನು ಕೊಳ್ಳಲು ಬಯಸುತ್ತಾರೆ. ಹಾಗಾಗಿ ಸಾಲ ಸೌಲಭ್ಯಗಳು ಸಹ ಬೇಡಿಕೆಯ ಪ್ರಮಾಣವನ್ನು ಪ್ರಭಾವಿಸುತ್ತವೆ. ಹೀಗೆ, ಬೇಡಿಕೆಯ ಪ್ರಮಾಣವನ್ನು ಹಲವು ಅಂಶಗಳು ನಿರ್ಧರಿಸುತ್ತವೆ. ಸಂಪ್ರದಾಯ, ಸಾಮಾಜಿಕ ಮತ್ತು ರಾಜಕೀಯ ಅಂಶಗಳು ಸಹ ಬೇಡಿಕೆಯನ್ನು ಪ್ರಭಾವಿಸುತ್ತವೆ.

ಅಭ್ಯಾಸ

I. **ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಏನನ್ನಾದರೂ ಹೊಂದುವ ಇಚ್ಛೆಯನ್ನು ವ್ಯಕ್ತಪಡಿಸಿದರೆ ಅದನ್ನು ಎಂದು ________ ಉಲ್ಲೇಖಿಸಬಹುದಾಗಿದೆ

ಅ. ಆಸೆ
ಆ. ಕುತೂಹಲ
ಇ. ಸ್ಥಿತಿ
ಈ. ಮೇಲಿನ ಯಾವುದೂ ಅಲ್ಲ

2. ________ ಬೆಲೆ ಮತ್ತು ಬೇಡಿಕೆ ಪ್ರಮಾಣಗಳಲ್ಲಿನ ಏರಿಳಿತಗಳ ನಡುವಿನ ಕ್ರಿಯಾವಲಂಬಿ ಬಂಧವನ್ನು ವಿವರಿಸುತ್ತದೆ.

ಅ. ಆಸೆ
ಆ. ಬೇಡಿಕೆ ಅನುಸೂಚಿ
ಇ. ತುಷ್ಟಿಗುಣ
ಈ. ಮೇಲಿನ ಯಾವುದೂ ಅಲ್ಲ

3. ಈರುಳ್ಳಿಯ ಬೆಲೆಯು ಇಳಿಕೆಯಾದರೆ, ಅದರ ಬೇಡಿಕೆಯ ಪ್ರಮಾಣವು _______ ಆಗುತ್ತದೆ.

ಅ. ಇಳಿಕೆ
ಆ. ಬದಲಾವಣೆಯಿಲ್ಲ
ಇ. ಹೆಚ್ಚಳ
ಈ. ಮೇಲಿನ ಯಾವುದೂ ಅಲ್ಲ

4. ಅನುಭೋಗಿಯ ಆದಾಯವು ಹೆಚ್ಚಳಗೊಂಡರೆ, ಅವರ ಬೇಡಿಕೆಯ ಪ್ರಮಾಣವು _______ ಆಗುತ್ತದೆ.

ಅ. ಹೆಚ್ಚಳ
ಆ. ಬದಲಾವಣೆಯಿಲ್ಲ
ಇ. ಇಳಿಕೆ
ಈ. ಮೇಲಿನ ಯಾವುದೂ ಅಲ್ಲ

5. ಬೇಡಿಕೆಯ ಅನುಸೂಚಿಯು ಬೇಡಿಕೆಯನ್ನು _______ ರೂಪದಲ್ಲಿ ಪ್ರತಿನಿಧಿಸುತ್ತದೆ.

ಅ. ಕೋಷ್ಟಕ
ಆ. ರೇಖಾಚಿತ್ರ
ಇ. ಚಿತ್ರರೂಪ
ಈ. ಮೇಲಿನ ಯಾವುದೂ ಅಲ್ಲ

II. **ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.**

1. ಸರಕುಗಳು ಮತ್ತು ಸೇವೆಗಳಿಗೆ _______ ಇರುವುದರಿಂದ ಅವುಗಳಿಗೆ ಬೇಡಿಕೆಯಿರುತ್ತದೆ.
2. ಬೇಡಿಕೆಯ ನಿಯಮವು ______ ಸ್ಥಿತಿಯ ಮೇಲೆ ಆಧಾರಿತವಾಗಿದೆ.
3. ಬೇಡಿಕೆಯ ಪ್ರಮಾಣವನ್ನು ನಿರ್ಧರಿಸುವ ಅಂಶಗಳಲ್ಲಿ ಆರ್ಥಿಕ, ಸಂಪ್ರದಾಯ, ರಾಜಕೀಯ _______ಮತ್ತು ಅಂಶಗಳು ಪ್ರಮುಖವಾದವು.
4. ಅಧಿಕ ದರದ ತೆರಿಗೆಗಳಿದ್ದರೆ ಸರಕುಗಳ ಬೇಡಿಕೆಯು _______ ಆಗುತ್ತದೆ.
5. ಪೆಟ್ರೋಲ್ ಬೆಲೆಯಲ್ಲಿನ ಇಳಿಕೆಯ ಕಾರಣದಿಂದ ಬೈಕ್‌ಗಳ ಬೇಡಿಕೆಯು _______

III. **ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಆಸೆ ಎಂದರೇನು?
2. ಸರಕುಗಳು ಮತ್ತು ಸೇವೆಗಳಿಗೆ ಬೇಡಿಕೆಯನ್ನು ಯಾವುದು ಸೃಷ್ಟಿಸುತ್ತದೆ?
3. ಬೆಲೆ ಮತ್ತು ಬೇಡಿಕೆ ಪ್ರಮಾಣದ ನಡುವಿನ ಸಂಬಂಧವೇನು?

4. ಬೇಡಿಕೆಯ ಮೇಲಿನ ಹವಾಮಾನ ಸ್ಥಿತಿಯ ಪರಿಣಾಮ ತೋರಿಸುವ ಉದಾಹರಣೆ ಕೊಡಿ.
5. ಜನಸಂಖ್ಯೆಯು ಬೇಡಿಕೆಯನ್ನು ಹೇಗೆ ಪ್ರಭಾವಿಸುತ್ತದೆ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಅರ್ಥಶಾಸ್ತ್ರದಲ್ಲಿ ಬೇಡಿಕೆಯಾಗಲು ಏಕ ಕಾಲದಲ್ಲಿ ಪೂರೈಸಬೇಕಾದ ಷರತ್ತುಗಳು ಯಾವುವು?
2. ಬೇಡಿಕೆ ಬಿಂಬಕವನ್ನು ವಿವರಿಸಿ.
3. ಬೇಡಿಕೆ ಅನುಸೂಚಿ ಎಂದರೇನು?
4. ತುಷ್ಟಿಗುಣ ಮತ್ತು ಬೇಡಿಕೆಯ ನಡುವಿನ ಸಂಬಂಧವೇನು?
5. ಸಾಲ ಸೌಲಭ್ಯಗಳು ಬೇಡಿಕೆಯನ್ನು ಹೇಗೆ ಪ್ರಭಾವಿಸುತ್ತದೆ?

V. **ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1. ಬೇಡಿಕೆಯನ್ನು ನಿರ್ಧರಿಸುವ ಷರತ್ತುಗಳನ್ನು ಉದಾಹರಣೆಯೊಂದಿಗೆ ವಿವರಿಸಿ.
2. ಬೇಡಿಕೆಯ ಅರ್ಥವನ್ನು ಒಂದು ಉದಾಹರಣೆಯ ಸಹಾಯದಿಂದ ವಿವರಿಸಿ.
3. ಬೇಡಿಕೆಯ ನಿಯಮವನ್ನು ರೇಖಾ ಚಿತ್ರದ ಮೂಲಕ ವಿವರಿಸಿ.
4. ಬೇಡಿಕೆ ಅನುಸೂಚಿಯ ಮೇಲೆ ಸಂಕ್ಷಿಪ್ತವಾಗಿ ಟಿಪ್ಪಣಿ ಬರೆಯಿರಿ.
5. ಬೇಡಿಕೆಯನ್ನು ಪ್ರಭಾವಿಸುವ ವಿವಿಧ ಅಂಶಗಳನ್ನು ಉಲ್ಲೇಖಿಸಿರಿ.

ನಿಯೋಜಿತ ಕಾರ್ಯ:

1. ನೀವು ಖರೀದಿಸಲು ಇಚ್ಛಿಸುವ ಸರಕುಗಳನ್ನು ಪಟ್ಟಿ ಮಾಡಿರಿ.
2. ನಿಮ್ಮ ಜಿಲ್ಲೆಯಲ್ಲಿ ಜನರ ಅಭಿರುಚಿಯಲ್ಲಿನ ಬದಲಾವಣೆಯ ಕಾರಣದಿಂದಾಗಿ ಕೆಲವು ಸರಕುಗಳ ಬೇಡಿಕೆಯಲ್ಲಾದ ಬದಲಾವಣೆಯ ಬಗ್ಗೆ ಮಾಹಿತಿ ಸಂಗ್ರಹಿಸಿ ಬರೆಯಿರಿ.

ಅಧ್ಯಾಯ-8 ಪೂರೈಕೆ

''ಪೂರೈಕೆಯು ತನ್ನ ಬೇಡಿಕೆಯನ್ನು ತಾನೇ ಸೃಷ್ಟಿಸಿಕೊಳ್ಳುತ್ತದೆ.'' ಜೆ. ಬಿ. ಸೇ.

''ಪೂರೈಕೆಯು ಯಾವಾಗಲು ಬೇಡಿಕೆಯ ನೆರಳಿನಂತೆ ಬರುತ್ತದೆ.'' —-ರಾಬರ್ಟ್ ಕಾಲಿಯರ್

ಪೀಠಿಕೆ:

ಸರಕು ಮತ್ತು ಸೇವೆಗಳನು ಬೇಡಿಕೆಗೆ ಅನುಗುಣವಾಗಿ ಅನುಭೋಗಿಗಳ ಅನುಭೋಗಕ್ಕಾಗಿ ಒದಗಿಸಬೇಕಾಗುತ್ತದೆ. ಸರಕು ಮತ್ತು ಸೇವೆಗಳನ್ನು ಒದಗಿಸುವ ಈ ಕಾರ್ಯವು ಸರಕು ಮತ್ತು ಸೇವೆಗಳ ಉತ್ಪಾದನೆ ಮತ್ತು ಮಾರಾಟವನ್ನು ಒಳಗೊಂಡಿರುತ್ತದೆ. ಸರಕು ಮತ್ತು ಸೇವೆಗಳ ಉತ್ಪಾದನೆ ಮತ್ತು ಮಾರಾಟ ವೆಚ್ಚವನ್ನು ಒಳಗೊಂಡ ಉತ್ಪಾದಕರು ಅಥವಾ ಮಾರಾಟಗಾರರು ಅವುಗಳನ್ನು ನಿಗದಿತ ಬೆಲೆಗೆ ಮಾರಾಟ ಮಾಡಿ ಪ್ರತಿಫಲವನ್ನು ಅಪೇಕ್ಷಿಸುತ್ತಾರೆ. ಹಾಗಾದರೆ ಸರಕು ಮತ್ತು ಸೇವೆಗಳನು ಒದಗಿಸುವ ಪ್ರಕ್ರಿಯೆಗೆ ಏನೆನ್ನಲಾಗುವುದು? ಪೂರೈಕೆಯ ನಿರ್ಧಾರಕಗಳಾವುವು? ಪೂರೈಕೆಯ ಬಿಂಬಕ ಎಂದರೇನು? ಪೂರೈಕೆಯ ಅನುಸೂಚಿ ಎಂದರೇನು? ಪೂರೈಕೆಯ ನಿಯಮ ಎಂದರೇನು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುತ್ತಾ ಪೂರೈಕೆಯ ಇತರೆ ಪರಿಕಲ್ಪನೆಗಳನ್ನು ತಿಳಿಯುವುದು ಈ ಅಧ್ಯಾಯದ ಪ್ರಮುಖ ಉದ್ದೇಶವಾಗಿದೆ.

ಪೂರೈಕೆಯ ಅರ್ಥ:

ಪೂರೈಕೆಯು ಅನುಭೋಗಿಗಳಿಗೆ ಮಾರುಕಟ್ಟೆಯಲ್ಲಿ ಲಭ್ಯವಿರುವ ನಿರ್ದಿಷ್ಟ ಸರಕು ಮತ್ತು ಸೇವೆಗಳ ಒಟ್ಟು ಪ್ರಮಾಣವನ್ನು ತಿಳಿಸುವ ಮೂಲಭೂತ ಪರಿಕಲ್ಪನೆಯಾಗಿದೆ. ಅನುಭೋಗಿಗಳ ಬೇಡಿಕೆಗೆ ಅನುಗುಣವಾಗಿ ಉತ್ಪಾದಕರು ಸರಕು ಮತ್ತು ಸೇವೆಗಳನ್ನು ಒದಗಿಸುತ್ತಾರೆ. ಉತ್ಪಾದಿಸಿದ ಸರಕು ಮತ್ತು ಸೇವೆಗಳನ್ನು ನಿರ್ದಿಷ್ಟ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತದೆ. ಆದ್ದರಿಂದ ಒಂದು ನಿರ್ದಿಷ್ಟ ಸಮಯದಲ್ಲಿ ಒಂದು ನಿರ್ದಿಷ್ಟ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಾಟಗಾರ ಮಾರಾಟ ಮಾಡುವ ಸರಕುಗಳ ಪ್ರಮಾಣವನ್ನು 'ಪೂರೈಕೆ' ಎನ್ನಲಾಗುತ್ತದೆ. ಒಂದು ನಿರ್ದಿಷ್ಟ ಸಮಯದಲ್ಲಿ ಉತ್ಪಾದಕರು ಎಷ್ಟು ಪ್ರಮಾಣದಲ್ಲಿ ಸರಕುಗಳನ್ನು ಮಾರಾಟ ಮಾಡಲು ಇಚ್ಛಿಸುತ್ತಾರೆ ಎಂದು ಪೂರೈಕೆ ತಿಳಿಸುತ್ತದೆ.

ಪೂರೈಕೆ ಬಿಂಬಕ:

ಪೂರೈಕೆ ಪ್ರಮಾಣ ಹಾಗು ಪೂರೈಕೆ ನಿರ್ಧಾರಕಗಳ ನಡುವಿನ ಸಂಬಂಧವನ್ನು 'ಪೂರೈಕೆ ಬಿಂಬಕ' ಎನ್ನಲಾಗುತ್ತದೆ. ಉತ್ಪಾದಕರು ಸರಕುಗಳನ್ನು ಉತ್ಪಾದಿಸಿ ಮಾರಾಟಮಾಡುವ ಮೊದಲು ಆ ಸರಕುಗಳ ಉತ್ಪಾದನೆ ಮತ್ತು ಮಾರಾಟವನ್ನು ನಿರ್ಧರಿಸುವ ಅಂಶಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಪೂರೈಕೆ ಬಿಂಬಕವು ಉತ್ಪಾದಕರಿಗೆ ಪೂರೈಕೆಯ ನಿರ್ಧಾರಕಾಂಶಗಳನ್ನು ಗುರುತಿಸಿ ಅವರು ಮಾರಬಹುದಾದ ಸರಕಿನ ಪ್ರಮಾಣವನ್ನು ತಿಳಿಸುತ್ತದೆ. ಉತ್ಪಾದಕರು ಚಟುವಟಿಕೆಗಳಲ್ಲಿ ಸೂಕ್ತ ಬದಲಾವಣೆ ಮಾಡಲು ನೆರವಾಗುತ್ತದೆ.

ಪೂರ್ೈಕೆ ಬಿಂಬಕ

ಸಾಂಕೇತಿಕವಾಗಿ ಪೂರ್ೈಕೆ ಬಿಂಬಕವನ್ನು ಈ ಕೆಳಕಂಡಂತೆ ವಿವರಿಸಬಹುದು.

Qs = f (P,Pr,C,Tc,T, ...)

ಈ ಸಮೀಕರಣದಲ್ಲಿ Qs = ಪೂರ್ೈಕೆಯ ಪ್ರಮಾಣ

P = ಸರಕಿನ ಬೆಲೆ

Pr = ಸಂಬಂಧಿಸಿದ ಸರಕಿನ ಬೆಲೆ (ಬದಲಿ ಸರಕು ಅಥವಾ ಪೂರಕ ಸರಕಿನ ಬೆಲೆ)

C = ಸರಕುಗಳ ಉತ್ಪಾದನಾ ವೆಚ್ಚ (ಆದಾನಗಳ ವೆಚ್ಚ)

Tc = ಸಾರಿಗೆ ವೆಚ್ಚ

T = ಸರಕುಗಳ ಉತ್ಪಾದನೆಯಲ್ಲಿ ಬಳಸುವ ತಂತ್ರಜ್ಞಾನ

ಹಾಗಾಗಿ ನಿರ್ದಿಷ್ಟ ಸಮಯದಲ್ಲಿ ಸರಕಿನ ಬೇಡಿಕೆಯು ಸರಕಿನ ಪೂರ್ೈಕೆ ಬೆಲೆಯನ್ನು ಅವಲಂಬಿಸಿದೆ ಎಂದು ಕಲ್ಪಿಸಿಕೊಳ್ಳಲಾಗಿದೆ. ಆದುದರಿಂದ ಸಾಮಾನ್ಯವಾಗಿ ಪೂರ್ೈಕೆ ಬಿಂಬಕವನ್ನು ಕೆಳಕಂಡಂತೆ ವ್ಯಕ್ತಪಡಿಸಬಹುದು.

Qs = f (P)

ಈ ಸಮೀಕರಣದಲ್ಲಿ Qs = ಪೂರ್ೈಕೆಯ ಪ್ರಮಾಣ

f= ಕ್ರಿಯಾವಲಂಬಿ ಸಂಬಂಧ

P = ಸರಕಿನ ಬೆಲೆ

ಆದ್ದರಿಂದ ಪೂರ್ೈಕೆ ಬಿಂಬಕ ಎಂಬುದು ಪೂರ್ೈಕೆ ಪ್ರಮಾಣ ಹಾಗೂ ಸರಕಿನ ಬೆಲೆಗಳ ನಡುವಿನ ಕ್ರಿಯಾವಲಂಭಿ ಸಂಬಂಧವನ್ನು ಗಣಿತಾತ್ಮಕವಾಗಿ ಬಿಂಬಿಸುತ್ತದೆ.

ಈ ಮೇಲಿನ ಸಮೀಕರಣದಲ್ಲಿ Q = f (P) ಪೂರ್ೈಕೆ ಪ್ರಮಾಣವು ಸರಕಿನ ಬೆಲೆಯಲ್ಲಿನ ಬದಲಾವಣೆಯಿಂದಾಗಿ ಬದಲಾಗುತ್ತದೆ. ಆದ್ದರಿಂದ Qs (ಪೂರ್ೈಕೆ ಪ್ರಮಾಣ) ಅವಲಂಬಿ ಚಲಕ ಮತ್ತು P (ಬೆಲೆ) ಯನ್ನು ಸ್ವತಂತ್ರ ಚಲಕ ಎನ್ನಲಾಗುತ್ತದೆ.

ಪೂರ್ೈಕೆ ಅನುಸೂಚಿ:

ವಿವಿಧ ಮಾರುಕಟ್ಟೆ ಬೆಲೆಗಳಲ್ಲಿ ಪೂರ್ೈಕೆಯಾದ ಸರಕುಗಳ ಪ್ರಮಾಣವನ್ನು ಕೋಷ್ಟಕದಲ್ಲಿ ನಮೂದಿಸುವುದನ್ನು ಪೂರ್ೈಕೆ ಅನುಸೂಚಿ ಎನ್ನಲಾಗುತ್ತದೆ. ಪೂರ್ೈಕೆ ಅನುಸೂಚಿಯು ಪೂರ್ೈಕೆ ಮತ್ತು ಬೆಲೆಯ ನಡುವಿನ ಸಂಬಂಧವನ್ನು ವಿವರಿಸಲು

ನೇರವಾಗುತ್ತದೆ. ಪೂರೈಕೆ ಅನುಸೂಚಿಯಲ್ಲಿ ಎರಡು ವಿಧಗಳಿವೆ ಅವುಗಳೆಂದರೆ: 1) ವೈಯಕ್ತಿಕ ಪೂರೈಕೆ ಅನುಸೂಚಿ 2) ಮಾರುಕಟ್ಟೆ ಪೂರೈಕೆ ಅನುಸೂಚಿ

1. ವೈಯಕ್ತಿಕ ಪೂರೈಕೆ ಅನುಸೂಚಿ: ಇದು ಒಬ್ಬ ಉತ್ಪಾದಕ ಅಥವಾ ಮಾರಾಟಗಾರನ ಪೂರೈಕೆ ಅನುಸೂಚಿಯನ್ನು ಪ್ರತಿನಿಧಿಸುತ್ತದೆ. ಒಂದು ನಿರ್ದಿಷ್ಟ ಸಮಯದಲ್ಲಿ, ವಿವಿಧ ಬೆಲೆಗಳಲ್ಲಿ ಒಬ್ಬ ಉತ್ಪಾದಕ ಅಥವಾ ಮಾರಾಟಗಾರನು ಪೂರೈಸುವ ಒಂದು ಸರಕಿನ ವಿವಿಧ ಪ್ರಮಾಣವನ್ನು ತಿಳಿಸುತ್ತದೆ.
2. ಮಾರುಕಟ್ಟೆ ಪೂರೈಕೆ ಅನುಸೂಚಿ: ಇದು ಮಾರುಕಟ್ಟೆಯಲ್ಲಿನ ಎಲ್ಲಾ ಉತ್ಪಾದಕರು ಅಥವಾ ಮಾರಾಟಗಾರರ ಪೂರೈಕೆ ಅನುಸೂಚಿಯನ್ನು ಪ್ರತಿನಿಧಿಸುತ್ತದೆ. ಈ ಅನುಸೂಚಿಯು ಒಂದು ನಿರ್ಧಿಷ್ಟ ಸಮಯದಲ್ಲಿ ವಿವಿಧ ಬೆಲೆಗಳಲ್ಲಿ ಮಾರುಕಟ್ಟೆಯಲ್ಲಿನ ಎಲ್ಲಾ ಉತ್ಪಾದಕರು ಅಥವಾ ಮಾರಾಟಗಾರರು ಮಾಡಲಾಗುವ ಸರಕಿನ ವಿವಿಧ ಪ್ರಮಾಣದ ಸರಾಸರಿಯ ಪೂರೈಕೆಯಾಗಿದೆ.

ಪೂರೈಕೆಯ ನಿಯಮ

ಈ ಹಿಂದೆ ಚರ್ಚಿಸಿದಂತೆ ಪೂರೈಕೆ ಅನುಸೂಚಿಯು ಸರಕಿನ ಪೂರೈಕೆಯ ಪ್ರಮಾಣ ಮತ್ತು ಬೆಲೆಯ ನಡುವಿನ ಧನಾತ್ಮಕ ಸಂಬಂಧವನ್ನು ತಿಳಿಸುತ್ತದೆ. ಇದನ್ನು ಪೂರೈಕೆಯ ನಿಯಮವು ವಿವರಿಸುತ್ತದೆ. ಪೂರೈಕೆಯ ನಿಯಮದ ಪ್ರಕಾರ ಇತರೆ ಅಂಶಗಳು ಸ್ಥಿರವಾಗಿದ್ದಾಗ, ಸರಕಿನ ಪೂರೈಕೆಯ ಪ್ರಮಾಣವು ಬೆಲೆಯೊಂದಿಗೆ ನೇರ ಸಂಬಂಧ ಹೊಂದಿರುತ್ತದೆ. ಅಂದರೆ, ಬೆಲೆ ಹೆಚ್ಚಾದರೆ ಪೂರೈಕೆಯು ಹೆಚ್ಚಾಗುತ್ತದೆ ಹಾಗೂ ಬೆಲೆ ಕಡಿಮೆಯಾದರೆ ಪೂರೈಕೆಯು ಕಡಿಮೆಯಾಗುತ್ತದೆ.


ಪೂರೈಕೆ ನಿಯಮವನ್ನು ಈ ಕೆಳಗಿನ ಪೂರೈಕೆಯ ಅನುಸೂಚಿಯ ಮೂಲಕ ವಿವರಿಸಬಹುದು:

ವೈಯಕ್ತಿಕ ಬೇಡಿಕೆ ಅನುಸೂಚಿ	
ಕಿತ್ತಳೆ ಹಣ್ಣಿನ ಬೆಲೆ ಪ್ರತಿ ಕೆ. ಜಿ. ಗೆ (ರೂಪಾಯಿಗಳಲ್ಲಿ)	ಕಿತ್ತಳೆ ಹಣ್ಣುಗಳ ಪೂರೈಕೆ ಪ್ರಮಾಣ (ಕೆ. ಜಿ.ಗಳಲ್ಲಿ)
5	1
10	2
15	3
20	4
25	5

ಈ ಮೇಲಿನ ಪೂರೈಕೆ ಅನುಸೂಚಿಯು ಕಿತ್ತಳೆ ಹಣ್ಣುಗಳ ಬೆಲೆ ಪ್ರತಿ ಕೆ. ಜಿ. ಗೆ ರೂ 5 ರಿಂದ 25 ಕ್ಕೆ ಹೆಚ್ಚಾದಾಗ, ಪೂರೈಕೆ ಪ್ರಮಾಣವು ಸಹ 1 ಕೆ. ಜಿ. ಯಿಂದ 5 ಕೆ. ಜಿ. ಗಳಿಗೆ ಹೆಚ್ಚಾಗುತ್ತದೆ. ಈ ಅನುಸೂಚಿಯು ಪೂರೈಕೆಯ ಪ್ರಮಾಣ ಹಾಗೂ ಬೆಲೆಯ ನಡುವಿನ ಧನಾತ್ಮಕ ಸಂಬಂಧವಿರುವುದನ್ನು ತಿಳಿಸುತ್ತದೆ.

ಪೂರೈಕೆ ರೇಖೆ

ಪೂರೈಕೆ ರೇಖೆಯು ಪೂರೈಕೆ ಅನುಸೂಚಿಯ ನಕ್ಷಾ ರೂಪದ ಪ್ರತಿನಿಧಿಸುವಿಕೆಯಾಗಿದೆ. ಇದನ್ನು ನಕ್ಷೆಯಲ್ಲಿ ಪೂರೈಕೆಯ ಬಿಂದುಗಳನ್ನು ಗುರುತಿಸುವ ಮೂಲಕ ಪಡೆಯಬಹುದಾಗಿದೆ.



ಇಲ್ಲಿ ಕಿತ್ತಲೆ ಹಣ್ಣುಗಳ ಪೂರೈಕೆ ಪ್ರಮಾಣ, ಕಿತ್ತಲೆ ಹಣ್ಣಿನ ಬೆಲೆ ತೋರಿಸುವ ಪೂರೈಕೆ ರೇಖೆಯನ್ನು ರೇಖಾಚಿತ್ರದ ಮೂಲಕ ತೋರಿಸಿದ್ದಾರೆ.

ಈ ಮೇಲಿನ ನಕ್ಷೆಯಲ್ಲಿ ಪೂರೈಕೆಯ ಪ್ರಮಾಣವನ್ನು OX ಸಮನಾಂತರ ಅಕ್ಷದಲ್ಲಿ ಹಾಗೂ ಬೆಲೆಯನ್ನು OY ಲಂಬಾಕ್ಷದಲ್ಲಿ ನಮೂದಿಸಲಾಗಿದೆ. ಬೆಲೆ ಹೆಚ್ಚಾದಂತೆ ಪೂರೈಕೆಯ ಪ್ರಮಾಣವು ಸಹ ಹೆಚ್ಚಾಗುತ್ತದೆ. ಬೆಲೆ ಹಾಗೂ ಪೂರೈಕೆಯ ಬಿಂದುಗಳ ಸಮನ್ವಯದಿಂದ ಪೂರೈಕೆ ರೇಖೆಯನ್ನು ಪಡೆಯಲಾಗುತ್ತದೆ. ಪೂರೈಕೆ ರೇಖೆಯು ಸದಾ ಎಡದಿಂದ ಬಲಕ್ಕೆ ಮೇಲ್ಮುಖವಾಗಿ ಚಲಿಸುತ್ತದೆ. ಇದು ಪೂರೈಕೆಯ ಬೆಲೆ ಹಾಗೂ ಪೂರೈಕೆಯ ಪ್ರಮಾಣದ ನಡುವೆ ಇರುವ ಧನಾತ್ಮಕ ಸಂಬಂಧವನ್ನು ತಿಳಿಸುತ್ತದೆ.

ಪೂರೈಕೆಯ ನಿಯಮದ ಅಪವಾದಗಳು:

ಪೂರೈಕೆಯ ನಿಯಮಕ್ಕೆ ಕೆಲವು ಅಪವಾದಗಳಿವೆ. ಇವುಗಳಲ್ಲಿ ಕೆಲವನ್ನು ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

1. ನೈಸರ್ಗಿಕ ವಿಕೋಪಗಳು ಉಂಟಾದಾಗ ಬೆಲೆ ಹೆಚ್ಚಾದರೂ ಪೂರೈಕೆಯನ್ನು ಹೆಚ್ಚಿಸಲು ಸಾಧ್ಯವಿಲ್ಲ.
2. ಅಪರೂಪದ ವಸ್ತುಗಳ ಪೂರೈಕೆ ಹೆಚ್ಚಿಸಲು ಸಾಧ್ಯವಿಲ್ಲ.
3. ಈ ನಿಯಮವನ್ನು ಶ್ರಮದ ಪೂರೈಕೆಗೆ ಅನ್ವಯಿಸಲು ಸಾಧ್ಯವಿಲ್ಲ. ಕೇವಲ ಕೂಲಿಯಲ್ಲಿನ ಹೆಚ್ಚಳಕ್ಕಾಗಿ ಕಾರ್ಮಿಕರು ಹೆಚ್ಚಿನ ಅವಧಿಯವರೆಗೆ ಕಾರ್ಯ ನಿರ್ವಹಿಸುವುದಿಲ್ಲ.

ಪೂರೈಕೆಯನ್ನು ನಿರ್ಧರಿಸುವ ಅಂಶಗಳು:

ಸರಕು ಮತ್ತು ಸೇವೆಗಳ ಪೂರೈಕೆಯು ಅನೇಕ ನಿರ್ಧಾರಕಗಳ ಮೇಲೆ ಅವಲಂಬಿತವಾಗಿದೆ. ಈ ನಿರ್ಧಾರಕಾಂಶಗಳಲ್ಲಿನ ಬದಲಾವಣೆಗೆ ಅನುಗುಣವಾಗಿ ಸರಕು ಮತ್ತು ಸೇವೆಗಳ ಪೂರೈಕೆಯು ಬದಲಾಗುತ್ತದೆ. ಇವುಗಳನ್ನು ಸಂಕ್ಷಿಪ್ತವಾಗಿ ಅರ್ಥಮಾಡಿಕೊಳ್ಳೋಣ:

1. ಸರಕಿನ ಬೆಲೆ: ಸರಕು ಮತ್ತು ಸೇವೆಗಳ ಪೂರೈಕೆಯ ಪ್ರಮಾಣವನ್ನು ನಿರ್ಧರಿಸುವಲ್ಲಿ ಬೆಲೆಯು ಪ್ರಮುಖ ನಿರ್ಧಾರಕಾಂಶವಾಗಿದೆ. ಬೆಲೆ ಹೆಚ್ಚಿದಾಗ ಉತ್ಪಾದಕರು ಹೆಚ್ಚಿನ ಸರಕುಗಳ ಪ್ರಮಾಣವನ್ನು ಪೂರೈಸಲು ಉತ್ತೇಜನರಾಗುವರು. ಆದ್ದರಿಂದ, ಬೆಲೆ ಹಾಗು ಪೂರೈಕೆಯ ಪ್ರಮಾಣ ಧನಾತ್ಮಕವಾದ ಸಂಬಂಧವನ್ನು ಹೊಂದಿದೆ.
2. ಸಂಬಂಧಿತ ಸರಕುಗಳ ಬೆಲೆ: ಸಂಬಂಧಿತ ಸರಕುಗಳ ಬೆಲೆಯು ಸಹ ಸರಕು ಮತ್ತು ಸೇವೆಗಳ ಪೂರೈಕೆಯನ್ನು ನಿರ್ಧರಿಸುತ್ತದೆ. ಉದಾಹರಣೆಗೆ, ಲಭ್ಯವಿರುವ ನಿರ್ದಿಷ್ಟ ಸಂಪನ್ಮೂಲಗಳನ್ನು ಬಳಸಿ ಒಬ್ಬ ರೈತ ಗೋಧಿ ಅಥವಾ ಅಕ್ಕಿಯನ್ನು ಬೆಳೆಯಬಹುದು ಎಂದುಕೊಳ್ಳೋಣ, ಇಂತಹ ಸಂದರ್ಭದಲ್ಲಿ ಅಕ್ಕಿಯ ಬೆಲೆ ಹೆಚ್ಚಾದರೆ ಅಕ್ಕಿಯನ್ನು ಹೆಚ್ಚಾಗಿ ಬೆಳೆದು ಮಾರುಕಟ್ಟೆಗೆ ಪೂರೈಸುವುದು ಅವನಿಗೆ ಹೆಚ್ಚು ಲಾಭದಾಯಕವಾಗಿರುವುದು. ಹಾಗಾಗಿ ರೈತನು ತನ್ನ ಸಂಪನ್ಮೂಲವನ್ನು ಗೋಧಿಯ ಉತ್ಪಾದನೆಯಿಂದ ಅಕ್ಕಿಯ ಉತ್ಪಾದನೆಗಾಗಿ ವರ್ಗಾಯಿಸುವನು. ಇದರ ಫಲಿತಾಂಶವಾಗಿ ಅಕ್ಕಿಯ ಪೂರೈಕೆ ಹೆಚ್ಚಾಗುವುದು ಮತ್ತು ಗೋಧಿಯ ಪೂರೈಕೆ ಕಡಿಮೆಯಾಗುವುದು. ಇದೇ ರೀತಿ, ಅಕ್ಕಿಯ ಬೆಲೆಯಲ್ಲಿನ ಕುಸಿತವು ಅಕ್ಕಿಯ ಪೂರೈಕೆಯಲ್ಲಿನ ಕುಸಿತ ಮತ್ತು ಗೋಧಿಯ ಪೂರೈಕೆಯ ಹೆಚ್ಚಳಕ್ಕೆ ಕಾರಣವಾಗುವುದು.
3. ಉತ್ಪಾದನಾ ವೆಚ್ಚ: ಉತ್ಪಾದಕರು ಸರಕುಗಳ ಉತ್ಪಾದನೆಯನ್ನು ಮಾಡುವ ಮೊದಲು ಸರಕುಗಳ ಉತ್ಪಾದನಾ ವೆಚ್ಚವನ್ನು ಪರಿಗಣಿಸುತ್ತಾರೆ. ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆ ವೆಚ್ಚಗಳು ಅಂದರೆ ಗೇಣಿ, ಕೂಲಿ, ಬಡ್ಡಿ ಮತ್ತು ಲಾಭದಲ್ಲಿನ ಹೆಚ್ಚಳವು ಪೂರೈಕೆಯ ಕಡಿತಕ್ಕೆ ಕಾರಣವಾಗುವುದು. ಉತ್ಪಾದನಾ ವೆಚ್ಚ ಕಡಿಮೆಯಾದಲ್ಲಿ ಲಾಭಾಂಶ ಹೆಚ್ಚಿ ಪೂರೈಕೆಯ ಹೆಚ್ಚಳಕ್ಕೆ ಅವಕಾಶವಾಗುತ್ತದೆ.

4. ಸಾರಿಗೆ ವೆಚ್ಚ: ಕಚ್ಚಾ ವಸ್ತುಗಳ ಸಾಗಾಟ ವೆಚ್ಚವು ಹೆಚ್ಚಿದಲ್ಲಿ ಇದು ಉತ್ಪಾದನಾ ವೆಚ್ಚವನ್ನು ಮೇಲಕ್ಕೆ ಸೆಳೆಯುವುದು, ಇದರಿಂದ ಉತ್ಪಾದನೆ ಕುಸಿದು ಪೂರೈಕೆಯು ಕಡಿಮೆಯಾಗುವುದು.

5. ತಂತ್ರಜ್ಞಾನ: ಒಂದು ಸರಕಿನ ಪೂರೈಕೆಯು ಸರಕಿನ ಉತ್ಪಾದನೆಗೆ ಬಳಸುವ ವಿಭಿನ್ನತಂತ್ರಜ್ಞಾನವನ್ನು ಅವಲಂಬಿಸಿರುತ್ತದೆ. ಬಂಡವಾಳ ಸಾಂದ್ರ ತಂತ್ರಜ್ಞಾನ ಮತ್ತು ಅತ್ಯಾಧುನಿಕ ತಂತ್ರಜ್ಞಾನದ ಅಳವಡಿಕೆಯು ಕಡಿಮೆ ಸಮಯದಲ್ಲಿ ಹೆಚ್ಚು ಪ್ರಮಾಣದ ಸರಕುಗಳನ್ನು ಪೂರೈಸಲು ಸಾಧ. ಶ್ರಮಸಾಂದ್ರ ತಂತ್ರಜ್ಞಾನವನ್ನು ಬಳಸಿದಾಗ ಸರಕುಗಳನ್ನು ಪೂರೈಸಲು ಹೆಚ್ಚು ಸಮಯಬೇಕಾಗಬಹುದು.

6. ಹವಾಮಾನ ಸ್ಥಿತಿಗತಿ: ಸಾಧಾರಣ ಹವಾಮಾನದ ಸ್ಥಿತಿ ಮತ್ತು ಯಾವುದೇ ನೈಸರ್ಗಿಕ ವಿಕೋಪಗಳಾದ ಪ್ರವಾಹ, ಕ್ಷಾಮ, ಬರಗಾಲ ಇತ್ಯಾದಿಗಳು ಇಲ್ಲದಿದ್ದಾಗ ಸರಕುಗಳ ಉತ್ಪಾದನೆ ಮತ್ತು ಪೂರೈಕೆಗಳ ಹೆಚ್ಚಿನ ಪೂರೈಕೆಗೆ ನೆರವಾಗುತ್ತದೆ.

7. ಜನಸಂಖ್ಯಾ ಗಾತ್ರ: ಜನಸಂಖ್ಯೆಯ ಗಾತ್ರವು ಒಂದು ಸರಕಿನ ಮಾರುಕಟ್ಟೆಯ ಗಾತ್ರವನ್ನು ನಿರ್ಧರಿಸುತ್ತದೆ. ಜನಸಂಖ್ಯೆ ಹೆಚ್ಚಿದ್ದರೆ ಉತ್ಪಾದಕನು ಪೂರೈಕೆಯನ್ನು ಹೆಚ್ಚಿಸಬಹುದು. ಜನಸಂಖ್ಯೆಯು ಕಡಿಮೆ ಇದ್ದರೆ ಪೂರೈಕೆ ಪ್ರಮಾಣವು ಕಡಿಮೆಯಾಗುತ್ತದೆ.

8. ಸರ್ಕಾರದ ನೀತಿಗಳು: ಸರ್ಕಾರದ ನೀತಿಗಳಾದ ತೆರಿಗೆರಜೆ, ಉತ್ಪಾದಕರಿಗೆ ಕೊಡುವ ಸಹಾಯಧನ ಮೊದಲಾದವು ಉತ್ಪಾದಕರನ್ನು ಹೆಚ್ಚು ಉತ್ಪಾದಿಸಲು ಮತ್ತು ಮಾರಾಟ ಮಾಡಲು ಮಾರುಕಟ್ಟೆಗೆ ಪೂರೈಸಲು ಪ್ರೋತ್ಸಾಹಿಸುತ್ತದೆ.

9. ವ್ಯವಹಾರಿಕ ಉದ್ದೇಶ: ವ್ಯವಹಾರಿಕ ಉದ್ದೇಶವು ಪೂರೈಕೆಯ ಪ್ರಮಾಣವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಉತ್ಪಾದಕನು ಅತ್ಯಧಿಕ ಲಾಭದ ಗುರಿಯನ್ನು ಹೊಂದಿದ್ದರೆ, ಪೂರೈಕೆಯನ್ನು ಕಡಿತಗೊಳಿಸಿ ಹೆಚ್ಚಿನ ಬೆಲೆಗೆ ಸರಕನ್ನು ಮಾರಾಟ ಮಾಡುತ್ತಾನೆ. ಮಾರುಕಟ್ಟೆ ವ್ಯಾಪ್ತಿಯನ್ನು ಹೆಚ್ಚಿಸಲು ಬಯಸುವ ಉತ್ಪಾದಕನು ಕಡಿಮೆ ಬೆಲೆಗೆ ಉತ್ಪಾದಿಸಿ ಮಾರಾಟ ಮಾಡುತ್ತಾನೆ.

10. ವ್ಯಾಪಾರದ ಸ್ಥಿತಿಗತಿ: ಆರ್ಥಿಕತೆಯಲ್ಲಿ ಸರಕುಗಳ ಪೂರೈಕೆಯನ್ನು ನಿರ್ಧರಿಸುವಲ್ಲಿ ವ್ಯಾಪಾರದ ಸ್ಥಿತಿಗತಿ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಆರ್ಥಿಕತೆಯಲ್ಲಿ ಆರ್ಥಿಕ ಮುಗ್ಗಟ್ಟು ಉಂಟಾದಲ್ಲಿ ಪೂರೈಕೆಯು ಕಡಿಮೆಯಾಗುತ್ತದೆ. ಆದರೆ ಇದಕ್ಕೆ ವಿರುದ್ಧ ಸನ್ನಿವೇಶದಲ್ಲಿ ಆರ್ಥಿಕತೆಯು ಉತ್ತಮ ಸ್ಥಿತಿಯಲ್ಲಿದ್ದರೆ ಸರಕು ಸೇವೆಗಳ ಪೂರೈಕೆ ಹೆಚ್ಚಾಗಿರುತ್ತದೆ.

ಅಭ್ಯಾಸ

I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಪೂರೈಕೆಯು ಮಾರುಕಟ್ಟೆಯಲ್ಲಿನ ________ ಮತ್ತು ________ ಹರಿವನ್ನು ಸೂಚಿಸುತ್ತದೆ.

ಅ. ಸರಕು ಮತ್ತು ಸೇವೆಗಳ
ಆ. ಬಯಕೆ ಮತ್ತು ಬೇಡಿಕೆ
ಇ. ಬೇಡಿಕೆ ಮತ್ತು ಪೂರೈಕೆ
ಈ. ಬೆಲೆ ಮತ್ತು ಪೂರೈಕೆ

2. ಒಬ್ಬ ಮಾರಾಟಗಾರನ ಪೂರೈಕೆ ಅನುಸೂಚಿಯನ್ನು ________ ಎನ್ನಲಾಗುತ್ತದೆ,

ಅ. ಮಾರುಕಟ್ಟೆ ಅನುಸೂಚಿ
ಆ. ವೈಯಕ್ತಿಕ ಅನುಸೂಚಿ
ಇ. ಬೆಲೆ ಅನುಸೂಚಿ
ಈ. ಬೇಡಿಕೆ ಅನುಸೂಚಿ

3. ಬೆಲೆ ಮತ್ತು ಪೂರೈಕೆಯ ನಡುವೆ ಸಂಬಂಧವಿದೆ.

ಅ. ಸಂಬಂಧವಿಲ್ಲ
ಆ. ಋಣಾತ್ಮಕ
ಇ. ಶೂನ್ಯ
ಈ. ಧನಾತ್ಮಕ

4. ಪೂರೈಕೆ ರೇಖೆಯು ಎಡದಿಂದ ಬಲಕ್ಕೆ________

ಅ. ಇಳಿಮುಖವಾಗಿರುತ್ತದೆ.
ಆ. ಏರುಮುಖವಾಗಿರುತ್ತದೆ
ಇ. ನೇರವಾಗಿರುತ್ತದೆ.
ಈ. ಲಂಬವಾಗಿರುತ್ತದೆ.

5. ಸಾರಿಗೆ ವೆಚ್ಚ ಹೆಚ್ಚಳವು ಪೂರೈಕೆಯನ್ನು ________

ಅ. ಹೆಚ್ಚಿಸುತ್ತದೆ
ಆ. ಕಡಿಮೆಮಾಡುತ್ತದೆ
ಇ. ಬದಲಾವಣೆಯಿರುವುದಿಲ್ಲ
ಈ. ವಿಸ್ತರಿಸುತ್ತದೆ

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಪೂರೈಕೆಯನ್ನು ನಿರ್ಧರಿಸುವ ಪ್ರಮುಖ ಅಂಶ ________
2. ಅಪರೂಪದ ವಸ್ತುಗಳು ಪೂರೈಕೆ ನಿಯಮಕ್ಕೆ________ ಆಗಿವೆ.
3. ಆರ್ಥಿಕತೆಯಲ್ಲಿ ಮುಗ್ಗಟ್ಟು ಉಂಟಾದಾಗ ಪೂರೈಕೆಯು ________
4. ಮಾರುಕಟ್ಟೆಯಲ್ಲಿ ಪ್ರಭುತ್ವಸಾಧಿಸಲು ಮಾರಾಟಗಾರನು ಪ್ರಮಾಣದ ________ ಬೆಲೆಯಲ್ಲಿ ಮಾರಾಟ ಮಾಡುತ್ತಾನೆ.
5. ________ ತಂತ್ರಜ್ಞಾನವನ್ನು ಉಪಯೋಗಿಸಿದಾಗ ವಸ್ತುಗಳ ಪೂರೈಕೆಯು ಹೆಚ್ಚಿನ ಸಮಯ ಹಿಡಿಯುತ್ತದೆ.

III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಪೂರೈಕೆ ಎಂದರೇನು?
2. ಪೂರೈಕೆ ಅನುಸೂಚಿಯ ಅರ್ಥ ಬರೆಯಿರಿ.
3. ಪೂರೈಕೆ ಅನುಸೂಚಿಯ ವಿಧಗಳನ್ನು ತಿಳಿಸಿ.
4. ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆ ಹೆಚ್ಚಿದಾಗ ಅಕ್ಕಿಯ ಪೂರೈಕೆಯು ಹೇಗೆ ಬದಲಾಗುತ್ತದೆ?
5. ಉತ್ಪಾದನಾಂಗಗಳಿಗೆ ಪಾವತಿಸುವ ಬೆಲೆಯನ್ನು ತಿಳಿಸಿ.

IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಪೂರೈಕೆ ಬಿಂಬಕ ಎಂದರೇನು?
2. ಪೂರೈಕೆ ನಿಯಮವನ್ನು ವಿವರಿಸಿ.
3. ಪೂರೈಕೆ ರೇಖೆಗೆ ಅರ್ಥವನ್ನು ನೀಡಿ.
4. ಪೂರೈಕೆ ನಿಯಮದ ಅಪವಾದಗಳನ್ನು ತಿಳಿಸಿ.
5. ಸರ್ಕಾರದ ನೀತಿಗಳು ಸರಕುಗಳ ಪೂರೈಕೆಯನ್ನು ಹೇಗೆ ಪ್ರಭಾವಿಸುತ್ತವೆ?

V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯದಲ್ಲಿ ಉತ್ತರಿಸಿ.

1. ಪೂರೈಕೆಯ ನಿಯಮವನ್ನು ವಿವರಿಸಿ.
2. ಪೂರೈಕೆಯನ್ನು ನಿರ್ಧರಿಸುವ ಅಂಶಗಳನ್ನು ಚರ್ಚಿಸಿ.
3. ಪೂರೈಕೆಯ ಅನುಸೂಚಿಯನ್ನು ಆಧರಿಸಿ ಪೂರೈಕೆಯ ರೇಖೆಯನ್ನು ಬಿಡಿಸಿ.
4. ಪೂರೈಕೆಯನ್ನು ನಿರ್ಧರಿಸುವಲ್ಲಿ ತಂತ್ರಜ್ಞಾನದ ಪಾತ್ರವನ್ನು ವಿವರಿಸಿ.
5. ವ್ಯಾಪಾರದ ಉದ್ದೇಶ ಪೂರೈಕೆಯನ್ನು ಪ್ರಭಾವಿಸುತ್ತದೆ. ವಿವರಿಸಿ.

ಯೋಜನಾ ಕಾರ್ಯ:

1. ಸ್ಥಳೀಯ ಮಾರುಕಟ್ಟೆಗೆ (ಏಳು ದಿನಗಳ ಅಂತರದಂತೆ ಮೂರು ಬಾರಿ) ಭೇಟಿ ನೀಡಿ ಆಯ್ದ ಸರಕುಗಳ ಬೆಲೆಯನ್ನು ಗುರುತಿಸಿ, ಪೂರೈಕೆಯ ಮೇಲಿನ ಬೆಲೆಯ ಪ್ರಭಾವವನ್ನು ಗುರುತಿಸಿ.

2. ನಿಮ್ಮ ಜಿಲ್ಲೆಯಲ್ಲಿನ ಜನರ ಅಭಿರುಚಿ ಬದಲಾದುದರಿಂದ ಕೆಲವು ಸರಕುಗಳ ಪೂರೈಕೆ ಬದಲಾದುದರ ಬಗ್ಗೆ ಮಾಹಿತಿ ಕಲೆಹಾಕಿ, ವಿವರಿಸಿ.

ಅಧ್ಯಾಯ-9 ಉತ್ಪಾದನೆ

‘‘ಉತ್ಪಾದನೆ ಮತ್ತು ಅನುಭೋಗಗಳು ಆಧುನಿಕ ಸಮಾಜದ ಮೊಲೆತೊಟ್ಟಾಗಿದೆ. ಈ ಮೊಲೆಯುಣಿದು ಮನುಕುಲವು ಶಕ್ತಿ ಮತ್ತು ಸೌಂದರ್ಯದೊಂದಿಗೆ ಬೆಳೆದು ಎಲ್ಲ ಆಧುನಿಕ ಅನುಕೂಲತೆಗಳ ಮೂಲಕ ಜೀವನದ ಗುಣಮಟ್ಟದಲ್ಲಿನ ಹೆಚ್ಚಳ, ಎಲ್ಲ ರೀತಿಯ ಚಿತ್ತ ಭ್ರಮೆಗೆ, ನಮ್ಮ ಎಲ್ಲಾ ಸುಖದಾಯಕ ಕನಸಿನ ಸಂಸ್ಕೃತಿಗೆ ನೆರವಾಗಿದೆ’’. ರೌಲ್ ವಾನೇಜಿಮ್

ಪೀಠಿಕೆ:

ಉತ್ಪಾದನೆ ಪದದ ಅರ್ಥ ‘ಸೃಷ್ಟಿಸುವುದಾಗಿದೆ’. ಮಾನವನಿಗೆ ತನ್ನ ಬಯಕೆಯನ್ನು ಈಡೇರಿಸಿಕೊಳ್ಳಲು ಹಲವು ಸರಕುಗಳ ಅಗತ್ಯವಿದೆ. ಈ ಸರಕುಗಳನ್ನು ವಿವಿಧ ಉತ್ಪಾದನಾಂಗಗಳ ನೆರವಿನಿಂದ ಉತ್ಪಾದಿಸಬಹುದು. ಈ ಉತ್ಪಾದನಾಂಗಗಳು ಒಟ್ಟಾಗಿ ಸೇರಿ ಅನುಭೋಗಿಗೆ ಅಥವಾ ಬಳಕೆದಾರರಿಗೆ ಉಪಯುಕ್ತತೆ ಅಥವಾ ತುಷ್ಟಿಗುಣ ಹೊಂದಿರುವ ಸರಕುಗಳನ್ನು ಸೃಷ್ಟಿಸುವುದು. ಈ ಸರಕುಗಳ ಅನುಭೋಗವು ಮಾನವನ ಹಲವು ಬಯಕೆಗಳನ್ನು ತೃಪ್ತಿಪಡಿಸುವುದು. ಹಾಗಾಗಿ ಉತ್ಪಾದನಾ ಪ್ರಕ್ರಿಯೆಯು ಆರ್ಥಿಕ ಯೋಗಕ್ಷೇಮವನ್ನು ಪ್ರೋತ್ಸಾಹಿಸುವುದು. ಆದ್ದರಿಂದ, ಆರ್ಥಿಕತೆಯಲ್ಲಿ ಉತ್ಪಾದನೆ ಮತ್ತು ಆರ್ಥಿಕ ಯೋಗಕ್ಷೇಮಗಳ ನಡುವೆ ನಿಕಟ ಸಂಬಂಧವಿದೆ. ಹಾಗಾದರೆ, ಉತ್ಪಾದನೆ ಎಂದರೇನು? ಉತ್ಪಾದನಾಂಗಗಳು ಯಾವುವು? ಉತ್ಪಾದನಾಂಗಗಳ ಕೊಡುಗೆಗಳು ಯಾವುವು? ಈ ಅಧ್ಯಾಯದ ಉದ್ದೇಶವು ಈ ಪ್ರಶ್ನೆಗಳಿಗೆ ಉತ್ತರಿಸುವುದು ಮತ್ತು ಉತ್ಪಾದನೆಗೆ ಸಂಬಂಧಿಸಿದ ಇತರೆ ವಿಷಯಗಳನ್ನು ತಿಳಿದುಕೊಳ್ಳುವುದಾಗಿದೆ.

ಉತ್ಪಾದನೆಯ ಅರ್ಥ:

ಆದಾನವನ್ನು ಮೌಲ್ಯಯುತ ಉತ್ಪನ್ನವಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ‘ಉತ್ಪಾದನೆ’ ಎನ್ನುತ್ತೇವೆ. ಇಲ್ಲಿ ತುಷ್ಟಿಗುಣದ ಸೃಷ್ಟಿಯಾಗುತ್ತದೆ. ಮನುಕುಲಕ್ಕೆ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಯಂತಹ ಹಲವು ಬಗೆಯ ಸಂಪನ್ಮೂಲಗಳು ದೊರಕಿದೆ. ಈ ಸಂಪನ್ಮೂಲಗಳನ್ನು ಉತ್ಪಾದನಾಂಗಗಳು ಎನ್ನುವರು. ಈ ಉತ್ಪಾದನಾಂಗಗಳನ್ನು ಅವುಗಳ ಆದರ್ಶ ಬಳಕೆಗಾಗಿ ಉತ್ಪಾದನೆಯಲ್ಲಿ ವಿವಿಧ ಪ್ರಮಾಣದಲ್ಲಿ ಬಳಸಲಾಗುತ್ತದೆ. ಹೀಗೆ ಈ ಉತ್ಪಾದನಾಂಗಗಳನ್ನು ಬಳಸಿ ಮೌಲ್ಯಯುತವಾದ ಉತ್ಪನ್ನವನ್ನು ಸೃಷ್ಟಿಸುವ ಪ್ರಕ್ರಿಯೆಯನ್ನು ಉತ್ಪಾದನೆ ಎನ್ನುವರು. ಹೀಗೆ ಉತ್ಪಾದಿಸಲ್ಪಟ್ಟ ಉತ್ಪನ್ನಗಳು ಸರಕು (ಭೌತಿಕ ಉತ್ಪನ್ನ) ಅಥವಾ ಸೇವೆಯಾಗಿರಬಹುದು.

ಈ ಸರಕು ಮತ್ತು ಸೇವೆಗಳು ಅನುಭೋಗಿಗಳ ತುಷ್ಟಿಗುಣ ಹೆಚ್ಚಳಕ್ಕೆ ಕೊಡುಗೆ ನೀಡುವ ಮೂಲಕ ಅವರ ಜೀವನವನ್ನು ಅನಂದದಾಯಕಗೊಳಿಸಿದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ರೈತನು ಉತ್ಪಾದಿಸುವ ಗೋಧಿಯಾಗಿದ್ದು ಗೋಧಿಯನ್ನು ಉತ್ಪಾದಿಸಲು ರೈತನು ಆದಾನಗಳಾದ ಭೂಮಿ, ಬಿತ್ತನೆ ಬೀಜ, ಸಲಕರಣೆಗಳು, ನೀರಿನ ಜೊತೆಗೆ ಶ್ರಮದ ಸೇವೆಯನ್ನು ಉಪಯೋಗಿಸಿಕೊಂಡು ಅನುಭೋಗಿಗಳಿಗೆ ತುಷ್ಟಿಗುಣ ನೀಡುವ ಅಂತಿಮ ಉತ್ಪನ್ನವನ್ನು ಉತ್ಪಾದಿಸುವನು.

ಉತ್ಪಾದನೆಯೆಂದರೆ ಮೌಲ್ಯವರ್ಧನೆಯು ಆಗಿದ್ದು, ಇದು ಅನುಭೋಗಿಗಳಿಗಾಗಿ ಸರಕಿನ ತುಷ್ಟಿಗುಣವನ್ನು ಹೆಚ್ಚಿಸುವುದು. ಅದೇ ಪ್ರಕಾರ ಉತ್ಪಾದನಾ ಪ್ರಕ್ರಿಯೆಯಲ್ಲಿ ವಿವಿಧ ಬಗೆಯ ತುಷ್ಟಿಗುಣವನ್ನು ಸೃಷ್ಟಿಸಬಹುದು ಅಥವಾ ಸೇರಿಸಬಹುದು.

ತುಷ್ಟಿಗುಣದ ವಿವಿಧ ಪ್ರಕಾರಗಳೆಂದರೆ:


1. ರೂಪ ತುಷ್ಟಿಗುಣ: ಸರಕಿನ ಭೌತಿಕ ರೂಪದಲ್ಲಿ ಬದಲಾವಣೆ ಮಾಡಿದಾಗ ಅದರ ತುಷ್ಟಿಗುಣವು ಹೆಚ್ಚಾಗುವುದು. ಉದಾಹರಣೆಗೆ: ಹತ್ತಿಯನ್ನು ಬಟ್ಟೆಯಾಗಿ ಪರಿವರ್ತಿಸಿದಾಗ ಅದರ ತುಷ್ಟಿಗುಣ ಹೆಚ್ಚಾಗುವುದು.
2. ಸ್ಥಳ ತುಷ್ಟಿಗುಣ: ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸರಕನ್ನು ಸಾಗಿಸಿದರೆ ಅದರ ತುಷ್ಟಿಗುಣವು ಹೆಚ್ಚಾಗುವುದು. ಉದಾಹರಣೆಗೆ: ನದಿಯ ದಂಡೆಯಿಂದ ಮರಳನ್ನು ಕಟ್ಟಡ ನಿರ್ಮಾಣದ ಜಾಗಕ್ಕೆ ಸಾಗಿಸಿದರೆ ಅದರ ತುಷ್ಟಿಗುಣ ಹೆಚ್ಚಾಗುವುದು.
3. ಸಮಯ ತುಷ್ಟಿಗುಣ: ಸರಕನ್ನು ಭವಿಷ್ಯದ ಬಳಕೆಗಾಗಿ ಸಂಗ್ರಹಿಸಿಟ್ಟರೆ ಅದರ ತುಷ್ಟಿಗುಣವು ಹೆಚ್ಚಾಗುವುದು. ಉದಾಹರಣೆಗೆ: ಮಳೆಗಾಲದಲ್ಲಿ ನೀರನ್ನು ಸಂಗ್ರಹಾರಕಗಳಲ್ಲಿ ಸಂಗ್ರಹಿಸಿಟ್ಟರೆ ವರ್ಷ ಪೂರ್ತಿ ಅದರ ಬಳಕೆ ಮಾಡಬಹುದು.
4. ಒಡೆತನದ ತುಷ್ಟಿಗುಣ: ಮಾರುವವರು ಮತ್ತು ಕೊಳ್ಳುವವರ ನಡುವಿನ ವ್ಯವಹಾರದಿಂದಾಗುವ ಒಡೆತನದಲ್ಲಿನ ವರ್ಗಾವಣೆಯು ಒಡೆತನದ ತುಷ್ಟಿಗುಣವನ್ನು ಸೃಷ್ಟಿಸುತ್ತದೆ. ಉದಾಹರಣೆಗೆ: ಆಭರಣದ ಅಂಗಡಿಯ ಶೋಕೇಸಿನಲ್ಲಿರುವ ಚಿನ್ನದ ಉಪಯುಕ್ತತೆಗಿಂತ ವ್ಯಕ್ತಿಯು ಅದನ್ನು ಕೊಂಡಾಗ ಹೆಚ್ಚು ತುಷ್ಟಿಗುಣ ನೀಡುತ್ತದೆ.

ಉತ್ಪಾದನಾಂಗಗಳು:

ಈಗಾಗಲೇ ಹೆಸರಿಸಿದಂತೆ ಉತ್ಪಾದನೆಯನ್ನು ನಾಲ್ಕು ಉತ್ಪಾದನಾಂಗಗಳ ಬಳಕೆಯಿಂದ

ಮಾಡಲಾಗುವುದು. ಅವುಗಳೆಂದರೆ,

1. ಭೂಮಿ
2. ಶ್ರಮ
3. ಬಂಡವಾಳ ಮತ್ತು
4. ಸಂಘಟನೆ.



ಕೆಳ ಭಾಗದಲ್ಲಿ ಅವುಗಳನ್ನು ಕುರಿತು ವಿಸ್ತೃತವಾಗಿ ಚರ್ಚಿಸಲಾಗಿದೆ.

1. ಭೂಮಿ

ಭೂಮಿಯು ಅತ್ಯಗತ್ಯವಾದ ಉತ್ಪಾದನಾಂಗವಾಗಿದೆ. ಇದು ಆರ್ಥಿಕ ಚಟುವಟಿಕೆಗಳನ್ನು ಗೊಳ್ಳುವ ಭೌತಿಕ ಸ್ಥಳವಾಗಿದೆ. ಭೂಮಿಯು ನವೀಕರಿಸಬಹುದಾದ ಮತ್ತು ನವೀಕರಿಸಲು ಸಾಧ್ಯವಿಲ್ಲದ ನೈಸರ್ಗಿಕ ಭೌತಿಕ ಸಂಪನ್ಮೂಲವನ್ನು ಒಳಗೊಂಡಿರುತ್ತದೆ. ನವೀಕರಿಸಬಹುದಾದ ಸಂಪನ್ಮೂಲಗಳು ಕೃಷಿ ಭೂಮಿ, ಅರಣ್ಯ, ಸೌರ ಶಕ್ತಿ, ನೀರು ಇತ್ಯಾದಿಗಳನ್ನು ಒಳಗೊಂಡರೆ, ನವೀಕರಿಸಲು ಸಾಧ್ಯವಿಲ್ಲದ ಸಂಪನ್ಮೂಲಗಳು ಭೂಮಿಯ ಖನಿಜ ಮತ್ತು ಲೋಹಗಳು, ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕ ಅನಿಲ ಇತ್ಯಾದಿಗಳನ್ನು ಒಳಗೊಳ್ಳುತ್ತದೆ.

ಭೂಮಿಯ ಗುಣಲಕ್ಷಣಗಳು

ಭೂಮಿಯ ಪ್ರಮುಖ ಲಕ್ಷಣಗಳೆಂದರೆ:

1. ಭೂಮಿಯು ಮನುಕುಲಕ್ಕೆ ನಿಸರ್ಗದ ಉಚಿತ ಕೊಡುಗೆಯಾಗಿದೆ: ಭೂಮಿಯು ನಿಸರ್ಗದ ಉಚಿತ ಕೊಡುಗೆಯಾಗಿದೆ. ಮನುಷ್ಯನು ಭೂಮಿಯ ಮೇಲೆ ಕೆಲಸ ನಿರ್ವಹಿಸಬಹುದು ಮತ್ತು ಅದರ ಫಲವತ್ತತೆಯನ್ನು ಸುಧಾರಿಸಬಹುದು ಆದರೆ, ಭೂಮಿಯನ್ನು ಉತ್ಪಾದಿಸಲು ಅಥವಾ ಸೃಷ್ಟಿಸಲು ಸಾಧ್ಯವಿಲ್ಲ.
2. ಭೂಮಿಯು ಪ್ರಾಥಮಿಕ ಉತ್ಪಾದನಾಂಗವಾಗಿದೆ: ಭೂಮಿಯು ಯಾವುದೇ ರೀತಿಯ ಉತ್ಪಾದನೆಗೆ ಅನಿವಾರ್ಯವಾದ ಉತ್ಪಾದನಾಂಗವಾಗಿದೆ. ಉದಾಹರಣೆಗೆ; ರೈತನು ಬೆಳೆ ಬೆಳೆಯಲು ಭೂಮಿಯನ್ನು ಬಳಸುವನು. ಕೈಗಾರಿಕೋದ್ಯಮಿಯು ಕಾರ್ಖಾನೆಯನ್ನು ಭೂಮಿಯ ಮೇಲೆ ನಿರ್ಮಿಸುವನು.
3. ಭೂಮಿಯ ಪೂರೈಕೆಯು ಸ್ಥಿರವಾಗಿರುತ್ತದೆ: ಭೂಮಿಯ ಲಭ್ಯತೆಯು ಸ್ಥಿರವಾಗಿದ್ದು, ಅದರ ಗಾತ್ರವನ್ನು ಬದಲಾಯಿಸಲು ಸಾಧ್ಯವಾಗುವುದಿಲ್ಲ.
4. ಭೂಮಿಯ ಚಲನೆಯು ಅಚಲವಾಗಿದೆ: ಭೂಮಿಯು ಸ್ವಭಾವತಃ ಅಚಲನೆ ಹೊಂದಿದೆ. ಭೂಮಿಯನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಿಸಲು ಸಾಧ್ಯವಿಲ್ಲ.
5. ಭೂಮಿಯ ಸ್ವಭಾವದಲ್ಲಿ ಜಡವಾಗಿದೆ: ಭೂಮಿಯು ತನ್ನಿಂದ ತಾನೇ ಉತ್ಪಾದಿಸಲು ಸಾಧ್ಯವಿಲ್ಲ. ಉತ್ಪಾದನಾಂಗಗಳಾದ ಶ್ರಮ, ಬಂಡವಾಳ ಮತ್ತು ಸಂಘಟನೆಯ ಮೇಲೆ ಭೂಮಿಯ ಉತ್ಪಾದಕತೆ ಅವಲಂಬಿಸಿದೆ.

6. ಭೂಮಿಯ ಗುಣಮಟ್ಟದಲ್ಲಿನ ವೈವಿಧ್ಯತೆ: ಭೂಮಿಯ ಫಲವತ್ತತೆಯು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತದೆ. ಕೆಲವು ಭೂಮಿ ಇತರೆ ಭೂಮಿಗಿಂತ ಹೆಚ್ಚು ಇಳುವರಿ ಫಸಲು ನೀಡುವುದು ಭೂಮಿಯ ಫಲವತ್ತತೆಯಲ್ಲಿನ ವ್ಯತ್ಯಾಸದಿಂದಲೇ ಆಗಿದೆ.

7. ಭೂಮಿಯ ಮೌಲ್ಯದಲ್ಲಿನ ವ್ಯತ್ಯಾಸ: ಭೂಮಿಯು ಮಾರುಕಟ್ಟೆ ಸ್ಥಳ, ಕಚ್ಚಾ ಸರಕು, ಮೂಲ ಸೌಕರ್ಯಗಳಿಗೆ ಹತ್ತಿರವಿದ್ದರೆ ಮತ್ತು ಹೆಚ್ಚು ಫಲವತ್ತಾಗಿದ್ದರೆ ಅದಕ್ಕೆ ಹೆಚ್ಚು ಮೌಲ್ಯ ದೊರಕುವುದು.

8. ಭೂಮಿಯು ವಿವಿಧ ಚಟುವಟಿಕೆಗಳಿಗೆ ಬಳಸಲ್ಪಡುವುದು: ಭೂಮಿಯನ್ನು ಬಹುಮುಖ ಉದ್ದೇಶಗಳಿಗೆ ಬಳಸಬಹುದು. ಇದನ್ನು ಬೆಳೆ ಬೆಳೆಯಲು, ಕಾರ್ಖಾನೆ ನಿರ್ಮಿಸಲು, ಶಾಲೆ, ರಸ್ತೆ, ಆಸ್ಪತ್ರೆ, ಉದ್ಯಾನವನ ಅಥವಾ ಆಟದ ಮೈದಾನ ನಿರ್ಮಿಸಲು ಬಳಸಬಹುದು.

9. ಭೂಮಿಯು ನಾಶ ಹೊಂದುವುದಿಲ್ಲ: ಭೂಮಿಯನ್ನು ಯಾರು ನಾಶ ಮಾಡಲು ಸಾಧ್ಯವಿಲ್ಲ. ಇದು ಬಾಳಿಕೆ ಬರುವಂತಹದ್ದು ಮತ್ತು ನಾಶ ಮಾಡಲು ಸಾಧ್ಯವಿಲ್ಲದ್ದಾಗಿದೆ. ಆದರೆ, ಭೂಮಿಯ ಅಸಮರ್ಪಕ ಬಳಕೆಯು ಅದರ ಗುಣಮಟ್ಟ ಕುಸಿಯಲು ಕಾರಣವಾಗಿದೆ.

10. ಭೂಮಿಯು ಪರೋಕ್ಷ ಬೇಡಿಕೆಯ ಲಕ್ಷಣವನ್ನು ಹೊಂದಿದೆ: ಭೂಮಿಯ ಬೇಡಿಕೆಯು ಸದಾ ಪರೋಕ್ಷವಾಗಿರುತ್ತದೆ. ಉದಾಹರಣೆಗೆ ಬಟ್ಟೆಗೆ ಬೇಡಿಕೆ ಹೆಚ್ಚಾದರೆ ಹತ್ತಿಯನ್ನು ಬೆಳೆಯಲು ಭೂಮಿಗೆ ಹೆಚ್ಚು ಬೇಡಿಕೆ ಬರುವುದು ಮತ್ತು ಹೆಚ್ಚು ಭೂಮಿಯನ್ನು ಹತ್ತಿ ಬೆಳೆಯಲು ಬಳಸುವರು.

ಭೂಮಿಯ ಮಹತ್ವ

ಯಾವುದೇ ಆರ್ಥಿಕ ಚಟುವಟಿಕೆಗೆ ಭೂಮಿಯು ಮೂಲಭೂತ ಸಂಪನ್ಮೂಲವಾಗಿದೆ. ಭೂಮಿಯು ಎಲ್ಲಾ ಭೌತಿಕ ಆಸ್ತಿಗಳಿಗೂ ಮೂಲವಾಗಿದೆ. ಹೀಗಾಗಿ ಯಾವುದೇ ಉತ್ಪಾದನಾ ಪ್ರಕ್ರಿಯೆಯಲ್ಲಿ ಭೂಮಿಯು ಪ್ರಾಥಮಿಕ ಉತ್ಪಾದನಾಂಗವಾಗಿದೆ.

ಯಾವುದೇ ದೇಶದ ಆರ್ಥಿಕ ಸಮೃದ್ಧತೆಯು ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆಯನ್ನು ಅವಲಂಬಿಸಿದೆ. ಉದಾಹರಣೆಗೆ ದೇಶವು ಉತ್ತಮ ಪ್ರಮಾಣ ಮತ್ತು ಗುಣಮಟ್ಟದ ಭೂಮಿ, ವಾತಾವರಣ ಮತ್ತು ಮಳೆಯನ್ನು ಹೊಂದಿದ್ದರೆ ಕೃಷಿಯ ಸಂಪತ್ತಿನಲ್ಲಿ ಸದಾ ಶ್ರೀಮಂತವಾಗಿರುವುದು. ಕೃಷಿ ಉತ್ಪನ್ನಗಳು ಮಾನವನ ಉಳಿವಿಗೆ ಅತ್ಯಗತ್ಯ ಸಾಧನವಾಗಿದೆ ಮತ್ತು ವ್ಯಾಪಾರ ಮತ್ತು ಕೈಗಾರಿಕೆಗಳಿಗೂ ಆಧಾರವಾಗಿದೆ.

ಕೈಗಾರಿಕೆಗೆ ಭೂಮಿಯಿಂದ ಖನಿಜಗಳು, ಜಲಪಾತಗಳಿಂದ ನೀರು ಮತ್ತು ವಿದ್ಯುತ್ ಹಾಗೂ ಉತ್ಪಾದನೆಗೆ ಕೃಷಿ ಉತ್ಪನ್ನಗಳ ಅಗತ್ಯವಿದೆ. ಹಾಗೆಯೇ ಒಂದು ದೇಶದ ವ್ಯಾಪಾರವು ಅಲ್ಲಿ ಲಭ್ಯವಿರುವ ಕಚ್ಚಾ ಸರಕು, ಮಧ್ಯವರ್ತಿ ಸರಕು ಮತ್ತು ಉತ್ಪಾದಿತ ಅಂತಿಮ ಸರಕನ್ನು ಅವಲಂಬಿಸಿದೆ. ಆದ್ದರಿಂದ ಭೂಮಿಯು ಎಲ್ಲಾ ಉತ್ಪಾದನಾ ಪ್ರಕ್ರಿಯೆಗೆ ಅತ್ಯಗತ್ಯ ಆದಾನವಾಗಿದೆ. ಅಂದರೆ ಕೃಷಿ, ವ್ಯಾಪಾರ, ಕೈಗಾರಿಕೆ

ಮತ್ತು ಸೇವೆಗಳಲ್ಲಿ ಹಾಗೂ ಮಾನವ ಜೀವನದ ಎಲ್ಲಾ ಮಗ್ಗಲುಗಳಲ್ಲೂ ಭೂಮಿಯು ಅತ್ಯಂತ ಮಹತ್ವ ಹೊಂದಿದೆ.

2. ಶ್ರಮ

ಶ್ರಮ ಒಂದು ಉತ್ಪಾದನಾಂಗವಾಗಿದೆ, ವ್ಯಕ್ತಿಗಳು ತಮ್ಮ ಹಣಕಾಸಿನ ಅಗತ್ಯಗಳಿಗಾಗಿ ಭೌತಿಕ ಮತ್ತು ಮಾನಸಿಕ ಶಕ್ತಿಯನ್ನು ಬಳಸುವುದು 'ಶ್ರಮ' ಎಂದು ಕರೆಯುತ್ತಾರೆ. ಶ್ರಮವು ಕಚ್ಚಾ ಅಥವಾ ನೈಸರ್ಗಿಕ ಸಂಪತ್ತನ್ನು ಹಣದ ಮೌಲ್ಯವುಳ್ಳ, ಬಳಕೆ ಮಾಡಬಹುದಾದ ಸರಕು ಮತ್ತು ಸೇವೆಯಾಗಿ ಪರಿವರ್ತಿಸುತ್ತದೆ ಹಾಗಾಗಿ ಮಾನವನ ಪರಿಶ್ರಮದಿಂದಾಗಿ ಆದಾಯ ಗಳಿಸಲು ನೆರವಾಗುತ್ತದೆ. ಶ್ರಮವು ಗಣಿ ಕಾರ್ಮಿಕ, ಕಾರ್ಖಾನೆ ಕೆಲಸಗಾರ, ವೈದ್ಯ, ಶಿಕ್ಷಕ, ಅಭಿಯಂತರ ಇತರರನ್ನು ಒಳಗೊಳ್ಳುವುದು. ಅರ್ಥಶಾಸ್ತ್ರದಲ್ಲಿ ಶ್ರಮವೆಂದರೆ ಆದಾಯ ಗಳಿಸಲು ನೆರವಾಗುವ ಕಾರ್ಯವಾಗಿದೆ. ಆದ್ದರಿಂದ ಶ್ರಮವು ಸ್ವಂತ ಮನರಂಜನೆಗಾಗಿ ಮಾಡಿದ ಕೆಲಸ ಅಥವಾ ಮನೆಯಲ್ಲಿ ಹವ್ಯಾಸಕ್ಕಾಗಿ ಮಾಡುವ ತೋಟಗಾರಿಕೆ ಅಥವಾ ಚಿತ್ರಕಲೆಯನ್ನು ಒಳಗೊಳ್ಳುವುದಿಲ್ಲ.

ಶ್ರಮದ ಗುಣಲಕ್ಷಣಗಳು

ಶ್ರಮದ ಪ್ರಮುಖ ಗುಣಲಕ್ಷಣಗಳೆಂದರೆ:

1) ಶ್ರಮವು ನಾಶ ಹೊಂದುವಂತಹುದು: ಶ್ರಮವು ಬೇಗನೆ ನಾಶ ಹೊಂದುವಂತಹುದಾಗಿದೆ. ಶ್ರಮವನ್ನು ಮುಂದಿನ ದಿನದಲ್ಲಿ ಉಪಯೋಗಿಸಲು ಅನುವಾಗುವಂತೆ ಸಂಗ್ರಹಿಸಲು ಅಥವಾ ಮುಂದೂಡಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯು ಒಂದು ದಿನ ಕೆಲಸ ನಿರ್ವಹಿಸದಿದ್ದರೆ ಆ ದಿನದ ಶ್ರಮ ನಾಶ ಹೊಂದುವುದು, ಅದನ್ನು ಮುಂದಿನ ದಿನಕ್ಕೆ ಬಳಸಲು ಸಾಧ್ಯವಿಲ್ಲ.

2) ಶ್ರಮವನ್ನು ಕಾರ್ಮಿಕನಿಂದ ಬೇರ್ಪಡಿಸಲು ಸಾಧ್ಯವಿಲ್ಲ: ಶ್ರಮಿಕರೊಂದಿಗೆ ಅವರ ನೈಪುಣ್ಯತೆ ಇದ್ದು, ಅವರೇ ಅದನ್ನು ಶ್ರಮ ಅಗತ್ಯವಿರುವಸ್ಥಳಕ್ಕೆ ಕೊಂಡೊಯ್ಯಬೇಕಾಗುವುದು. ಉದಾಹರಣೆಗೆ: ತಜ್ಞ ವೈದ್ಯನು, ನೈಪುಣ್ಯತೆ ಹೊಂದಿರುವುದರಿಂದ ರೋಗಿಗೆ ಶಸ್ತ್ರಚಿಕಿತ್ಸೆ ಮಾಡಲು ಶಸ್ತ್ರಚಿಕಿತ್ಸಾ ಕೊಠಡಿಗೆ ಹೋಗಬೇಕು.

3) ಶ್ರಮವು ಕಡಿಮೆ ಚಲನೆ ಹೊಂದಿದೆ: ಶ್ರಮಿಕರು ಸಾಮಾಜಿಕ ಅಂಶ (ಭಾಷೆ ಸಂಪ್ರದಾಯ, ಆಚರಣೆ, ಇತ್ಯಾದಿ), ಭೌಗೋಳಿಕ ಅಂಶ (ವಾತಾವರಣ, ಹವಾಮಾನ, ಪರಿಸರ ಇತ್ಯಾದಿ) ಮತ್ತು ವಲಸೆಯ ತೊಂದರೆಗಳಿಂದಾಗಿ ನಿರಂತರವಾಗಿ ಸ್ಥಳ ಬದಲಾವಣೆಗೆ ಹಿಂಜರಿಯುವರು.

4) ಶ್ರಮಿಕರು ಕಡಿಮೆ ಚೌಕಾಸಿ ಸಾಮರ್ಥ್ಯ ಹೊಂದಿದ್ದಾರೆ: ಶ್ರಮಿಕರು ಅತ್ಯಂತ ಕಡಿಮೆ ಚೌಕಾಸಿ ಸಾಮರ್ಥ್ಯವನ್ನು ಹೊಂದಿದ್ದಾರೆ. ಏಕೆಂದರೆ, ಅವರು ಸಾಮಾನ್ಯವಾಗಿ ಬಡವರಾಗಿದ್ದು ಮತ್ತು ತಮ್ಮ ಶ್ರಮವನ್ನು ಸಂಗ್ರಹಿಸಿಡಲು ಸಾಧ್ಯವಾಗುವುದಿಲ್ಲ. ಹಾಗಾಗಿ, ಸಾಮಾನ್ಯವಾಗಿ ಶ್ರಮಿಕರು ಮಾಲೀಕರು ನೀಡಿದ ಕೂಲಿ ದರಕ್ಕೆ ಶ್ರಮವನ್ನು ಮಾರಲು ಸಿದ್ಧರಿರುತ್ತಾರೆ.

5) ಕಾರ್ಮಿಕನು ಯಂತ್ರವಲ್ಲ: ಶ್ರಮಿಕರು ಮಾನವರಾಗಿದ್ದು ಅವರಿಗೆ ಭಾವನೆಗಳು, ಉದ್ವೇಗ ಮತ್ತು ದಣಿವಾಗುತ್ತದೆ. ಪ್ರೋತಾಹಿತವಾದ ಶ್ರಮಿಕನ ಉತ್ಪಾದಕತೆಯು ಇತರೇ ಶ್ರಮಿಕನಿಗಿಂತ ಹೆಚ್ಚಾಗಿರುತ್ತದೆ. ಆದ್ದರಿಂದ ಶ್ರಮಿಕರ ದಕ್ಷತೆಯನ್ನು ಹೆಚ್ಚಿಸಲು ಅವರಿಗೆ ಎಲ್ಲ ಸೌಲಭ್ಯಗಳನ್ನು ನೀಡಬೇಕು.

6) ಶ್ರಮಿಕರ ದಕ್ಷತೆಯಲ್ಲಿ ಏಕರೂಪತೆ ಇರುವುದಿಲ್ಲ: ಶ್ರಮಿಕರು ತಮ್ಮ ನೈಪುಣ್ಯತೆ, ಜ್ಞಾನ, ಸೇವಾನುಭವ, ನೈತಿಕತೆಗಳಲ್ಲಿ ಇತರರಿಗಿಂತ ಭಿನ್ನರಾಗಿರುತ್ತಾರೆ. ಹಾಗಾಗಿ ಅವರ ದಕ್ಷತೆ ಮತ್ತು ಉತ್ಪಾದನಾ ಮಟ್ಟಗಳಲ್ಲಿ ವ್ಯತ್ಯಾಸವಿರುತ್ತದೆ. ಶ್ರಮಿಕರ ದಕ್ಷತೆಯನ್ನು ತರಬೇತಿ ನೀಡುವ ಮೂಲಕ ಹೆಚ್ಚಿಸಬಹುದು.

7) ಶ್ರಮವೇ ಉತ್ಪಾದನೆಗೆ ಮೂಲ ಮತ್ತು ಅಂತ್ಯವಾಗಿರುತ್ತದೆ: ಶ್ರಮಿಕರು ಉತ್ಪಾದನೆಗೆ ಕೊಡುಗೆ ನೀಡುವುದಲ್ಲದೇ ತಮ್ಮ ಬಯಕೆ ಈಡೇರಿಸಿಕೊಳ್ಳಲು ಉತ್ಪನ್ನದ ಬಳಕೆಯನ್ನು ಮಾಡುವರು.

8) ಶ್ರಮದ ಅಗತ್ಯವನ್ನು ಲೆಕ್ಕಾಚಾರ ಮಾಡಲು ಸಾಧ್ಯವಿಲ್ಲ: ನಿರ್ದಿಷ್ಟ ಕೆಲಸವನ್ನು ನಿರ್ವಹಿಸಲು ನಿರ್ದಿಷ್ಟವಾಗಿ ಇಂತಿಷ್ಟೇ ಶ್ರಮದ ಅಗತ್ಯವಿದೆ ಎಂದು ಅಂದಾಜಿಸಲು ಸಾಧ್ಯವಿಲ್ಲ. ಆದುದರಿಂದ ಶ್ರಮವು ಲೆಕ್ಕಾಚಾರ ಮಾಡಲು ಸಾಧ್ಯವಾಗದ ಉತ್ಪಾದನಾಂಗವಾಗಿದೆ.

ಶ್ರಮದ ದಕ್ಷತೆಯನ್ನು ನಿರ್ಧರಿಸುವ ಅಂಶಗಳು:

ಶ್ರಮವನ್ನು ಹಲವು ಅಂಶಗಳು ನಿರ್ಧರಿಸುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

(1) ವೈಯಕ್ತಿಕ ಗುಣಗಳು (2) ಕೆಲಸದ ಸ್ಥಿತಿಗತಿ (3) ಸಾಮಾಜಿಕ ಮತ್ತು ರಾಜಕೀಯ ಅಂಶಗಳು.

1) ವೈಯಕ್ತಿಕ ಗುಣಗಳು

ಅ) ಶಿಕ್ಷಣದ ಮಟ್ಟ: ಶಿಕ್ಷಣದ ಮಟ್ಟ ಮತ್ತು ತಾಂತ್ರಿಕ ಕುಶಲತೆಯು ಶ್ರಮಿಕನ ದಕ್ಷತೆಯನ್ನು

ಸುಧಾರಿಸಿಕೊಳ್ಳಲು ನೆರವಾಗುವುದು.

ಆ) ವೈಯಕ್ತಿಕ ಗುಣಗಳು: ವೈಯಕ್ತಿಕ ಗುಣಗಳಾದ ದೇಹಧಾಡ್ರ್ಯತೆ, ಬೌದ್ಧಿಕ ಸಾಮರ್ಥ್ಯ, ಬುದ್ಧಿವಂತಿಕೆ, ಕಲಿಯುವ ಇಚ್ಛೆ ಮತ್ತು ಕೆಲಸವು ನೇರವಾಗಿ ಕಾರ್ಮಿಕರ ದಕ್ಷತೆಯನ್ನು ನಿರ್ಧರಿಸುತ್ತದೆ.

ಇ) ಹವಾಮಾನದ ಸ್ಥಿತಿಗತಿ: ಶ್ರಮದ ಕೆಲಸಕ್ಕೆ ಬಿಸಿಲಿನ ವಾತವರಣಕ್ಕಿಂತ ತಂಪಾದ ವಾತಾವರಣ

ಸೂಕ್ತವಾಗಿರುತ್ತದೆ.

2) ಕೆಲಸದ ಸ್ಥಿತಿಗತಿಗಳು

ಅ) ಸಂಘಟನೆ ಮತ್ತು ಸಲಕರಣೆ: ಸುವ್ಯವಸ್ಥಿತವಾಗಿರುವ ಕೆಲಸದ ಸ್ಥಳದ ಜೊತೆಗೆ ಇತ್ತೀಚಿನ ಮತ್ತು ಆಧುನಿಕ ಯಂತ್ರೋಪಕರಣಗಳಿದ್ದರೆ ಶ್ರಮದ ದಕ್ಷತೆ ಸುಧಾರಿಸುವುದು.

ಆ) ಕೆಲಸದ ವಾತಾವರಣ: ಉತ್ತಮ ಬೆಳಕು, ಗಾಳಿ, ಚರಂಡಿ ವ್ಯವಸ್ಥೆ ಮತ್ತು ಮನರಂಜನಾ ಸೌಲಭ್ಯಗಳಿದ್ದರೆ ಶ್ರಮದ ದಕ್ಷತೆ ಸುಧಾರಿಸುವುದು.

ಇ) ಕೆಲಸದ ಅವಧಿ: ಸಮರ್ಪಕ ಕೆಲಸದ ಅವಧಿ ಮತ್ತು ಕೆಲಸದ ಸಮಯದಲ್ಲಿ ನಿಯಮಿತ ಮತ್ತು ಸಾಕಷ್ಟು ವಿರಾಮವು ಶ್ರಮದ ದಕ್ಷತೆಯನ್ನು ಸುಧಾರಿಸುತ್ತದೆ.

ಈ) ನ್ಯಾಯಯುತ ಕೂಲಿ: ಸರಿಯಾದ ಸಮಯಕ್ಕೆ ಸಮರ್ಪಕ ಕೂಲಿ ಪಾವತಿಯಾಗುವ ವ್ಯವಸ್ಥೆಯು ಶ್ರಮಿಕರನ್ನು ಹೆಚ್ಚು ಕೆಲಸ ಮಾಡಲು ಮತ್ತು ದೀರ್ಘಕಾಲ ಕೆಲಸದ ಸ್ಥಳದಲ್ಲಿ ಉಳಿಯಲು ಪ್ರೋತ್ಸಾಹಿಸುವುದು.

3) ಸಾಮಾಜಿಕ ಮತ್ತು ರಾಜಕೀಯ ಅಂಶಗಳು

ಅ) ಯೋಗಕ್ಷೇಮದ ಚಟುವಟಿಕೆಗಳು: ಯೋಗಕ್ಷೇಮದ ಚಟುವಟಿಕೆಗಳಾದ ವಸತಿ, ಸಾರಿಗೆ, ಮಕ್ಕಳಿಗೆ ಶಿಕ್ಷಣ ಸೌಲಭ್ಯ, ಆಸ್ಪತ್ರೆ, ವಿಮಾ ಸೌಲಭ್ಯಗಳು ಮತ್ತು ಸಾಮಾಜಿಕ ಭದ್ರತಾ ಯೋಜನೆಗಳು ಕಾರ್ಮಿಕರ ದಕ್ಷತೆಯನ್ನು ಸುಧಾರಿಸುವುದು.

ಆ) ಸಾಮಾಜಿಕ ಮತ್ತು ಧಾರ್ಮಿಕ ಮನೋಧರ್ಮ: ಜಾತಿ ಪದ್ಧತಿ, ಮಹಿಳೆಯರು ಕೆಲಸಕ್ಕೆ ಹೊರಗೆ ಹೋಗಬಾರದೆಂಬ ಸಂಪ್ರದಾಯವಾದಿಗಳ ಧೋರಣೆ ಶ್ರಮದ ದಕ್ಷತೆಯನ್ನು ಪ್ರಭಾವಿಸುತ್ತದೆ.

ಇ) ರಾಜಕೀಯ ಸ್ಥಿರತೆ: ದೇಶದಲ್ಲಿನ ಸ್ಥಿರ ರಾಜಕೀಯ ವಾತಾವರಣವು ಕಾರ್ಮಿಕರ ದಕ್ಷತೆಯನ್ನು ಹೆಚ್ಚಿಸುವುದು.

3. ಬಂಡವಾಳ

ಮೌಲ್ಯವನ್ನು ಹೊಂದಿರುವ ಎಲ್ಲವೂ ಆಸ್ತಿಯಾಗಿದ್ದು, ಇದು ತುಷ್ಟಿಗುಣ, ಕೊರತೆ ಮತ್ತು ಮಾರಲು ಯೋಗ್ಯವಾದ ಗುಣವನ್ನು ಹೊಂದಿರುತ್ತದೆ. ಇವುಗಳಲ್ಲಿ ಉತ್ಪಾದನೆಯಲ್ಲಿ ಬಳಸಲ್ಪಡುವ ಭಾಗವನ್ನು 'ಬಂಡವಾಳ' ಎನ್ನುವರು. ಬಂಡವಾಳವು ಇತರ ಉತ್ಪಾದನಾಂಗಗಳಂತೆ ಪ್ರಾಥಮಿಕ ಉತ್ಪಾದನಾಂಗವಾಗಿರುವುದಿಲ್ಲ. ಶ್ರಮವು ಬಂಡವಾಳವನ್ನು ಉಪಯೋಗಿಸಿಕೊಂಡು ಇತರೇ ಉತ್ಪಾದನಾಂಗಗಳನ್ನಾಗಿ ಮಾರ್ಪಡಿಸಿ, ಸರಕು ಮತ್ತು ಸೇವೆಯನ್ನು ಉತ್ಪಾದಿಸಿ, ಮಾನವನ ಬಯಕೆಯನ್ನು ತೃಪ್ತಿಪಡಿಸಲು ಬಳಸುವರು. ಬಂಡವಾಳವು ಆದಾಯವನ್ನು ಮತ್ತು ಹೆಚ್ಚಿನ ಸಂಪತ್ತನ್ನು ಗಳಿಸಲು ನೆರವಾಗುತ್ತದೆ. ಉದಾಹರಣೆಗೆ ಯಂತ್ರಗಳನ್ನು ಕೊಂಡುಕೊಳ್ಳುವುದು, ಕಾರ್ಖಾನೆಯನ್ನು ನಿರ್ಮಿಸುವುದು, ವ್ಯವಹಾರದಲ್ಲಿನ ಹೂಡಿಕೆ, ವ್ಯವಸಾಯಕ್ಕಾಗಿ ಭೂಮಿಯನ್ನು ಕೊಳ್ಳುವುದು ಬಂಡವಾಳವಾಗಿದೆ.

ಬಂಡವಾಳದ ಪ್ರಮುಖ ಗುಣಲಕ್ಷಣಗಳೆಂದರೆ:

೧) ಬಂಡವಾಳವು ಒಂದು ಪ್ರಮುಖ ಉತ್ಪಾದನಾಂಗವಾಗಿದೆ: ಬಂಡವಾಳವು ಉತ್ಪಾದನೆಗಾಗಿ ಕಚ್ಚಾಸರಕು, ಸಲಕರಣೆ ಮತ್ತು ಉಪಕರಣಗಳನ್ನು ಕೊಂಡುಕೊಳ್ಳಲು ನೆರವಾಗುತ್ತದೆ. ಇದರೊಂದಿಗೆ ಆಹಾರ, ಬಟ್ಟೆ ಕೊಳ್ಳಲು, ಕಾರ್ಮಿಕರಿಗೆ ಕೂಲಿ ನೀಡಿ ಕೆಲಸಕ್ಕೆ ಪ್ರೇರೇಪಿಸಲು ಸಹಾಯಕವಾಗುತ್ತದೆ. ಹಾಗಾಗಿ ಬಂಡವಾಳವು ಉತ್ಪಾದಕತೆಯನ್ನು ಹೆಚ್ಚಿಸಲು ನೆರವಾಗುವುದು.

೨) ಬಂಡವಾಳವು ಮಾನವ ನಿರ್ಮಿತವಾಗಿದೆ: ಬಂಡವಾಳವು ದ್ವಿತೀಯಕ ಉತ್ಪಾದನಾಂಗವಾಗಿದ್ದು, ಮಾನವ ಶ್ರಮದ ಉತ್ಪಾದನೆಯಿಂದ ಇದರ ಸೃಷ್ಟಿಯಾಗಿದೆ.

೩) ಪ್ರಕೃತಿಯಲ್ಲಿ ಬಂಡವಾಳವು ನಿಷ್ಕ್ರಿಯವಾಗಿರುತ್ತದೆ: ಬಂಡವಾಳವು ತನ್ನಿಂದ ತಾನೇ ಉತ್ಪಾದಿಸಲು ಸಾಧ್ಯವಿಲ್ಲ. ಯಾವುದೇ ಉತ್ಪಾದನೆಗೆ ಶ್ರಮದೊಂದಿಗೆ ಭೂಮಿಯ ಸಂಮಿಶ್ರಣದ ಅಗತ್ಯವಿದೆ.

೪) ಬಂಡವಾಳದ ಪೂರೈಕೆಯು ಸ್ಥಿತಿಸ್ಥಾಪಕತೆ ಹೊಂದಿದೆ: ಬಂಡವಾಳದ ಪೂರೈಕೆಯು ಬಂಡವಾಳ ನಿರ್ಮಾಣದ ಪ್ರಮಾಣವನ್ನು ಅವಲಂಬಿಸಿದೆ. ಉಳಿತಾಯ ಮತ್ತು ಹೂಡಿಕೆ ಅಧಿಕವಾಗಿದ್ದಾಗ ಹೆಚ್ಚು ಬಂಡವಾಳ ಸೃಷ್ಟಿಯಾಗುವುದರಿಂದ ಬಂಡವಾಳದ ಪೂರೈಕೆಯ ಹೆಚ್ಚಳಕ್ಕೆ ಕಾರಣವಾಗುವುದು.

೫) ಬಂಡವಾಳವು ಚಲನಶೀಲ ಗುಣ ಹೊಂದಿದೆ: ಬಂಡವಾಳವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಭವಾಗಿ ಸಾಗಿಸಬಹುದು.

೬) ಬಂಡವಾಳವು ಬಾಳಿಕೆ ಬರುವಂತಹುದಾಗಿದೆ: ಬಂಡವಾಳವು ಮಾನವ ಶ್ರಮದಂತೆ ಬೇಗನೇ ನಾಶಹೊಂದದೇ ದೀರ್ಘಾವಧಿಯವರೆಗೂ ಅಸ್ತಿತ್ವದಲ್ಲಿರುವುದು.

೭) ಬಂಡವಾಳವು ಆದಾಯವನ್ನು ಗಳಿಸಲು ನೆರವಾಗುವುದು: ಬಂಡವಾಳದ ಮಾಲೀಕನು ಬಂಡವಾಳವನ್ನು ಬುದ್ಧಿವಂತಿಕೆಯಿಂದ ಉತ್ಪಾದನೆ ಹಾಗೂ ಹೂಡಿಕೆಯಲ್ಲಿ ಉಪಯೋಗಿಸಿದ್ದರೆ ಅದು ಆದಾಯಗಳಿಸಲು ನೆರವಾಗುತ್ತದೆ.

ಬಂಡವಾಳದ ಪ್ರಮುಖ ವಿಧಗಳು:

1. ಸ್ಥಿರ ಬಂಡವಾಳ: ಸ್ಥಿರ ಬಂಡವಾಳವೆಂದರೆ ಬಾಳಿಕೆ ಬರುವ ವಸ್ತುಗಳಾದ ಯಂತ್ರೋಪಕರಣಗಳು, ಸಾರಿಗೆ, ಸಾವರ ಮತ್ತು ಕಟ್ಟಡ ಇತ್ಯಾದಿಗಳನ್ನು ಉತ್ಪಾದನೆಯಲ್ಲಿ ಹಲವು ವರ್ಷ ಬಳಸಬಹುದು. ಈ ರೀತಿಯ ಬಂಡವಾಳ ಸರಕುಗಳ ಮೇಲೆ ಹೂಡಿದ ಹಣ ದೀರ್ಘಕಾಲದವರೆಗೆ ಸ್ಥಿರವಾಗಿರುತ್ತದೆ.
2. ಪರಿಚಲನೆಯ ಬಂಡವಾಳ: ಕಚ್ಚಾ ಸರಕುಗಳಾದ ಬಿತ್ತನೆ ಬೀಜ, ಗೊಬ್ಬರ ಇತ್ಯಾದಿಗಳನ್ನು ಕೊಳ್ಳಲು ಬಳಸುವ ಹಣದ ಬಂಡವಾಳವನ್ನು 'ಪರಿಚಲನೆಯ ಬಂಡವಾಳ' ಎನ್ನುವರು. ಈ ಬಂಡವಾಳದ ಮೇಲಿನ ವೆಚ್ಚವನ್ನು ಉತ್ಪಾದಿತ ಸರಕುಗಳ ಮಾರಾಟದ ನಂತರ ದೊರೆಯುವುದು.
3. ನಿರ್ದಿಷ್ಟ ಉದ್ದೇಶದ ಬಂಡವಾಳ: ನಿರ್ದಿಷ್ಟ ಬಾಳಿಕೆಗೆ ಮಾತ್ರ ಬಳಸುವ ವಸ್ತುಗಳ ಮೇಲೆ ಹೂಡುವ ಬಂಡವಾಳಕ್ಕೆ 'ನಿರ್ದಿಷ್ಟ ಉದ್ದೇಶದ ಬಂಡವಾಳ' ಎನುತ್ತಾರೆ.

ಉದಾಹರಣೆಗೆ: ಬಟ್ಟೆ ನೇಯುವ ಯಂತ್ರವನ್ನು ಬಟ್ಟೆಯ ಮಿಲ್ಲುಗಳಲ್ಲಿ ಮಾತ್ರ ಬಳಸಬಹುದು.

4. ಚರ ಬಂಡವಾಳ: ವಿವಿಧ ಉದ್ದೇಶಗಳಲ್ಲಿ ಬಳಸಲ್ಪಡುವ ಸಾಮರ್ಥವನ್ನು ಹೊಂದಿರುವ ಬಂಡವಾಳವನ್ನು 'ಚರ ಬಂಡವಾಳ' ಎನ್ನುವರು. ಉದಾಹರಣೆಗೆ: ವಿದ್ಯುತ್‌ಶಕ್ತಿ, ಇಂಧನವನ್ನು ವಿವಿಧ ಉದ್ದೇಶಗಳಿಗೆ ಬಳಸಬಹುದು.

5. ಕಾರ್ಯನಿರ್ವಾಹಕ ಬಂಡವಾಳ: ಉತ್ಪಾದಕನು ಉತ್ಪಾದನಾ ಪ್ರಕ್ರಿಯೆಯನ್ನು ಯಾವುದೇ ಅಡೆತಡೆಗಳಿಲ್ಲದೇ ಮುಂದುವರೆಸಲು ತನ್ನ ಬಳಿ ಸಿದ್ಧವಾಗಿ ಇಟ್ಟುಕೊಂಡಿರುವ ಬಂಡವಾಳವನ್ನು 'ಕಾರ್ಯನಿರ್ವಾಹಕ ಬಂಡವಾಳ' ಎನ್ನುವರು. ಇದನ್ನು ದ್ರವ್ಯರೂಪದ ಬಂಡವಾಳವೆಂದೂ ಕರೆಯುವರು.

6. ನೈಜ ಬಂಡವಾಳ: ಹಣವನ್ನು ಹೊರತುಪಡಿಸಿ ಇತರೆ ಗೋಚರ ಬಂಡವಾಳ ಸರಕುಗಳಾದ ಯಂತ್ರೋಪಕರಣಗಳು, ಸ್ಥಾವರ, ಕಚ್ಚಾ ಸರಕು ಮತ್ತು ಸಲಕರಣೆಗಳನ್ನು 'ನೈಜ ಬಂಡವಾಳ' ಎನ್ನುವರು.

7. ಖಾಸಗಿ ಬಂಡವಾಳ: ಬಂಡವಾಳ ಆಸ್ತಿಗಳ ಮಾಲೀಕತ್ವವನ್ನು ಖಾಸಗಿ ವ್ಯಕ್ತಿಗಳು ಹೊಂದಿದ್ದರೆ ಅದನ್ನು 'ಖಾಸಗಿ ಬಂಡವಾಳ' ಎನ್ನುವರು. ಉದಾಹರಣೆಗೆ: ಖಾಸಗಿ ಆಸ್ಪತ್ರೆ, ಖಾಸಗಿ ಶಾಲೆ ಇತ್ಯಾದಿ.

8. ಸಾರ್ವಜನಿಕ ಬಂಡವಾಳ: ಬಂಡವಾಳ ಆಸ್ತಿಗಳ ಮಾಲೀಕತ್ವ ಮತ್ತು ನಿರ್ವಹಣೆ ಸರ್ಕಾರ ಮಾಡುತ್ತಿದ್ದರೆ ಅದನ್ನು 'ಸಾರ್ವಜನಿಕ ಬಂಡವಾಳ' ಎನ್ನುವರು. ಉದಾಹರಣೆಗೆ: ಭಾರತೀಯ ರೈಲ್ವೆ, ಸರ್ಕಾರಿ ಕಾರ್ಖಾನೆ, ರಸ್ತೆ, ಕಾಲುವೆ, ಕಟ್ಟಡ, ವಿದ್ಯುತ್ ಉತ್ಪಾದನಾ ಕೇಂದ್ರಗಳು ಇತ್ಯಾದಿ.

9. ಮಾನವ ಬಂಡವಾಳ: ಉದ್ಯೋಗಿಗಳ ಶಿಕ್ಷಣ, ಜ್ಞಾನ, ಕೌಶಲ್ಯ, ವೈಯಕ್ತಿಕ ಮಾನವ ಪ್ರತಿಭೆಗಳನ್ನು 'ಮಾನವ ಬಂಡವಾಳ' ಒಳಗೊಂಡಿದೆ. ಇದಲ್ಲದೇ ಉದ್ಯೋಗಿಗಳ ಸ್ವಭಾವತಃ ಅಭ್ಯಾಸಗಳು ಹಾಗೂ ದೈಹಿಕ ಮತ್ತು ಬೌದ್ಧಿಕ ಆರೋಗ್ಯದ ಶಕ್ತಿಯ ಮಟ್ಟವನ್ನು ಮಾನವ ಬಂಡವಾಳ ಒಳಗೊಂಡಿದೆ.

10. ಸಾಮಾಜಿಕ ಬಂಡವಾಳ: ಸಾಮಾಜಿಕ ಬಂಡವಾಳವು ಆರ್ಥಿಕ ಮತ್ತು ಸಾಂಸ್ಕೃತಿಕ ಬಂಡವಾಳದ ಒಂದು ಬಗೆಯಾಗಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪ್ರತಿನಿಧಿಸುವ ಸಾಮಾಜಿಕ ಜಾಲಗಳು ಇಲ್ಲಿ ಪ್ರಮುಖವಾಗಿದೆ. ಸಮಾಜದಲ್ಲಿ ಆರ್ಥಿಕ ಬಂಧಗಳನ್ನು ಬಲಪಡಿಸಲು ಸಾಮಾಜಿಕ ಬಂಡವಾಳವನ್ನು ಬಳಸಲಾಗುತ್ತದೆ.

ಬಂಡವಾಳದ ಮಹತ್ವ:

1. ಬಂಡವಾಳವು ಅರ್ಥವ್ಯವಸ್ಥೆಯಲ್ಲಿ ಎಲ್ಲಾ ಉತ್ಪಾದನಾಂಗಗಳಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. ದೇಶದ ಆರ್ಥಿಕ ಅಭಿವೃದ್ಧಿಯು ಕೇವಲ ಲಭ್ಯವಿರುವ ಭೂಮಿ ಮತ್ತು ಶ್ರಮವನ್ನು ಅವಲಂಬಿಸಿರುವುದಲ್ಲದೇ, ಲಭ್ಯವಿರುವ ಬಂಡವಾಳದ ಪ್ರಮಾಣವನ್ನು

ಅವಲಂಬಿಸಿದೆ. ಬಂಡವಾಳದ ಹೊರತಾಗಿ ಉತ್ಪಾದನಾಂಗಗಳಾದ ಭೂಮಿ, ಶ್ರಮ ಮತ್ತು ಸಂಘಟನೆಗಳನ್ನು ಸಂಯೋಜಿಸಲು ಸಾಧ್ಯವಾಗುವುದಿಲ್ಲ. ಬಂಡವಾಳದ ಅಲಭ್ಯತೆ ಇದ್ದಾಗ ಸಂಘಟನೆಯನ್ನು ಸ್ಥಾಪಿಸಲು ಸಾಧ್ಯವಿಲ್ಲ. ಆದ್ದರಿಂದ ಬಂಡವಾಳವು ಉತ್ಪಾದನಾ ಪ್ರಕ್ರಿಯೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

2. ಒಂದು ದೇಶವು ಭೂಮಿ ಮತ್ತು ಶ್ರಮದ ಸಂಪನ್ಮೂಲದಲ್ಲಿ ಶ್ರೀಮಂತವಾಗಿದ್ದರೂ ಬಂಡವಾಳದ ಕೊರತೆಯನ್ನು ಎದುರಿಸುತ್ತಿದ್ದಲ್ಲಿ, ಅದು ಅಭಿವೃದ್ಧಿ ಹೊಂದಿದ ದೇಶವಾಗುವುದಿಲ್ಲ. ಬಂಡವಾಳದ ಯಥೇಚ್ಛ ಪೂರೈಕೆಯು ಉತ್ಪಾದನೆಯನ್ನು ಉತ್ತೇಜಿಸುವುದು. ಉತ್ಪಾದನೆಯಲ್ಲಿನ ಹೆಚ್ಚಳ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸುವ ಮೂಲಕ ಉದ್ಯೋಗಾವಕಾಶಗಳ ಸೃಷ್ಟಿಗೆ ಕಾರಣವಾಗುವುದು.

3. ಉದ್ಯೋಗಾವಕಾಶಗಳ ಸುಧಾರಣೆಯು ದೇಶದ ಬಡತನದ ಪ್ರಮಾಣವನ್ನು ಕಡಿಮೆ ಮಾಡುವುದು ಮತ್ತು ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವುದು. ಹೀಗೆ ಬಂಡವಾಳವು ಆರ್ಥಿಕತೆಯ ಬೆಳವಣಿಗೆಗೆ ನೆರವಾಗುತ್ತದೆ.

4. ಸಂಘಟನೆ

ಸಂಘಟನೆಯು ಒಂದು ಉತ್ಪಾದನಾಂಗವಾಗಿದ್ದು, ಇದು ಎಲ್ಲಾ ಉತ್ಪಾದನಾಂಗಗಳನ್ನು ಒಟ್ಟುಗೂಡಿಸುವ ಮತ್ತು ಸಮನ್ವಯಗೊಳಿಸುವ ಕಾರ್ಯವನ್ನು ನಿರ್ವಹಿಸುವುದು. ಉತ್ಪಾದನಾ ಪ್ರಕ್ರಿಯೆಯನ್ನು ಸರಾಗವಾಗಿ ನಡೆಸಲು ಮತ್ತು ಯಶಸ್ವಿಗೊಳಿಸಲು ಸಮರ್ಪಕವಾದ ಯೋಜನೆ ಮತ್ತು ಅನುಷ್ಠಾನ ನೆರವಾಗುತ್ತವೆ. ಸಂಘಟನೆಯ ಕಾರ್ಯವನ್ನು ಉದ್ಯಮಶೀಲರು ಕೈಗೊಳ್ಳುತ್ತಾರೆ. ಉದ್ಯಮಶೀಲರೇ ಅಗತ್ಯವಿರುವ ಉತ್ಪಾದನೆಯನ್ನು ಮಾಡಲು ಕೆಲಸವನ್ನು ಪ್ರಾರಂಭಿಸಿ, ಅದರ ವೇಗವನ್ನು ಹೆಚ್ಚಿಸುವನು ಮತ್ತು ಮೇಲ್ವಿಚಾರಣೆಯನ್ನು ಮಾಡುವನು. ಉದ್ಯಮಶೀಲರು ಉತ್ಪಾದನಾಂಗಗಳ ನೆರವಿನಿಂದ ಉತ್ಪಾದಿಸಿ, ಭವಿಷ್ಯದಲ್ಲಿ ಉತ್ಪನ್ನವನ್ನು ಮಾರಾಟ ಮಾಡಬೇಕಾಗಿರುವುದರಿಂದ ಅನಿಶ್ಚಿತತೆಯ ಗಂಡಾಂತರವನ್ನು ಎದುರಿಸುವರು. ಉದ್ಯಮಶೀಲರು ಆವಿಷ್ಕಾರಕರಾಗಿಯೂ ಪಾತ್ರ ನಿರ್ವಹಿಸಿ ಉತ್ಪಾದನಾ ಪ್ರಕ್ರಿಯೆ ಮತ್ತು ವ್ಯವಹಾರದಲ್ಲಿ ಹೊಸ ಆಲೋಚನೆಗಳನ್ನು ಅಳವಡಿಸುವರು. ಉದ್ಯಮಶೀಲರು ಎಲ್ಲಾ ಉತ್ಪಾದನಾಂಗಗಳು ಸಾಮರಸ್ಯದಿಂದ ಕೆಲಸ ನಿರ್ವಹಿಸುವಂತೆ ಖಚಿತಪಡಿಸಿಕೊಳ್ಳುವರು.

ಸಂಘಟನೆಯ ಪ್ರಮುಖ ಲಕ್ಷಣಗಳೆಂದರೆ:

೧) ಆರಂಭಕಾರ: ಸಂಘಟನೆಯ ನಿಟ್ಟಿನಲ್ಲಿ ಮೊದಲ ಹಂತವೆಂದರೆ ಏನನ್ನು ಉತ್ಪಾದಿಸಬೇಕು? ಉತ್ಪಾದನೆಯಲ್ಲಿ ಯಾವ ಪ್ರಕ್ರಿಯೆಯನ್ನು ಬಳಸಬೇಕು? ಎಷ್ಟು ಪ್ರಮಾಣದಲ್ಲಿ ಉತ್ಪಾದಿಸಬೇಕು? ಯಾರಿಗೆ ಸರಕನ್ನು ಮಾರಾಟ ಮಾಡಬೇಕು? ಮತ್ತು ಬಂಡವಾಳದ ಮೂಲಗಳಾವುವು? ಈ ವಿಷಯಗಳನ್ನು ಉದ್ದೇಶಿಸಿ ಉದ್ಯಮಶೀಲರು ತನ್ನ ಗುರಿಯನ್ನು ಸಾಧಿಸಲು ಯೋಜನೆಯನ್ನು ರೂಪಿಸುವರು.

೨) ಸಂಘಟನಾಕಾರ: ಸಂಘಟನಾಕಾರನು ತನ್ನ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಕಚ್ಚಾ ಸರಕುಗಳು ಸೇರಿದಂತೆ ಎಲ್ಲಾ ಉತ್ಪಾದನಾಂಗಗಳಾದ

ಭೂಮಿ, ಶ್ರಮ ಮತ್ತು ಬಂಡವಾಳವನ್ನು ಒಗ್ಗೂಡಿಸುವನು. ಸಂಘಟನೆಯಿಂದಾಗಿ ಕನಿಷ್ಠ ವೆಚ್ಚದಲ್ಲಿ ಗರಿಷ್ಠ ಉತ್ಪಾದನೆಯಾಗುವುದು ಮತ್ತು ಲಭ್ಯವಿರುವ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡುವುದಾಗಿದೆ.

೩) ಮೇಲ್ವಿಚಾರಣೆ ಮತ್ತು ನಿಯಂತ್ರಣ: ಮೇಲ್ವಿಚಾರಣೆ ಎಂದರೆ 'ಉಸ್ತುವಾರಿಯಾಗಿದೆ'. ಉತ್ಪಾದನಾ ಪ್ರಕ್ರಿಯೆಯಲ್ಲಿ ಸಂಘಟನಾಕಾರನು ಉತ್ಪಾದನಾ ಪ್ರಕ್ರಿಯೆಯು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆಯೆಂದು ಖಚಿತಪಡಿಸಿಕೊಳ್ಳಬೇಕು. ಸರಿಯಾದ ಜನರು ಸರಿಯಾದ ಸ್ಥಳದಲ್ಲಿ ಮತ್ತು ಎಲ್ಲಾ ಇಲಾಖೆಗಳು, ಉತ್ಪಾದನಾಂಗಗಳು ಉತ್ಪಾದನೆಯ ಉದ್ದೇಶಿತ ಗುರಿಯನ್ನು ತಲುಪುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವಂತೆ ಮೇಲ್ವಿಚಾರಣೆ ಮಾಡಬೇಕು. ಅಲ್ಲದೆ ಈ ಪ್ರಕ್ರಿಯೆಯನ್ನು ಹಾಳುಮಾಡುವಂತಹ ಯಾವುದೇ ಮಾರುಕಟ್ಟೆಯಲ್ಲಿನ ಬದಲಾವಣೆ, ಸರ್ಕಾರದ ನೀತಿಯಲ್ಲಿನ ಬದಲಾವಣೆ ಇತ್ಯಾದಿಗಳ ಮೇಲೆ ನಿಗಾ ಮತ್ತು ನಿಯಂತ್ರಣ ಹೊಂದಿರಬೇಕು.

೪) ವ್ಯವಹಾರದ ವಿಸ್ತರಣೆ: ಉದ್ಯಮಶೀಲರು ಸದಾ ತನ್ನ ಉದ್ಯಮವನ್ನು ವಿಸ್ತರಿಸಲು ಅವಕಾಶವನ್ನು ಹುಡುಕುತ್ತಿರುತ್ತಾರೆ. ಅವರ ಈ ಹೆಚ್ಚಿನ ಪೈಪೋಟಿಯುಕ್ತ ಜಗತ್ತಿನಲ್ಲಿ ಹೊಸ ಮಾರುಕಟ್ಟೆಗಾಗಿ ಶೋಧನೆಯನ್ನು ಮಾಡುತ್ತಿರುತ್ತಾರೆ.

೫) ನಿರ್ಧಾರವನ್ನು ಕೈಗೊಳ್ಳುವವರು: ಉದ್ಯಮಶೀಲರು ಸರಿಯಾದ ಮತ್ತು ನ್ಯಾಯಯುತ ನಿರ್ಧಾರವನ್ನು ಕೈಗೊಳ್ಳುವರು ಎಂದು ನಿರೀಕ್ಷಿಸಲಾಗುತ್ತದೆ. ತಪ್ಪು ಮತ್ತು ವಿಳಂಬಿತ ನಿರ್ಧಾರಗಳು ಯೋಜನೆಯ ವೆಚ್ಚವನ್ನು ಹೆಚ್ಚಿಸುವುದು ಮತ್ತು ಲಾಭದ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರುವುದು.

೬) ಚೌಕಾಸಿ ಕೌಶಲ್ಯ ಮತ್ತು ವೃತ್ತಿಪರ ನಡವಳಿಕೆ: ಉದ್ಯಮಶೀಲರು ಅನುಭೋಗಿಗಳು, ಕಾರ್ಮಿಕರು, ಸರ್ಕಾರಿ ಅಧಿಕಾರಿಗಳು ಹೀಗೆ ವೈವಿಧ್ಯಮಯ ವ್ಯಕ್ತಿಗಳೊಂದಿಗೆ ವ್ಯವಹರಿಸುವುದರಿಂದ ಉದ್ಯಮಶೀಲರಿಗೆ ಉತ್ತಮ ಸಂವಹನ ಮತ್ತು ಚೌಕಾಸಿಯ ಕೌಶಲ್ಯಗಳಿರಬೇಕು. ಅವರು ತಮ್ಮ ನಡವಳಿಕೆ ಮತ್ತು ಮಾರ್ಗದಲ್ಲಿ ವೃತ್ತಿಪರತೆಯನ್ನು ಹೊಂದಿರಬೇಕು.

೭) ಗಂಡಾಂತರ ಮತ್ತು ಅನಿಶ್ಚಿತತೆಯನ್ನು ನಿವಾರಿಸುವನು: ಸರಕಿನ ಉತ್ಪಾದನೆಯು ಸದಾ ಭವಿಷ್ಯದಲ್ಲಿ ಆ ಸರಕಿಗೆ ಬೇಡಿಕೆ ಬರಬಹುದೆಂಬ ನಿರೀಕ್ಷೆಯನ್ನು ಅವಲಂಬಿಸಿರುವುದು. ಅಭಿರುಚಿ, ಫ್ಯಾಶನ್, ಸರ್ಕಾರದ ನೀತಿಯಲ್ಲಿನ ಬದಲಾವಣೆ ಮುಂತಾದುವುಗಳು ಗಂಡಾಂತರಗಳಾಗಿದ್ದು, ಅದರ ಆಧಾರದ ಮೇಲೆ ನಿರ್ಣಯ ತೆಗೆದುಕೊಳ್ಳುವರು. ಉದ್ಯಮಶೀಲರು ಈ ಸನ್ನಿವೇಶಗಳನ್ನು ನಿರ್ವಹಿಸುವಷ್ಟು ಸಾಮರ್ಥ್ಯವನ್ನು ಹೊಂದಿರಬೇಕು.

೮) ಆವಿಷ್ಕಾರಕರಕ: ಉದ್ಯಮಿಯು ಆವಿಷ್ಕಾರಕರಕನು ಅಗಿರುತಾನೆ. ಉದ್ಯಮಿಯು ಹೊಸ ಉತ್ಪಾದನಾ ವಿಧಾನಗಳನ್ನು, ಕಚ್ಚಾ ಸರಕುಗಳ ಹೊಸ ಮೂಲವನ್ನು, ಉತ್ಪಾದನೆಯ ಹೊಸ ತಂತ್ರಜ್ಞಾನ ಇತ್ಯಾದಿಗಳನ್ನು ಉತ್ಪಾದನೆಯ ಪ್ರಕ್ರಿಯೆಯಲ್ಲಿ ಬಳಸುವಲ್ಲಿ ಸದಾ ಮುಂದಿರುತ್ತಾನೆ.

೯) ಕಂದಾಯ ಮತ್ತು ಆದಾಯ ಹಂಚಿಕೆ: ಉದ್ಯಮಶೀಲರ ಪ್ರಮುಖ ಕಾರ್ಯವೆಂದರೆ ಅದು ವಿವಿಧ ಉತ್ಪಾದನಾಂಗಗಳ ನೆಡುವೆ ಆದಾಯವನ್ನು ಹಂಚುವುದಾಗಿದೆ. ಉದಾಹರಣೆಗೆ ಭೂ ಮಾಲೀಕರಿಗೆ ಗೇಣಿ, ಬಂಡವಾಳದಾರನಿಗೆ ಬಡ್ಡಿ, ಕಾರ್ಮಿಕರಿಗೆ ಕೂಲಿ ಇತ್ಯಾದಿ. ವಾಣಿಜ್ಯೋದ್ಯಮಿಯು ಒಂದೇ ರೀತಿಯಲ್ಲಿ ಹಂಚಿಕೆ ಮಾಡುವ ಸಲುವಾಗಿ ಒಂದು ಕಾರ್ಯಸಾಧ್ಯ ಮಾದರಿಯನ್ನು ಅನುಸರಿಸಬೇಕು.

೧೦) ಸರ್ಕಾರದ ಕಾಯ್ದೆ ಮತ್ತು ಕಾನೂನು: ಉದ್ಯಮಶೀಲನು ತಾನು ಸರ್ಕಾರದ ಎಲ್ಲಾ ಕಾಯ್ದೆ ಮತ್ತು ಕಾನೂನು ಪಾಲಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಉದ್ಯಮಶೀಲರು ದೇಶದಲ್ಲಿ ಜಾರಿಯಲ್ಲಿರುವ ತೆರಿಗೆಯ ಕಾರ್ಯವಿಧಾನವನ್ನು ಮತ್ತು ಇತರೆ ಕಾಯ್ದೆ ಮತ್ತು ಕಾನೂನುಗಳನ್ನು ಪಾಲಿಸುತ್ತಿರಬೇಕು.

ಸಂಘಟನೆಯ (ಉದ್ಯಮಶೀಲನ) ಮಹತ್ವ:

ಉತ್ಪಾದನಾ ಪ್ರಕ್ರಿಯೆಯು ಬಹುತೇಕ ಸಂಕೀರ್ಣವಾಗಿದ್ದು, ತಂತ್ರಜ್ಞಾನ ಅಥವಾ ಹೊಸ ಆವಿಷ್ಕಾರಕರಗಳಿಂದ ಪ್ರಭಾವಕ್ಕೆ ಒಳಗಾಗುವುದು. ಹಾಗಾಗಿ, ಎಲ್ಲಾ ಅಗತ್ಯ ಉತ್ಪಾದನಾಂಗಗಳು ವ್ಯವಸಿತವಾಗಿದೆಯೇ ಮತ್ತು ಪ್ರಕ್ರಿಯೆಯನ್ನು ಸರಿಯಾಗಿ ಯೋಜಿಸಿ ಕಾರ್ಯಗತಗೊಳಿಸಲಾಗಿದೆಯೇ ಎಂಬುದು ಮಹತ್ವದ್ದಾಗಿದೆ. ಉದ್ಯಮಶೀಲರೇ ಸಂಘಟನೆಯ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುವವನಾಗಿದ್ದಾರೆ.

ಅಭ್ಯಾಸ

1. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಉತ್ಪಾದನಾಂಗಗಳು ಒಳಗೊಂಡಿರುವುದು _______

ಅ ಭೂಮಿ
ಆ ಶ್ರಮ
ಇ. ಬಂಡವಾಳ
ಈ. ಮೇಲಿನ ಎಲ್ಲವೂ.

2. ಭೂಮಿಯು ಸ್ವಭಾವತಃ _______ ವಾದುದ್ದು.

ಅ. ತಟಸ್ಥ
ಆ. ಕ್ರಿಯಾಶೀಲ
ಇ. ನಿಷ್ಕ್ರಿಯ
ಈ. ಮೇಲಿನ ಯಾವುದು ಅಲ್ಲ.

3. ಶ್ರಮ ಒಂದು _______

ಅ. ನಾಶ ಹೊಂದುವಂತಹುದು
ಆ. ಕಡಿಮೆ ಚಲನಶೀಲತ್ವ
ಇ. ಒಂದು ಯಂತ್ರ
ಈ. ಅ ಮತ್ತು ಆ ಎರಡೂ ಆಗಿದೆ.

4. ನಿರ್ದಿಷ್ಟ ಬಾಳಿಕೆಗಾಗಿ ಮಾತ್ರ ಬಳಸುವ ವಸ್ತುಗಳ ಮೇಲೆ ಹೂಡುವ ಬಂಡವಾಳಕ್ಕೆ ________ ಎನ್ನುವರು.

ಅ. ನಿರ್ದಿಷ್ಟ ಉದ್ದೇಶ ಬಂಡವಾಳ
ಆ. ಸ್ಥಿರ ಬಂಡವಾಳ
ಇ. ನೈಜ ಬಂಡವಾಳ
ಈ. ಕಾರ್ಯಕಾರಿ ಬಂಡವಾಳ.

5. ಉದ್ಯಮಶೀಲನು ವಹಿಸುವ ಪ್ರಮುಖ ಪಾತ್ರ ________ ಆಗಿದೆ.

ಅ. ಸಂಘಟನೆ
ಆ. ಅನ್ವೇಷಣೆ
ಇ. ಗಂಡಾಂತರ ತೆಗೆದುಕೊಳ್ಳುವುದು
ಈ. ಮೇಲಿನ ಎಲ್ಲವೂ.

2. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಉತ್ಪಾದನೆ ಎಂದರೆ ________ಸೃಷ್ಟಿಸುವುದಾಗಿದೆ.
2. ಭೂಮಿಯು ನಮಗೆ ________ ನೀಡಲಾದ ಉಚಿತ ಕೊಡುಗೆಯಾಗಿದೆ.
3. ಒಂದು ಸರಕನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಿದರೆ ಅದನ್ನು ________ತುಷ್ಟಿಗುಣ ಎನುವರು.
4. ಶ್ರಮವನ್ನು ________ ನಿಂದ ಬೇರ್ಪಡಿಸಲು ಸಾಧ್ಯವಿಲ್ಲ.
5. ಭಾರತೀಯ ರೈಲ್ವೆಯು ________ ಬಂಡವಾಳಕ್ಕೆ ಉದಾಹರಣೆಯಾಗಿದೆ.

3. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಉತ್ಪಾದನೆ ಎಂದರೇನು?
2. ರೂಪ ತುಷ್ಟಿಗುಣಕ್ಕೆ ಒಂದು ಉದಾಹರಣೆ ಕೊಡಿ.
3. ಭೂಮಿ ಎಂದರೇನು?
4. ಶ್ರಮದ ಅರ್ಥ ತಿಳಿಸಿ.
5. ಬಂಡವಾಳ ಎಂದರೇನು?

4. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ತುಷ್ಟಿಗುಣದ ವಿವಿಧ ಪ್ರಕಾರಗಳು ಯಾವುವು?

2. ನಾಲ್ಕು ಉತ್ಪಾದನಾಂಗಗಳ ಬಗ್ಗೆ ಬರೆಯಿರಿ.
3. ಬಂಡವಾಳದ ಎರಡು ಗುಣಲಕ್ಷಣಗಳನ್ನು ವಿವರಿಸಿ.
4. ಸ್ಥಿರ ಬಂಡವಾಳ ಎಂದರೇನು?
5. ಸಂಘಟನೆ ಎಂದರೇನು?

5. ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯದಲ್ಲಿ ಉತ್ತರಿಸಿ.

1. ತುಷ್ಟಿಗುಣದ ವಿವಿಧ ಪ್ರಕಾರಗಳನ್ನು ವಿವರಿಸಿ.
2. ಭೂಮಿಯ ಯಾವುದಾದರೂ ನಾಲ್ಕು ಗುಣಲಕ್ಷಣಗಳನು ಚರ್ಚಿಸಿ.
3. ಶ್ರಮ ದಕ್ಷತೆಯನ್ನು ಪ್ರಭಾವಿಸುವ ವಿವಿಧ ಅಂಶಗಳ ಬಗ್ಗೆ ಟಿಪ್ಪಣಿ ಬರೆಯಿರಿ.
4. ಸಂಘಟನೆಯ ವಿವಿಧ ಗುಣಲಕ್ಷಣಗಳ ಬಗ್ಗೆ ಸಂಕ್ಷಿಪ್ತವಾಗಿ ಟಿಪ್ಪಣಿ ಬರೆಯಿರಿ.
5. ಬಂಡವಾಳದ ನಾಲ್ಕು ವಿಧಗಳನ್ನು ವಿವರಿಸಿ.

ಯೋಜನಾ ಕಾರ್ಯ:

1. ನಿಮ್ಮ ನೆರೆಹೊರೆಯಲ್ಲಿರುವ ಹತ್ತು ಜನರ ಶ್ರಮದ ದಕ್ಷತೆಯನ್ನು ವೈಯಕ್ತಿಕ ಗುಣಮಟ್ಟ ಮತ್ತು ಕೆಲಸದ ಸ್ಥಿತಿಗತಿಯ ಆಧಾರದಲ್ಲಿ ಪಟ್ಟಿ ಮಾಡಿರಿ.
2. ನಿಮ್ಮ ಜಿಲ್ಲೆಯಲ್ಲಿರುವ ವಿವಿಧ ಉತ್ಪಾದನಾ ಘಟಕಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಮತ್ತು ಅದರ ಬಗ್ಗೆ ಬರೆಯಿರಿ.

ಅಧ್ಯಾಯ–10 ಸರಕು ಮತ್ತು ಮಾರುಕಟ್ಟೆ

''ಮಾರುಕಟ್ಟೆ ಎಂಬುದು ಸರಳವಾಗಿ ಯಾವುದೇ ಸರಕು ಅಥವಾ ಉತ್ಪಾದನಾಂಗವನ್ನು ಕೊಳ್ಳುವ ಮತ್ತು ಮಾರುವವರಿಂದ ಕೂಡಿರುವ ಒಂದು ಜಾಲವಾಗಿದೆ.'' —-ಕೈರ್ನಾಕ್ರಾಸ್

ಪೀಠಿಕೆ:

ಸರಕು ಮತ್ತು ಮಾರುಕಟ್ಟೆಯು ಮಾನವನ ಯೋಗಕ್ಷೇಮದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ನಾವು ನಮ್ಮ ಮನೆಯಲ್ಲಿ ಹಲವು ಸರಕುಗಳನ್ನು ಬಳಸುತ್ತೇವೆ. ಅವುಗಳೆಂದರೆ ಆಹಾರ, ಬಟ್ಟೆ, ಪೀಠೋಪಕರಣ, ಪುಸ್ತಕಗಳು, ದೂರದರ್ಶನ ಇತ್ಯಾದಿ. ನಾವು ಈ ಸರಕು ಮತ್ತು ಅಗತ್ಯ ಸರಕುಗಳನ್ನು ಮಾರುಕಟ್ಟೆಯಲ್ಲಿ ಕೊಂಡುಕೊಳ್ಳುತ್ತೇವೆ. ಒಂದು ದೇಶವು ಉತ್ಪಾದಿಸಬಹುದಾದ ಸರಕುಗಳ ಪ್ರಮಾಣ ಮತ್ತು ಮಾರಾಟ ಅಥವಾ ಮಾರುಕಟ್ಟೆಯು ಆರ್ಥಿಕ ಸಮೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಆದ್ದರಿಂದ ನಾವು ಸರಕುಗಳು ಎಂದರೇನು? ಸರಕುಗಳ ವಿಧಗಳು ಯಾವುವು? ಸರಕುಗಳ ವಿವಿಧ ಲಕ್ಷಣಗಳು ಯಾವುವು? ಮಾರುಕಟ್ಟೆ ಎಂದರೇನು? ಮಾರುಕಟ್ಟೆಯ ವಿವಿಧ ವಿಧಗಳು ಯಾವುವು? ಈ ಮಾರುಕಟ್ಟೆಯ ಲಕ್ಷಣಗಳು ಯಾವುವು? ಈ ಅಧ್ಯಾಯವು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲು ಹಾಗೂ ಸರಕು ಮತ್ತು ಮಾರುಕಟ್ಟೆಗೆ ಸಂಬಂಧಿಸಿದ ಇತರೆ ವಿಷಯಗಳನ್ನು ಚರ್ಚಿಸುತ್ತದೆ.

ಸರಕುಗಳ ಅರ್ಥ:

ಮಾನವನಿಗೆ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳಲು ವಿವಿಧ ಬಗೆಯ ಸರಕುಗಳ ಅಗತ್ಯವಿದೆ. ಸರಕುಗಳಿಗೆ ಭೌತಿಕ ಅಸ್ತಿತ್ವವಿದ್ದು, ಅದನ್ನು ನೋಡಲು ಮತ್ತು ಸ್ಪರ್ಶಿಸಲು ಸಾಧ್ಯವಿದೆ. ಇವು ಮಾನವನ ಬಯಕೆಗಳನ್ನು ತುಷ್ಟಿಗುಣದ ಮೂಲಕ ಈಡೇರಿಸುತ್ತವೆ. ಉದಾಹರಣೆಗೆ ವಿದ್ಯುತ್ ಚಾಲಿತ ಫ್ಯಾನು ಬೇಸಿಗೆಯಲ್ಲಿ ನಮ್ಮ ಜೀವನವನ್ನು ಸುಖದಾಯಕಗೊಳಿಸುವುದು ಅಥವಾ ಛತ್ರಿಯು ನಮ್ಮನ್ನು ಮಳೆಯಿಂದ ಕಾಪಾಡುವುದು, ಸರಕುಗಳನ್ನು ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಯ ಸಂಪನ್ಮೂಲಗಳನ್ನು ಬಳಸಿಕೊಂಡು ಉತ್ಪಾದಿಸಲಾಗುತ್ತದೆ. ಈ ಉತ್ಪಾದಿತ ಸರಕುಗಳನ್ನು ಮಾರುಕಟ್ಟೆಗೆ ಸಾಗಿಸಲಾಗುವುದು. ಅಲ್ಲಿ ಸರಕುಗಳ ವ್ಯಾಪಾರ ಮತ್ತು ವ್ಯವಹಾರವು (ಮಾರುವಿಕೆ ಮತ್ತು ಕೊಳ್ಳುವಿಕೆ) ಏರ್ಪಡುವುದು. ಮಾನವನ ಜೀವನದ ಗುಣಮಟ್ಟವನ್ನು ಸುಧಾರಿಸಲು ವಿವಿಧ ಪ್ರಮಾಣ ಮತ್ತು ಗುಣಮಟ್ಟದ ಸರಕುಗಳ ಅಗತ್ಯವಿದೆ. ಆದ್ದರಿಂದ, ಸರಕುಗಳು ಎಲ್ಲಾ ಆರ್ಥಿಕ ಚಟುವಟಿಕೆಗಳ ಆರಂಭದ ಮೂಲವಾಗಿದೆ.

ಸರಕುಗಳ ವಿಧಗಳು:

ನಾವು ವಿವಿಧ ಬಗೆಯ ಸರಕುಗಳನ್ನು ಬಳಸುತ್ತೇವೆ ಮತ್ತು ಅವುಗಳನ್ನು ವೈಯಕ್ತಿಕವಾಗಿ ಅಧ್ಯಯನ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಅವುಗಳನ್ನು ನಾವು ವಿಶಾಲ ಗುಂಪಾಗಿ ವಿಂಗಡಿಸಿ ಅರ್ಥೈಸಿಕೊಳ್ಳಬಹುದು. ಹಲವು ವಿಧಗಳಲ್ಲಿ ಮಾಡಬಹುದಾದ ಈ

ವಿಂಗಡಣೆಯು ವಿವಿಧ ಸರಕುಗಳ ಮಹತ್ವವನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತವೆ. ಅತ್ಯಂತ ಸಾಮಾನ್ಯವಾದ ವಿಂಗಡಣೆಯೆಂದರೆ:

1. ಉಚಿತ ಸರಕು ಮತ್ತು ಆರ್ಥಿಕ ಸರಕುಗಳು
2. ಅನುಭೋಗಿ ಸರಕು ಮತ್ತು ಉತ್ಪಾದಕ ಸರಕುಗಳು
3. ಏಕ ಬಳಕೆಯ ಸರಕು ಮತ್ತು ಬಾಳಿಕೆ ಬರುವ ಸರಕುಗಳು
4. ಮಧ್ಯವರ್ತಿ ಸರಕು ಮತ್ತು ಅಂತಿಮ ಸರಕುಗಳು
5. ಸಾರ್ವಜನಿಕ ಸರಕು ಮತ್ತು ಖಾಸಗಿ ಸರಕುಗಳು

1. **ಉಚಿತ ಸರಕು ಮತ್ತು ಆರ್ಥಿಕ ಸರಕುಗಳು:**

ಯಥೇಚ್ಚ ಪ್ರಮಾಣದಲ್ಲಿ ಲಭ್ಯವಿರುವ ಸರಕುಗಳಿಗೆ ನಾವು ಹಣ ನೀಡದೆ ಬಳಸುತ್ತೇವೆ. ಇಂತಹ ಸರಕುಗಳನ್ನು 'ಉಚಿತ ಸರಕುಗಳು' ಎನ್ನುವರು. ಉದಾಹರಣೆಗೆ ಮರುಭೂಮಿಯಲ್ಲಿ ಒಂದು ಕೆ. ಜಿ. ಮರಳಿಗೆ ಯಾವುದೇ ಹಣ ಪಾವತಿಸುವ ಅಗತ್ಯವಿಲ್ಲ, ಆದರೆ ನಗರ ಪ್ರದೇಶದಲ್ಲಿ ಅದೇ ಮರಳನ್ನು ಉತ್ತಮ ಬೆಲೆಗೆ ಮಾರುವರು. ಆದ್ದರಿಂದ, ಉಚಿತ ಸರಕುಗಳೆಂದರೆ ತುಷ್ಟಿಗುಣವನ್ನು ಹೊಂದಿದ್ದು ಯಾವುದೇ ಹಣವನ್ನು ಪಾವತಿಸುವ ಅಗತ್ಯವಿಲ್ಲದ ಸರಕುಗಳಾಗಿದೆ. ಉಚಿತ ಸರಕುಗಳು ನಿಸರ್ಗದ ಉಚಿತ ಕೊಡುಗೆಗಳಾಗಿವೆ. ಅವುಗಳ ಲಭ್ಯತೆಯು ಅವುಗಳ ಅಗತ್ಯತೆಗಿಂತ ಹೆಚ್ಚಾಗಿದೆ. ಅಂದರೆ ಅವುಗಳ ಪೂರೈಕೆಯು ಬೇಡಿಕೆಗಿಂತ ಹೆಚ್ಚಾಗಿರುತ್ತದೆ.

ಇದಕ್ಕೆ ವಿರುದ್ಧವಾಗಿ, ಆರ್ಥಿಕ ಸರಕುಗಳ ಲಭ್ಯತೆಯು ಅವುಗಳ ಅಗತ್ಯತೆಗಿಂತ ಕಡಿಮೆಯಿದೆ. ಅವುಗಳ ಪೂರೈಕೆಯು ಬೇಡಿಕೆಗಿಂತ ಕಡಿಮೆ ಇದ್ದು, ಈ ಕೊರತೆಯ ಕಾರಣದಿಂದಾಗಿ ಅವುಗಳಿಗೆ ಬೆಲೆಯನ್ನು ನೀಡುವರು. ಇವುಗಳು ನೀರು, ಮರಳು, ಮರ ಇತ್ಯಾದಿ ನಿಸರ್ಗದ ಉಚಿತ ಕೊಡುಗೆಯಾಗಿದ್ದು ಇಂದು ಇವುಗಳಲ್ಲಿ ಬಹುತೇಕ ಸರಕುಗಳು ಆರ್ಥಿಕ ಸರಕುಗಳಾಗಿವೆ. ಇಂದು ಗಾಳಿ ಉಚಿತ ಸರಕಿಗೆ ಉದಾಹರಣೆಯಾಗಿದ್ದು, ಮಾನವ ನಿರ್ಮಿತ ಸರಕುಗಳಾದ ಪುಸ್ತಕ, ಪೆನ್ನು, ಸಾಬೂನು (ಮಾರ್ಜಕ), ಬಟ್ಟೆ ಇತ್ಯಾದಿಗಳು ಆರ್ಥಿಕ ಸರಕುಗಳಿಗೆ ಉದಾಹರಣೆಯಾಗಿವೆ.

2. **ಅನುಭೋಗಿ ಸರಕು ಮತ್ತು ಉತ್ಪಾದಕ ಸರಕುಗಳು:**

ನಮ್ಮ ಬಯಕೆಯನ್ನು ತೃಪ್ತಿಪಡಿಸಿಕೊಳ್ಳಲು ನೇರವಾಗಿ ಬಳಸುವ ಸರಕುಗಳನ್ನು 'ಅನುಭೋಗಿ ಸರಕುಗಳು' ಎನ್ನುವರು. ಉದಾಹರಣೆಗೆ, ಬ್ರೆಡ್ಡು, ಪುಸ್ತಕ, ಪೆನ್ನು, ಇತ್ಯಾದಿ ಅನುಭೋಗಿ ಸರಕುಗಳು. ಆದರೆ ಇತರೆ ಸರಕುಗಳ ಉತ್ಪಾದನೆಯಲ್ಲಿ ಬಳಸಲಾಗುವ ಸರಕುಗಳನ್ನು 'ಉತ್ಪಾದಕ ಸರಕುಗಳು' ಎನ್ನುವರು. ಇವು ನಮ್ಮ ಬಯಕೆಯನ್ನು ಪರೋಕ್ಷವಾಗಿ ತೃಪ್ತಿ ಪಡಿಸುತ್ತವೆ. ಉದಾಹರಣೆಗೆ ಯಂತ್ರೋಪಕರಣಗಳು, ಕಚ್ಚಾ ಸರಕುಗಳು, ಸಲಕರಣೆಗಳು ಇತ್ಯಾದಿ. ಆದ್ದರಿಂದ, ರೈತನಿಗೆ ಟ್ರ್ಯಾಕ್ಟರ್, ಬಿತ್ತನೆ ಬೀಜ,

ರಸಗೊಬ್ಬರಗಳು ಮೊದಲಾದವು ಉತ್ಪಾದಕ ಸರಕುಗಳಾದರೆ, ಅವರು ಬೆಳೆಯುವ ಗೋಧಿ, ತರಕಾರಿ ಮತ್ತು ಹಣ್ಣುಗಳು ಅನುಭೋಗಿ ಸರಕುಗಳಾಗಿವೆ.

3. **ಏಕ ಬಳಕೆಯ ಸರಕು ಮತ್ತು ಬಾಳಿಕೆ ಬರುವ ಸರಕುಗಳು:**

ಏಕ ಬಳಕೆಯ ಸರಕುಗಳು ಎಂದರೆ, ಇವುಗಳು ಏಕ/ ಒಂದು ಬಳಕೆಗೆ ಮಾತ್ರ ಸೀಮಿತವಾಗಿದ್ದು ಆ ಬಳಕೆಯ ನಂತರ ಅವುಗಳು ನಾಶ ಹೊಂದುವವು. ಮುಂದುವರೆದು ಏಕ ಬಳಕೆಯ ಸರಕುಗಳನ್ನು ಅನುಭೋಗಿ ಸರಕುಗಳು ಮತ್ತು ಉತ್ಪಾದಕ ಸರಕುಗಳಾಗಿ ವರ್ಗೀಕರಿಸಬಹುದು. ನಾವು ನಮ್ಮ ದೈನಂದಿನ ಅನುಭೋಗವನ್ನು ಉದಾಹರಣೆಯಾಗಿ ಪರಿಗಣಿಸೋಣ. ನಾವು ಬ್ರೆಡ್ಡನ್ನು ತಿಂದ ನಂತರ ಅದು ಮುಂದಿನ ಅನುಭೋಗಕ್ಕೆ ಲಭ್ಯವಿರುವುದಿಲ್ಲ. ಹಾಗೆಯೇ ಟಿಪ್ಪಣಿ ಪುಸ್ತಕವನ್ನು ಪೂರ್ಣವಾಗಿ ಬಳಸಿದ ನಂತರ ಅದರ ಮರು ಬಳಕೆ ಸಾಧ್ಯವಿಲ್ಲ. ಅದೇ ರೀತಿ ಉತ್ಪಾದಕ ಸರಕುಗಳಾದ ಕಲ್ಲಿದ್ದಲು, ಡೀಸಲ್, ಕಬ್ಬನ್ನು ಉತ್ಪಾದನೆಯಲ್ಲಿ ಬಳಸಿದ ನಂತರ ಮುಂದಿನ ಬಳಕೆಗೆ ಇವುಗಳು ದೊರೆಯುವುದಿಲ್ಲ. ಈ ಸರಕುಗಳನ್ನು ನಮಗೆ ಅಗತ್ಯವಿರುವ ಪ್ರತಿ ಸಂದರ್ಭದಲ್ಲಿ ನಾವು ಕೊಂಡುಕೊಳ್ಳುವೆವು.

ಬಾಳಿಕೆ ಬರುವ ಸರಕುಗಳೆಂದರೆ, ದೀರ್ಘಕಾಲ ಬಾಳಿಕೆ ಬರುವ, ಪದೇ ಪದೇ ಬಳಸಬಹುದಾದ ಸರಕುಗಳಾಗಿವೆ. ಈ ಸರಕುಗಳನ್ನು ಅನುಭೋಗಿ ಮತ್ತು ಉತ್ಪಾದಕ ಸರಕುಗಳಾಗಿಯೂ ವರ್ಗೀಕರಿಸಬಹುದು. ಸರಕುಗಳಾದ ಬಟ್ಟೆ, ದೂರದರ್ಶಕ (ಟಿ. ವಿ.), ಕಂಪ್ಯೂಟರ್, ಪೀಠೋಪಕರಣ, ದ್ವಿಚಕ್ರ ಮೋಟಾರು ವಾಹನ ಇತ್ಯಾದಿಗಳು ಬಾಳಿಕೆ ಬರುವ ಸರಕುಗಳಾಗಿದ್ದು, ಅವುಗಳನ್ನು ಪ್ರತಿ ಬಾರಿ ಕೊಂಡುಕೊಳ್ಳುವುದಿಲ್ಲ. ಬಾಳಿಕೆ ಬರುವ ಸರಕುಗಳನ್ನು ಉತ್ಪಾದನೆಯಲ್ಲಿ ಪದೇ ಪದೇ ಬಳಸಬಹುದು. ಉದಾಹರಣೆಗೆ ಎಲ್ಲಾ ಯಂತ್ರೋಪಕರಣಗಳು, ಕಚ್ಚಾ ಸರಕುಗಳು, ಸಲಕರಣೆಗಳು, ಟ್ರ್ಯಾಕ್ಟರ್ ಇತ್ಯಾದಿ. ಆದರೆ, ಇವುಗಳ ಪದೇಪದೇ ಬಳಕೆಯು ಸವಕಳಿಯುಂಟು ಮಾಡುವುದರಿಂದ ಇವುಗಳ ನಿರ್ವಹಣೆ ಅಥವಾ ಸವಕಳಿ ವೆಚ್ಚವನ್ನು ಮಾಡುವ ಅಗತ್ಯವಿದೆ. ವಿದ್ಯಾರ್ಥಿಗಳಿಗೆ ಟಿಪ್ಪಣಿ ಪುಸ್ತಕ ಏಕ ಬಳಕೆಯ ಸರಕಾದರೆ, ಪಠ್ಯಪುಸ್ತಕ ಬಾಳಿಕೆ ಬರುವ ಸರಕಾಗಿದೆ.

4. **ಮಧ್ಯವರ್ತಿ ಸರಕು ಮತ್ತು ಅಂತಿಮ ಸರಕುಗಳು:**

ಸರಕುಗಳನ್ನು ಮಧ್ಯವರ್ತಿ ಮತ್ತು ಅಂತಿಮ ಸರಕುಗಳಾಗಿಯೂ ವರ್ಗೀಕರಿಸಬಹುದು. ಅಂತಿಮ ಸರಕುಗಳೆಂದರೆ ಅಂತಿಮ ಬಳಕೆಗಾಗಿ ಬಳಸುವ ಸರಕಾಗಿದೆ. ಮಧ್ಯವರ್ತಿ ಸರಕುಗಳನ್ನು ಅಂತಿಮ ಸರಕುಗಳ ಉತ್ಪಾದನೆಯಲ್ಲಿ ಬಳಸಲಾಗುತ್ತದೆ. ಆದ್ದರಿಂದ, ಗೋಧಿಯ ಹಿಟ್ಟು ಮಧ್ಯವರ್ತಿ ಸರಕಾದರೆ ಬ್ರೆಡ್ ಅಂತಿಮ ಸರಕಾಗಿದೆ. ಕಲ್ಲಿದ್ದಲು ಮಧ್ಯವರ್ತಿ ಸರಕಾಗಿದ್ದು, ಇದನ್ನು ವಿದ್ಯುತ್ ಉತ್ಪಾದಿಸಲು ಬಳಸುವರು. ಆದರೆ, ವಿದ್ಯುತ್ ಹಲವು ಸರಕುಗಳ ಉತ್ಪಾದನೆಯಲ್ಲಿ ಮಧ್ಯವರ್ತಿ ಸರಕಾಗಿದೆ. ಆದ್ದರಿಂದ ಮಧ್ಯವರ್ತಿ ಸರಕುಗಳು ಕಚ್ಚಾ ಸರಕು ಅಥವಾ ಇತರೆ ಉತ್ಪಾದಿತ ಸರಕಾಗಿದ್ದು ಉತ್ಪಾದನೆಯ ಮುಂದಿನ ಪ್ರಕ್ರಿಯೆಯಲ್ಲಿ ಬಳಸಲ್ಪಡುತ್ತದೆ.

5. **ಸಾರ್ವಜನಿಕ ಸರಕು ಮತ್ತು ಖಾಸಗಿ ಸರಕುಗಳು:**

ಯಾವ ಸರಕಿನ ಅನುಭೋಗದಿಂದ ಸಮಾಜದಲ್ಲಿ ಯಾರನ್ನೂ ಹೊರಗಿಡಲು ಆಗದೆ, ಎಲ್ಲರಿಗೂ ಒದಗಿಸಿದರೆ ಅದನ್ನು 'ಸಾರ್ವಜನಿಕ ಸರಕುಗಳು' ಎಂದು ಕರೆಯುವರು. ಇದನ್ನು ಸರ್ಕಾರ, ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ಒದಗಿಸಬಹುದು. ಸಾರ್ವಜನಿಕ ಸರಕನ್ನು ಸಮಾಜದ ಎಲ್ಲಾ ವ್ಯಕ್ತಿಗಳು ಅನುಭೋಗಿಸುವರು. ಸಾರ್ವಜನಿಕ ಸರಕಿನ ಪ್ರಮುಖ ಲಕ್ಷಣವೆಂದರೆ ಸಂಯುಕ್ತ ಅನುಭೋಗ, ಮುಂದುವರೆದು ಒಬ್ಬರ ಅನುಭೋಗವು ಮತ್ತೊಬ್ಬರ ಅನುಭೋಗವನ್ನು ಕಡಿಮೆ ಮಾಡುವುದಿಲ್ಲ. ಈ ರೀತಿಯ ಸರಕನ್ನು ಸಾರ್ವಜನಿಕ ಸರಕುಗಳು ಎನ್ನುವರು. ಉದಾಹರಣೆಗೆ: ರಸ್ತೆ ದೀಪದ ಬೆಳಕನ್ನು ಯಾರು ಬೇಕಾದರೂ ಅನುಭೋಗಿಸಬಹುದು ಮತ್ತು ಒಬ್ಬ ವ್ಯಕ್ತಿಯ ಬಳಕೆಯಿಂದ ಇನ್ನೊಬ್ಬನಿಗೆ ಅದರ ಲಭ್ಯತೆ ಕಡಿಮೆಯಾಗುವುದಿಲ್ಲ. ಇತರೆ ಸಾರ್ವಜನಿಕ ಸರಕುಗಳೆಂದರೆ, ಗಾಳಿ, ಸಾರ್ವಜನಿಕ ಉದ್ಯಾನವನ, ರೇಡಿಯೋ ಪ್ರಸಾರ, ರಾಷ್ಟ್ರೀಯ ರಕ್ಷಣೆ ಇತ್ಯಾದಿ.

ಮತ್ತೊಂದೆಡೆ, ಖಾಸಗಿ ಸರಕುಗಳು ಖಾಸಗಿ ವ್ಯಕ್ತಿಗಳ ಒಡತನಕ್ಕೆ ಸೇರಿರುವುದರಿಂದ ಅವರಿಗೆ ಮಾತ್ರ ಅದನ್ನು ಅನುಭೋಗಿಸುವ ಹಕ್ಕಿರುತ್ತದೆ. ಈ ಕಾರಣದಿಂದ ಅವರು ಇತರರು ಖಾಸಗಿ ಸರಕನ್ನು ಅನುಭೋಗಿಸುವುದನ್ನು ನಿರ್ಬಂಧಿಸುವರು. ಉದಾಹರಣೆಗೆ: ಅಂಗಡಿಯಿಂದ ಟಿಪ್ಪಣಿ ಪುಸ್ತಕವನ್ನು ಕೊಂಡುಕೊಂಡಾಗ, ಇತರರಿಗೆ ಲಭ್ಯವಿರುವ ಸರಕಿನ ಪ್ರಮಾಣ ಕಡಿಮೆಯಾಗುವುದು ಮತ್ತು ಕೊಂಡವರು ತಮ್ಮ ಪುಸ್ತಕವನ್ನು ಮಾತ್ರ ಬಳಸಬಹುದು. ನಾವು ಮಾರುಕಟ್ಟೆ ಆಧಾರಿತ ಆರ್ಥಿಕತೆಯಲ್ಲಿ ಅನುಭೋಗಿಸುವ ಹೆಚ್ಚಿನ ಸರಕುಗಳು ಖಾಸಗಿ ಸರಕುಗಳಾಗಿದೆ. ಈ ಸರಕುಗಳು ಖಾಸಗಿ ಮಾಲೀಕತ್ವದಲ್ಲಿ ಇರುವುದರಿಂದ ಅನುಭೋಗಿಗಳ ತೃಪ್ತಿಯ ಮಟ್ಟವನ್ನು ಹೆಚ್ಚಿಸಲು ನೆರವಾಗುತ್ತದೆ. ಕೆಲವು ಖಾಸಗಿ ಸರಕುಗಳೆಂದರೆ ಆಹಾರ, ಬಟ್ಟೆ, ಮನೆ, ಆಸ್ತಿ, ವಾಹನ ಇತ್ಯಾದಿ. ಹಾಗಾಗಿ ಖಾಸಗಿ ಸರಕುಗಳ ಭಾವವು 'ನನ್ನದಾಗಿದ್ದು' ಸಾರ್ವಜನಿಕ ಸರಕುಗಳ ಭಾವವು 'ನಮ್ಮದಾಗಿದೆ'.

ಮಾರುಕಟ್ಟೆ:

ಮಾರುಕಟ್ಟೆಯು ನಮ್ಮೆಲ್ಲರ ಬದುಕಿನ ಭಾಗವಾಗಿದೆ. ಜನರು ಮಾರುಕಟ್ಟೆಗೆ ಸರಕು ಮತ್ತು ಸೇವೆಗಳನ್ನು ಕೊಂಡುಕೊಳ್ಳಲು ಅಥವಾ ಮಾರಾಟ ಮಾಡಲು ಹೋಗುವರು. ಸಾಮಾನ್ಯ ಅರ್ಥದಲ್ಲಿ ಮಾರುಕಟ್ಟೆ ಎಂದರೆ 'ಮಾರಾಟಗಾರರು ಮತ್ತು ಕೊಳ್ಳುವವರು ಸಂಧಿಸುವ ಸ್ಥಳವಾಗಿದೆ'. ಆದರೆ ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆ ಎಂದರೆ 'ವಸ್ತುಗಳನ್ನು ಖರೀದಿಸಲು ಅಥವಾ ಮಾರಾಟ ಮಾಡುವುದಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ಮಾರುವವರು ಮತ್ತು ಕೊಳ್ಳುವವರು ಪರಸ್ಪರ ಸಂಪರ್ಕಕ್ಕೆ ಬರುವ ವ್ಯವಸ್ಥೆಗೊಳಿಸಿದ ಪ್ರದೇಶವಾಗಿದೆ'. ಮಾರುಕಟ್ಟೆಯು ಕೊಳ್ಳುವವರು ಮತ್ತು ಮಾರುವವರು ವ್ಯವಹರಿಸಲು ಇರುವ ವ್ಯವಸ್ಥೆಯಾಗಿದ್ದು, ಇಲ್ಲಿ ನಿರ್ದಿಷ್ಟ ಭೌತಿಕ ಸ್ಥಳ ಅಥವಾ ಪರಸ್ಪರ ಮುಖಾಮುಖಿ ಭೇಟಿಯಾಗುವ ಅಗತ್ಯವಿರುವುದಿಲ್ಲ. ಹಾಗಾಗಿ ಅಂತರ್ಜಾಲದಲ್ಲಿ ಒಂದು ಜೊತೆ ಶೂ ಪಡೆಯಲು ಬೇಡಿಕೆ ಸಲ್ಲಿಸಿದರೆ ಅದನ್ನು ಮಾರುಕಟ್ಟೆ ಎಂದು ಪರಿಗಣಿಸುವರು. ಹೀಗೆ, ಮಾರುವವರು ವಸ್ತುಗಳನ್ನು ಮಾರಲು ಮತ್ತು ಕೊಳ್ಳುವವರು ವಸ್ತುಗಳನ್ನು ಕೊಳ್ಳಲು ಇರುವ ಯಾವುದೇ ವ್ಯವಸ್ಥೆಯು ಮಾರುಕಟ್ಟೆ ಆಗಿದೆ. ಮುಂದುವರೆದು, ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆಯು ದೊಡ್ಡ ಪ್ರದೇಶವಾಗಿದ್ದು ಇದು ನಗರ, ಪ್ರದೇಶ, ದೇಶ ಅಥವಾ ಪ್ರಪಂಚವೂ ಆಗಬಹುದು.

ಮಾರುಕಟ್ಟೆಯ ಲಕ್ಷಣಗಳು:

I. ಕೊಳ್ಳುವವರು ಮತ್ತು ಮಾರುವವರು: ಮಾರುಕಟ್ಟೆಯಲ್ಲಿ ಮಾರಾಟಗಾರ ಮತ್ತು ಕೊಳ್ಳುವವರ ಇರುವಿಕೆ ಅತ್ಯಗತ್ಯವಾಗಿದೆ. ಇವರ ಇರುವಿಕೆ ದೈಹಿಕವಾಗಿ ಅಥವಾ ತಾಂತ್ರಿಕವಾಗಿರಬಹುದು.

II. . ಸರಕು: ಮಾರುಕಟ್ಟೆಯಲ್ಲಿ ವ್ಯವಹರಿಸಲು ಸರಕುಗಳ ಅಗತ್ಯವಿದೆ. ವಿವಿಧ ಸರಕಿನ ವಿವಿಧ ಮಾರುಕಟ್ಟೆಗಳು ಅಸ್ತಿತ್ವದಲ್ಲಿದೆ. ಉದಾಹರಣೆಗೆ: ಬಟ್ಟೆ, ಆಹಾರ, ಧಾನ್ಯ, ಆಭರಣ, ಇತ್ಯಾದಿಗಳಿಗೆ ವಿಭಿನ್ನ ಮಾರುಕಟ್ಟೆಗಳು ಅಸ್ತಿತ್ವದಲ್ಲಿವೆ.

III. ಸ್ಥಳ/ ವ್ಯವಸ್ಥೆ: ಮಾರುಕಟ್ಟೆಯಲ್ಲಿ ಮಾರುವವರು ಮತ್ತು ಕೊಳ್ಳುವವರು ತಮ್ಮ ವ್ಯವಹಾರವನ್ನು ಅಂತಿಮಗೊಳಿಸಲು ಲಭ್ಯವಿರುವ ಸ್ಥಳ ಅಥವಾ ವ್ಯವಸ್ಥೆಯು ಮಹತ್ವದ್ದಾಗಿದೆ. ಈ ವ್ಯವಸ್ಥೆಯು ನೇರವಾದ ಭೌತಿಕ ಸಂಪರ್ಕ ಅಥವಾ ದೂರವಾಣಿ ಅಥವಾ ಅಂತರ್ಜಾಲದ ಮೂಲಕ ಸಂಪರ್ಕವಾಗಿರಬಹುದು.

IV. ಬೆಲೆ: ಮಾರುಕಟ್ಟೆಯಲ್ಲಿ ಸರಕನ್ನು ಮಾರಲು ಮತ್ತು ಕೊಳ್ಳಲು ಸರಕಿಗೆ ಒಂದು ಬೆಲೆ ಇರಬೇಕಾದ ಅಗತ್ಯವಿದೆ.

ಮಾರುಕಟ್ಟೆಯ ವಿಧಗಳು:

ಮಾರುಕಟ್ಟೆಯನ್ನು (1) ಸ್ಥಳ ಮತ್ತು (2) ಪೈಪೋಟಿ ಆಧಾರದಲ್ಲಿ ವರ್ಗೀಕರಿಸಬಹುದು. ಈ ವರ್ಗೀಕರಣವನ್ನು ಚರ್ಚಿಸೋಣ.

ಸ್ಥಳ ಅಥವಾ ಭೌಗೋಳಿಕ ಪ್ರದೇಶದ ಆಧಾರದಲ್ಲಿ ವರ್ಗೀಕರಣ: ಸ್ಥಳದ ಆಧಾರದಲ್ಲಿ ಮಾರುಕಟ್ಟೆಯನ್ನು ಕೆಳಕಂಡಂತೆ ವರ್ಗೀಕರಿಸಬಹುದು.

1. ಸ್ಥಳೀಯ ಮಾರುಕಟ್ಟೆ- ಸ್ಥಳೀಯ ಮಾರುಕಟ್ಟೆಯು ನಿರ್ದಿಷ್ಟ ಪ್ರದೇಶ/ ಸ್ಥಳಕ್ಕೆ ಸೀಮಿತವಾಗಿರುತ್ತದೆ. ಮಾರಾಟಗಾರರು ಮತ್ತು ಕೊಳ್ಳುವವರು ಮಾರುಕಟ್ಟೆಯಲ್ಲಿ ತೀರ ಹತ್ತಿರದ ಸಂಬಂಧವನ್ನು ಹೊಂದಿರುತ್ತಾರೆ. ಸಾಮಾನ್ಯವಾಗಿ ಇಲ್ಲಿ ದಿನನಿತ್ಯದ ಬಳಕೆಯ ಸರಕುಗಳಾದ ಹೂ, ಹಾಲು, ದಿನ ನಿತ್ಯದ ಗೃಹೋಪಯೋಗಿ ಪದಾರ್ಥಗಳನ್ನು ಮಾರುವುದು ಮತ್ತು ಕೊಳ್ಳುವುದು ನಡೆಯುವುದು.

2. ಪ್ರಾದೇಶಿಕ ಮಾರುಕಟ್ಟೆ- ಪ್ರಾದೇಶಿಕ ಮಾರುಕಟ್ಟೆ ಎಂದರೆ ಈ ಮಾರುಕಟ್ಟೆಯು ವಿಶಾಲ ಪ್ರದೇಶದಲ್ಲಿ ವ್ಯಾಪಿಸಿರುತ್ತದೆ. ಪ್ರದೇಶವು ಕೆಲವು ನಗರ, ರಾಜ್ಯದ ಕೆಲ ಭಾಗ ಅಥವಾ ಇಡೀ ರಾಜ್ಯವನ್ನು ಒಳಗೊಂಡಿರುತ್ತದೆ. ಆಹಾರ ಧಾನ್ಯಗಳ ಮಾರುಕಟ್ಟೆಯು ಪ್ರಾದೇಶಿಕ ಮಾರುಕಟ್ಟೆಗೆ ಪ್ರಮುಖ ಉದಾಹರಣೆಯಾಗಿದೆ.

3. ರಾಷ್ಟ್ರೀಯ ಮಾರುಕಟ್ಟೆ- ಇಡೀ ರಾಷ್ಟ್ರವನ್ನು ವ್ಯಾಪಿಸಿರುವ ಮಾರುಕಟ್ಟೆಯನ್ನು ರಾಷ್ಟ್ರೀಯ ಮಾರುಕಟ್ಟೆ ಎನ್ನುವರು. ಹಾಗಾಗಿ ಸರಕು ಮತ್ತು ಸೇವೆಗಳ ಬೇಡಿಕೆ ಮತ್ತು ಪೂರೈಕೆಯು ಇಡೀ ದೇಶವನ್ನು ವ್ಯಾಪಿಸಿರುತ್ತದೆ. ಸರಕುಗಳಾದ ಸೆಣಬು,

ಟೀ, ಕಾಫೀ, ಮಾರುಕಟ್ಟೆಗಳು ದೇಶ ಅಥವಾ ರಾಷ್ಟ್ರೀಯ ಮಾರುಕಟ್ಟೆಗೆ ಪ್ರಮುಖ ಉದಾಹರಣೆಯಾಗಿದೆ.

4. ಅಂತರರಾಷ್ಟ್ರೀಯ ಮಾರುಕಟ್ಟೆ- ಅಂತರರಾಷ್ಟ್ರೀಯ ಮಾರುಕಟ್ಟೆಯು ಒಂದಕ್ಕಿಂತ ಹೆಚ್ಚು ದೇಶದಲ್ಲಿ ವ್ಯಾಪಿಸಿರುತ್ತದೆ. ಈ ಮಾರುಕಟ್ಟೆಯಲ್ಲಿನ ಸರಕು ಮತ್ತು ಸೇವೆಗಳ ಬೇಡಿಕೆ ಮತ್ತು ಪೂರೈಕೆಯು ದೇಶದ ಗಡಿಯನ್ನು ಮೀರಿರುವುದು. ಕಾಫಿ, ಚಿನ್ನ, ಬೆಳ್ಳಿಯ ಸರಕುಗಳ ಮಾರುಕಟ್ಟೆಯು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಪ್ರಮುಖ ಉದಾಹರಣೆಯಾಗಿದೆ.

ಪೈಪೋಟಿಯ ಸ್ವರೂಪದ ಆಧಾರದಲ್ಲಿ ಮಾರುಕಟ್ಟೆ ವರ್ಗೀಕರಣ:

ಪೈಪೋಟಿಯ ಆಧಾರದಲ್ಲಿ ಮಾರುಕಟ್ಟೆಯನ್ನು ಪರಿಪೂರ್ಣ ಪೈಪೋಟಿ ಮಾರುಕಟ್ಟೆ ಮತ್ತು ಅಪರಿಪೂರ್ಣ ಪೈಪೋಟಿ ಮಾರುಕಟ್ಟೆ ಎಂದು ವರ್ಗೀಕರಿಸಲಾಗಿದೆ. ಪ್ರತಿಯೊಂದನ್ನು ಸಂಕ್ಷಿಪ್ತವಾಗಿ ಚರ್ಚಿಸೋಣ.

ಪರಿಪೂರ್ಣ ಪೈಪೋಟಿ ಮಾರುಕಟ್ಟೆ: ಈ ಕೆಳಗಿನ ಷರತ್ತುಗಳನ್ನು ಪೂರೈಸುವ ಮಾರುಕಟ್ಟೆಯನ್ನು ಪರಿಪೂರ್ಣ ಪೈಪೋಟಿ ಮಾರುಕಟ್ಟೆ ಎನ್ನುವರು.

1. ದೊಡ್ಡ ಸಂಖ್ಯೆಯಲ್ಲಿ ಮಾರಾಟಗಾರರು ಮತ್ತು ಕೊಳ್ಳುವವರಿದ್ದು, ಪ್ರತಿಯೊಬ್ಬರು ಒಟ್ಟು ಮಾರುಕಟ್ಟೆಯ ಅತೀ ಸಣ್ಣ ಭಾಗವಾಗಿರುವುದರಿಂದ ಯಾರೊಬ್ಬರೂ ಬೆಲೆ, ಒಟ್ಟು ಬೇಡಿಕೆ ಅಥವಾ ಒಟ್ಟು ಪೂರೈಕೆಯನ್ನು ಪ್ರಭಾವಿಸಲು ಸಾಧ್ಯವಿಲ್ಲ. ಆದ್ದರಿಂದ, ಎಲ್ಲರೂ ಬೆಲೆ ಸ್ವೀಕರಿಸುವವರಾಗಿದ್ದು, ಯಾವುದೇ ಉದ್ಯಮವು ಕೈಗಾರಿಕೆಯನ್ನು ಪ್ರಭಾವಿಸುವಷ್ಟು ದೊಡ್ಡದಾಗಿರುವುದಿಲ್ಲ.
2. ಎಲ್ಲಾ ಉದ್ಯಮಗಳು ಏಕರೂಪ ಸರಕುಗಳನ್ನು ಉತ್ಪಾದಿಸುತ್ತವೆ. ಸರಕುಗಳ ಏಕರೂಪತೆಯ ಕಾರಣದಿಂದಾಗಿ ಮತ್ತು ವೈಯಕ್ತಿಕ ಮಾರಾಟಗಾರ ಅಥವಾ ಕೊಳ್ಳುವವನು ಮಾರುಕಟ್ಟೆ ಬೆಲೆಯನ್ನು ಪ್ರಭಾವಿಸಲು ಸಾಧ್ಯವಾಗದ ಕಾರಣದಿಂದಾಗಿ, ಮಾರುಕಟ್ಟೆಯಲ್ಲಿ ಒಂದೇ ಬೆಲೆ ಅಸ್ತಿತ್ವದಲ್ಲಿದ್ದು ಎಲ್ಲಾ ಮಾರಾಟಗಾರರು ಮತ್ತು ಕೊಳ್ಳುವವರು ಅದೇ ಬೆಲೆಯಲ್ಲಿ ವ್ಯವಹರಿಸುವರು.
3. ಮುಕ್ತ ಪ್ರವೇಶ ಮತ್ತು ನಿರ್ಗಮನಕ್ಕೆ ಅವಕಾಶವಿರುತ್ತದೆ.
4. ಗ್ರಾಹಕರಿಗೆ ಮಾರುಕಟ್ಟೆಯಲ್ಲಿನ ಸರಕುಗಳ ಬಗ್ಗೆ ಮತ್ತು ಮಾರಾಟದ ಬೆಲೆ ಕುರಿತು ಸಂಪೂರ್ಣ ಮಾಹಿತಿ ಇರುತ್ತದೆ.

ಕೃಷಿ ಸರಕಿನ ಮಾರುಕಟ್ಟೆಯ ನೆರವಿನಿಂದ ಪರಿಪೂರ್ಣ ಪೈಪೋಟಿ ಮಾರುಕಟ್ಟೆಯನ್ನು ಅರ್ಥ ಮಾಡಿಕೊಳ್ಳಬಹುದು. ಆಲೂಗಡ್ಡೆ, ತರಕಾರಿ ಮಾರುಕಟ್ಟೆಯಲ್ಲಿ ಹಲವು ಮಾರಾಟಗಾರರು ಮತ್ತು ಗ್ರಾಹಕರಿದ್ದಾರೆಂದು ಕಲ್ಪಿಸಿಕೊಳ್ಳಿರಿ, ಒಬ್ಬ ವ್ಯಕ್ತಿಯು ಒಂದು ಕೆ. ಜಿ. ಆಲೂಗಡ್ಡೆ ಕೊಂಡುಕೊಳ್ಳಲು ಮಾರುಕಟ್ಟೆಗೆ ಹೋಗುವನು. ವ್ಯಕ್ತಿಯು A ಮಾರಾಟಗಾರನ ಹತ್ತಿರ ಹೋಗಿ ಬೆಲೆಯನ್ನು ವಿಚಾರಿಸಿದಾಗ ರೂ. 30 ಪ್ರತಿ ಕೆ. ಜಿ. ಗೆ ಎಂದು ತಿಳಿದು ಬರುವುದು. ಹಾಗೆಯೇ, B ಮಾರಾಟಗಾರನ ಹತ್ತಿರ ಹೋದಾಗಲು

ಅವನೂ ರೂ. 30 ಬೆಲೆ ಎನ್ನುವನು. ಅದೇ ರೀತಿ ವ್ಯಕ್ತಿಯು C ಮತ್ತು D ಮಾರುವವನ ಹತ್ತಿರ ವಿಚಾರಿಸಿದಾಗ ಅವರು ರೂ. 30 ಪ್ರತಿ ಕೆ. ಜಿ. ಗೆ ಎನ್ನುವರು. ಇಲ್ಲಿ ನಿರ್ದಿಷ್ಟ ಬೇಡಿಕೆಗೆ ಎಲ್ಲಾ ಮಾರಾಟಗಾರರ ಹತ್ತಿರ ಒಂದೇ ಬೆಲೆ ಇರುವುದು. ಆದ್ದರಿಂದ, ಈ ಮಾರುಕಟ್ಟೆಯು ಪರಿಪೂರ್ಣ ಪೈಪೋಟಿ ಮಾರುಕಟ್ಟೆಯ ಲಕ್ಷಣವನ್ನು ಹೊಂದಿರುತ್ತದೆ.

ಅಪರಿಪೂರ್ಣ ಪೈಪೋಟಿ ಮಾರುಕಟ್ಟೆ: ಪರಿಪೂರ್ಣ ಪೈಪೋಟಿ ಮಾರುಕಟ್ಟೆಯ ಒಂದು ಅಥವಾ ಹೆಚ್ಚು ಷರತ್ತುಗಳು ಉಲ್ಲಂಘನೆಯಾಗಿರುವ ಮಾರುಕಟ್ಟೆಯನ್ನು ಅಪರಿಪೂರ್ಣ ಪೈಪೋಟಿ ಮಾರುಕಟ್ಟೆ ಎನ್ನುವರು. ಸ್ವಾಭಾವಿಕವಾಗಿ ಪ್ರಸ್ತುತ ಅಸ್ತಿತ್ವದಲ್ಲಿರುವ ಮಾರುಕಟ್ಟೆಯ ಸಂರಚನೆಯಲ್ಲಿ ಇದು ಸಾಮಾನ್ಯವಾದುದಾಗಿದೆ. ಈ ಮಾರುಕಟ್ಟೆಯ ಷರತ್ತುಗಳೆಂದರೆ;

1. ಮಾರಾಟಗಾರರ ಸಂಖ್ಯೆಯು ಒಂದು, ಕೆಲವು ಅಥವಾ ಹಲವರು ಆಗಿರಬಹುದು.
2. ಮಾರಾಟವಾಗುವ ಸರಕುಗಳು ವೈವಿಧ್ಯಮಯ ಸ್ವರೂಪ ಹೊಂದಿರುತ್ತವೆ.
3. ಉದ್ಯಮಗಳು ಉತ್ಪಾದಿಸುವ ಸರಕು ಮತ್ತು ಸೇವೆಯ ಬೆಲೆಯ ಮೇಲೆ ಗಮನಾರ್ಹವಾದ ನಿಯಂತ್ರಣವನ್ನು ಹೊಂದಿರುತ್ತವೆ.
4. ಉದ್ಯಮಗಳು ಜಾಹೀರಾತು ಮತ್ತು ಮಾರಾಟದ ತಂತ್ರಗಳ ಮೂಲಕ ಗ್ರಾಹಕರ ನಡವಳಿಕೆಯನ್ನು ಪ್ರಭಾವಿಸುತ್ತಾರೆ.
5. ಅಪರಿಪೂರ್ಣ ಮಾರುಕಟ್ಟೆ ಸಂರಚನೆಯಲ್ಲಿ ಉದ್ಯಮಗಳ ಪ್ರವೇಶ ಮತ್ತು ನಿರ್ಗಮನಕ್ಕೆ ನಿರ್ಬಂಧಗಳಿರುತ್ತವೆ.
6. ಈ ಮಾರುಕಟ್ಟೆಯಲ್ಲಿ ಕೆಲ ಗ್ರಾಹಕರು ಅಥವಾ ಮಾರಾಟಗಾರರು ಅಥವಾ ಇಬ್ಬರಿಗೂ ಮಾರುಕಟ್ಟೆಯಲ್ಲಿ ವ್ಯವಹಾರವಾಗುತ್ತಿರುವ ಮಾರುಕಟ್ಟೆ ಬೆಲೆಯ ಜ್ಞಾನ ಇರುವುದಿಲ್ಲ. ಅಪರಿಪೂರ್ಣ ಪೈಪೋಟಿ ಮಾರುಕಟ್ಟೆಗೆ ಉದಾಹರಣೆಗಳೆಂದರೆ ದೂರಸಂಪರ್ಕ, ಮೋಟಾರುಗಾಡಿ, ಸಾಬೂನು, ಸೌಂದರ್ಯವರ್ಧಕ, ಇತ್ಯಾದಿಗಳ ಉತ್ಪಾದಕರಾಗಿದ್ದಾರೆ. ಅಪರಿಪೂರ್ಣ ಪೈಪೋಟಿ ಮಾರುಕಟ್ಟೆಯ ವಿವಿಧ ರೂಪಗಳು ಅಥವಾ ವಿಧಗಳೆಂದರೆ:

1. **ಏಕಸ್ವಾಮ್ಯ (ಮಾನೊಪಲಿ):** ಏಕಸ್ವಾಮ್ಯ ಮಾರುಕಟ್ಟೆ ಸಂರಚನೆಯ ಪ್ರಮುಖ ಲಕ್ಷಣವೆಂದರೆ, ಒಬ್ಬನೇ ಮಾರಾಟಗಾರ, ವಿಭಿನ್ನವಾದ ಸರಕನ್ನು ಮಾರಾಟ ಮಾಡುತ್ತಿರುವ ಸನ್ನಿವೇಶವಾಗಿದೆ. 'ಏಕಸ್ವಾಮ್ಯ' ಎಂಬ ಪದವು ಇಂಗ್ಲೀಷ್ ನ 'ಮೊನೊಪಲಿ' ಎಂಬ ಕನ್ನಡದ ಅನುವಾದವಾಗಿದ್ದು, ಮೊನೊ ಎಂದರೆ 'ಒಬ್ಬ' ಮತ್ತು ಪಲಿ ಎಂದರೆ 'ಮಾರಾಟ' ಆಗಿದೆ. ಏಕಸ್ವಾಮ್ಯ ಮಾರುಕಟ್ಟೆಯಲ್ಲಿ ಮಾರಾಟಗಾರನು ಯಾವುದೇ ಪೈಪೋಟಿಯನ್ನು ಎದುರಿಸುವುದಿಲ್ಲ, ಮಾರಾಟಗಾರನಾಗಿ ಅವನು ಮಾರುತ್ತಿರುವ ಸರಕಿಗೆ ಅವನೊಬ್ಬನೇ ಮಾರಾಟಗಾರನಾಗಿದ್ದು ಆ ಸರಕಿಗೆ ಸಮೀಪದ ಬದಲಿ ವಸ್ತುಗಳು ಲಭ್ಯವಿರುವುದಿಲ್ಲ. ಮಾರಾಟಗಾರನು ಸರಕಿನ ಬೆಲೆಯನ್ನು ನಿರ್ಧರಿಸುವ ಅಧಿಕಾರ ಹೊಂದಿರುವನು. ಅಧಿಕ ವೆಚ್ಚ ಅಥವಾ ಸರ್ಕಾರದ ಪರವಾನಿಗೆ, ಸಂಪನ್ಮೂಲದ ಮೇಲಿನ ಮಾಲೀಕತ್ವ, ಗ್ರಂಥಸ್ವಾಮ್ಯದ ಹಕ್ಕು ಮತ್ತು ಸ್ವಾಮ್ಯ

ಸನ್ನದ್ದುಗಳಿಂದ ಹೊಸ ಉದ್ಯಮಗಳ ಆಗಮನವನ್ನು ನಿರ್ಬಂಧಿಸಲಾಗುತ್ತದೆ. ಭಾರತದ ರೈಲ್ವೆಯ ಮೇಲೆ ಸರ್ಕಾರಕ್ಕೆ ನಿಯಂತ್ರಣ ಇರುವುದರಿಂದ ಇದು ಏಕಸ್ವಾಮ್ಯ ಮಾರುಕಟ್ಟೆಗೆ ಉದಾಹರಣೆಯಾಗುತ್ತದೆ.

2. **ಕೆಲಜನ ಸ್ವಾಮ್ಯ (ಆಲಿಗೋಪಲಿ):** ಕೆಲಜನ ಸ್ವಾಮ್ಯ ಮಾರುಕಟ್ಟೆ ಸಂರಚನೆಯಲ್ಲಿ ಕೆಲವೇ ಜನ ಉತ್ಪಾದಕರು ಅಥವಾ ಮಾರಾಟಗಾರರಿದ್ದು ಒಟ್ಟಾರೆ ಮಾರುಕಟ್ಟೆಯನ್ನು ನಿಯಂತ್ರಿಸುತ್ತಿರುತ್ತಾರೆ. 'ಆಲಿಗೋ' ಎಂದರೆ ಕೆಲವು ಎಂದರ್ಥ. ಇಲ್ಲಿ ಮಾರಾಟ ಮಾಡುವ ಸರಕು ಏಕರೂಪ ಅಥವಾ ವೈವಿಧ್ಯಮಯವಾಗಿದ್ದು, ಇತರೆ ಮಾರಾಟಗಾರರ ಆಗಮನದ ಮೇಲೆ ನಿರ್ಬಂಧವಿರುತ್ತದೆ. ಉತ್ಪಾದಕರ ಸಂಖ್ಯೆಯು ಮಿತವಾಗಿರುವುದರಿಂದ, ಒಂದು ಉದ್ಯಮದ ಬೆಲೆ ಮತ್ತು ಉತ್ಪನ್ನದಲ್ಲಿನ ಬದಲಾವಣೆಯು ಪ್ರತಿಸ್ಪರ್ಧಿ ಉದ್ಯಮದ ಲಾಭ ಮತ್ತು ಉತ್ಪನ್ನದ ಮೇಲೆ ಪ್ರಭಾವ ಬೀರುತ್ತದೆ. ತಂಪು ಪಾನೀಯ ಉದ್ಯಮಗಳು, ವಾಯುಯಾನ, ಹಾಲಿನ ಉದ್ಯಮಗಳು, ಉಕ್ಕು, ಸಿಮೆಂಟ್ ಮತ್ತು ಮೋಟಾರು ಗಾಡಿಯ ಉತ್ಪಾದಕರು ಕೆಲಜನ ಸ್ವಾಮ್ಯದ ಮಾರುಕಟ್ಟೆಗೆ ಪ್ರಮುಖ ಉದಾಹರಣೆಗಳಾಗಿವೆ.

3. **ಸ್ವಾಮ್ಯಯುತ ಪೈಪೋಟಿ (ಮನೊಪರಿಸ್ಟಿಕ್ ಕಾಂಪಿಟೇಷನ್):** ಸ್ವಾಮ್ಯಯುತ ಪೈಪೋಟಿ ಮಾರುಕಟ್ಟೆ ಸಂರಚನೆಯು ಕೆಲವು ಮಾರಾಟಗಾರರನ್ನು ಹೊಂದಿದೆ. ಈ ಮಾರುಕಟ್ಟೆಯಲ್ಲಿ ಮಾರಲಾಗುವ ಸರಕುಗಳು ಸಮೀಪದ ಬದಲಿ ವಸ್ತುಗಳಾಗಿದ್ದರೂ, ಅವು ಬೇರೆಯ ಸರಕುಗಳಿಗಿಂತ ಸ್ವಲ್ಪ ವೈವಿಧ್ಯತೆಯನ್ನು ಹೊಂದಿರುವವು. ಈ ಮಾರುಕಟ್ಟೆಯಲ್ಲಿ ಉದ್ಯಮಗಳ ನಡುವಿನ ಪೈಪೋಟಿಯು ಸರಕಿನ ಬೆಲೆ ಮತ್ತು ಇತರೆ ಅಂಶಗಳನ್ನು ಅವಲಂಬಿಸಿರುತ್ತದೆ. ಉದ್ಯಮಗಳ ನಡುವೆ ಮುಕ್ತ ಪ್ರವೇಶ ಮತ್ತು ನಿರ್ಗಮನಕ್ಕೆ ಅವಕಾಶವಿರುವುದು. ವಸ್ತು ವೈವಿಧ್ಯತೆಯ ಜೊತೆಗೆ, ಮಾರಾಟಗಾರರು ಅಬ್ಬರದ ಪ್ರಚಾರ/ ಜಾಹೀರಾತನ್ನು ಕೈಗೊಂಡು ಮಾರುಕಟ್ಟೆಯಲ್ಲಿ ಮಾರಾಟವನ್ನು ಹೆಚ್ಚಿಸಿಕೊಳ್ಳುವರು. ಈ ರೀತಿಯ ಮಾರುಕಟ್ಟೆಗೆ ಉದಾರಣೆಯೆಂದರೆ ಮೊಬೈಲ್, ಸೌಂದರ್ಯವರ್ಧಕ, ಮಾರ್ಜಕ, ಟೂಥ್‌ಪೇಸ್ಟ್ ರೆಸ್ಟೋರೆಂಟ್, ಇತ್ಯಾದಿಗಳಾಗಿವೆ.

4. **ಒಬ್ಬ ಕೊಳ್ಳುವ ಮಾರುಕಟ್ಟೆ (ಮೊನೊಪ್‌ಸೋನಿ):** 'ಸೋನಿ' ಎಂದರೆ 'ಕೊಂಡುಕೊಳ್ಳು' ಎಂದರ್ಥ. ಹಾಗಾಗಿ ಮೊನೊಪ್‌ಸೋನಿ ಎಂದರೆ 'ಒಬ್ಬನೇ ಕೊಳ್ಳುವವ ಮತ್ತು ಹಲವು ಮಾರಾಟಗಾರರು ಅಸ್ತಿತ್ವದಲ್ಲಿರುವ ಮಾರುಕಟ್ಟೆಯಾಗಿದೆ'. ಈ ಮಾರುಕಟ್ಟೆಯು ಏಕಸ್ವಾಮ್ಯ ಮಾರುಕಟ್ಟೆಗೆ ಹೆಚ್ಚು ಹತ್ತಿರವಾಗಿದ್ದು, ಇಲ್ಲಿ ದೊಡ್ಡ ಕೊಂಡುಕೊಳ್ಳುವವ/ ಗ್ರಾಹಕನು ಮಾರುಕಟ್ಟೆಯ ದೊಡ್ಡ ಭಾಗವನ್ನು ನಿಯಂತ್ರಿಸುವನು. ಮೊನೊಪ್‌ಸೋನಿಗೆ ಕೆಲವು ಉದಾಹರಣೆಗಳೆಂದರೆ (೧) ಸೂಪರ್ ಮಾರುಕಟ್ಟೆಗಳು ತರಕಾರಿ ಮತ್ತು ಹಣ್ಣುಗಳನ್ನು ರೈತರಿಂದ ಕೊಳ್ಳುವಲ್ಲಿ ಮೊನೊಪ್‌ಸೋನಿ ಅಧಿಕಾರವನ್ನು ಹೊಂದಿದೆ. (೨) ಭಾರತೀಯ ರೈಲ್ವೆಯು ಭಾರತದಲ್ಲಿ ಉತ್ಪಾದಿಸುವ ರೈಲ್ವೆ

ಭೋಗಿಗಳ ದೊಡ್ಡ ಕೊಳ್ಳುವವನಾಗಿದೆ. (೩) ಸರ್ಕಾರವು ದಾದಿಯರು ಮತ್ತು ಪೋಲಿಸ್‌ರನ್ನು ನೇಮಕ ಮಾಡಿಕೊಳ್ಳುವುದು.

ಅಭ್ಯಾಸ

I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ನಮ್ಮ ಬಯಕೆಗಳನ್ನು ನೇರವಾಗಿ ತೃಪ್ತಿಗೊಳಿಸಬಹುದಾದ ಸರಕುಗಳನ್ನು ________ಸರಕುಗಳು ಎಂದು ಕರೆಯುತ್ತಾರೆ.

   ಅ. ಬಾಳಿಕೆ ಬರುವ
   ಆ. ಉಚಿತ
   ಇ. ಅನುಭೋಗಿ
   ಈ. ಖಾಸಗಿ

2. ಸಾರ್ವಜನಿಕ ಸರಕುಗಳು ________ ಸಮಸ್ಯೆಗೂ ಕಾರಣವಾಗಬಹುದು.

   ಅ. ಪಾವತಿಸಿದ ಸವಾರ
   ಆ. ಉಚಿತ ಸವಾರಿ
   ಇ. ನಿರ್ಬಂಧಿತ ಸವಾರ
   ಈ. ಮೇಲಿನ ಯಾವುದೂ ಅಲ್ಲ

3. ಮಾರುಕಟ್ಟೆಯು ನ್ನು ________ ಒಳಗೊಂಡಿರುವುದು.

   ಅ. ಮಾರುವವರು ಮತ್ತು ಕೊಳ್ಳುವವರನ್ನು
   ಆ. ಸರಕುಗಳನ್ನು
   ಇ. ಸ್ಥಳವನ್ನು
   ಈ. ಮೇಲಿನ ಎಲ್ಲವೂ

4. ಕೇವಲ ಒಬ್ಬ ಕೊಳ್ಳುವವನು ಮತ್ತು ಹಲವು ಮಾರಾಟಗಾರರು ಇರುವ ಮಾರುಕಟ್ಟೆಯನ್ನು________ ಮಾರುಕಟ್ಟೆ ಎನ್ನುವರು.

   ಅ. ಏಕಸಾಮ್ಯ
   ಆ. ಕೆಲಜನ ಸಾಮ್ಯ
   ಇ. ಏಕ ಕೊಳ್ಳುವ ಸಾಮ್ಯ
   ಈ. ಏಕ ಸ್ವಾಮ್ಯಯುತ

5. ಒಂದು ಮಾರುಕಟ್ಟೆಯಲ್ಲಿ ಎಲ್ಲಾ ಉದ್ಯಮಗಳು ಏಕರೂಪದ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದರೆ ಅದನ್ನು ________ ಮಾರುಕಟ್ಟೆ ಆಗಿದೆ.

   ಅ. ಅಪರಿಪೂರ್ಣ ಪೈಪೋಟಿ
   ಆ. ಏಕಸಾಮ್ಯ
   ಇ. ಪರಿಪೂರ್ಣ ಪೈಪೋಟಿ

ಈ. ಯಾವುದೂ ಅಲ್ಲ

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಉಚಿತ ಸರಕುಗಳು ________ ಉಚಿತ ಕೊಡುಗೆಗಳಾಗಿವೆ.
2. ಸ್ಥಳೀಯ ಮಾರುಕಟ್ಟೆಯು ________ ಪ್ರದೇಶಕ್ಕೆ ಸೀಮಿತವಾಗಿದೆ.
3. ________ ನ್ನು ಮಾರುಕಟ್ಟೆಯಲ್ಲಿ ನಿರ್ವಹಿಸಲಾಗುತ್ತದೆ.
4. 'ಆಲಿಗೋ' ಎಂದರೆ ________
5. ________ ಮಾರುಕಟ್ಟೆಯಲ್ಲಿ ಉಚಿತ ಪ್ರವೇಶ ಮತ್ತು ನಿರ್ಗಮನಕ್ಕೆ ಯಾವುದೇ ಅಡೆತಡೆಗಳಿರುವುದಿಲ್ಲ.

III. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಸರಕು ಎಂದರೇನು?
2. ಬಾಳಿಕೆ ಬರುವ ಸರಕಿಗೆ ಎರಡು ಉದಾಹರಣೆ ಕೊಡಿ.
3. ಮಧ್ಯವರ್ತಿ ಸರಕು ಎಂದರೇನು?
4. ಅಂತಿಮ ಸರಕು ಎಂದರೇನು?
5. ಏಕಸ್ವಾಮ್ಯ ಮಾರುಕಟ್ಟೆಗೆ ಒಂದು ಉದಾಹರಣೆ ಕೊಡಿ.

IV. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಮನುಷ್ಯನ ಜೀವನದಲ್ಲಿ ಸರಕುಗಳ ಪಾತ್ರವನ್ನು ಹೆಸರಿಸಿ.
2. ಉಚಿತ ಸರಕು ಮತ್ತು ಆರ್ಥಿಕ ಸರಕುಗಳ ನಡುವಿನ ವ್ಯತ್ಯಾಸ ತಿಳಿಸಿ.
3. ಮಾರುಕಟ್ಟೆಯ ವಿವಿಧ ಲಕ್ಷಣಗಳನ್ನು ಹೆಸರಿಸಿ.
4. ಸ್ಥಳಿಯ ಮಾರುಕಟ್ಟೆ ಮತ್ತು ಪ್ರಾದೇಶಿಕ ಮಾರುಕಟ್ಟೆ ನಡುವಿನ ವ್ಯತ್ಯಾಸ ತಿಳಿಸಿರಿ.
5. ಕೆಲಜನ ಸ್ವಾಮ್ಯ ಮಾರುಕಟ್ಟೆ ಎಂದರೇನು?

V. ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯದಲ್ಲಿ ಉತ್ತರಿಸಿ.

1. ಸರಕುಗಳ ವಿವಿಧ ವಿಧಗಳನ್ನು ಚರ್ಚಿಸಿರಿ.
2. ಸಾರ್ವಜನಿಕ ಮತ್ತು ಖಾಸಗಿ ಸರಕುಗಳ ಬಗ್ಗೆ ಟಿಪ್ಪಣಿ ಬರೆಯಿರಿ.
3. ಸ್ಥಳದ ಆಧಾರದ ಮೇಲಿನ ಮಾರುಕಟ್ಟೆಯ ವರ್ಗೀಕರಣವನ್ನು ವಿವರಿಸಿ.
4. ಮಾರುಕಟ್ಟೆ ಎಂದರೇನು? ಪರಿಪೂರ್ಣ ಪೈಪೋಟಿ ಮಾರುಕಟ್ಟೆಯ ಸಂರಚನೆಯನ್ನು
5. ಅಪರಿಪೂರ್ಣ ಪೈಪೋಟಿ ಮಾರುಕಟ್ಟೆಯನ್ನು ಕುರಿತು ಟಿಪ್ಪಣಿ ಬರೆಯಿರಿ.

ಯೋಜನಾ ಕಾರ್ಯ:

1. ನೀವು ದಿನನಿತ್ಯ ಬಳಸುವಂತಹ ಸಾರ್ವಜನಿಕ ಮತ್ತು ಖಾಸಗಿ ಸರಕುಗಳನ್ನು ಪಟ್ಟಿಮಾಡಿರಿ.

2. ನಿಮ್ಮ ಜಿಲ್ಲೆಯಲ್ಲಿರುವ ವಿವಿಧ ಮಾರುಕಟ್ಟೆಯ ಬಗ್ಗೆ ಮಾಹಿತಿ ಸಂಗ್ರಹಿಸಿ ಬರೆಯಿರಿ.